ದುಡಿವ ಜನರ ಪ್ರಾಣ ಮಿತ್ರ


ಸಂಪುಟ 27 ಸಂಚಿಕೆ 49 ಡಿಸೆಂಬರ್ 04, 2005 ಬೆಲೆ ರೂ. 3.00



ಸಾಮಾಜಿಕ ನ್ಯಾಯ
ಬೌದ್ಧಿಕ
ಸ್ವಾವಲಂಬನೆಗಾಗಿ


ವಿದ್ಯಾರ್ಥಿ ಆಂದೋಲನದ ಸಂಕಲ್ಪ

ದೇವನಹಳ್ಳಿ ವಿಮಾನ ನಿಲ್ದಾಣ : ಹಗರಣದ ವಾಸನೆ?



'ಭಾನಾಮತಿ' ಎಂಬೋ ಕಗ್ಗೊಲೆ

- ಒಕ್ಕಲೆಬ್ಬಿಸುವುದರ ವಿರುದ್ಧ ಆದಿವಾಸಿಗಳ ಹಕ್ಕೊತ್ತಾಯ
- ಬೆಳಗಾವಿ ಪಾಲಿಕೆ ರದ್ದು : ಸರ್ವಾಧಿಕಾರಿ ಕ್ರಮ
- ಲ್ಯಾಟಿನ್ ಅಮೆರಿಕಾದಲ್ಲಿ ಬುಷ್‌ಗೆ ಎದಿರೇಟು



ಅಣ್ಣ ತಂಗಿ ಗೋಳು

‘ಭಾನಾಮತಿ’ ಎಂಬ ಮತಿಹೀನ ಪಾತಕಗಳೂ ಕಣ್ಮುಚ್ಚಿ ಕುಳಿತಿರುವ ಖಾಕಿಗಳು

ಹಾಲುಗಲ್ಲದ ಹಸುಗೂಸುಗಳನ್ನು ಮುಗ್ಧ ಹೆಣ್ಣು ಮಕ್ಕಳನ್ನು ಭಾನಾಮತಿಯ ಹೆಸರಿನಲ್ಲಿ ಅತ್ಯಂತ ಕ್ರೂರವಾಗಿ ಕಗ್ಗೊಲೆಗೈಯುತ್ತಿರುವ ಪ್ರಕರಣಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುತ್ತಿದ್ದರೂ ಈ ಬಗ್ಗೆ ಕ್ರಮ ಕೈಗೊಳ್ಳಬೇಕಾದ ಪೊಲೀಸರು ಅಸೀಮ ನಿರ್ಲಕ್ಷ್ಯ ತೋರುತ್ತಿದ್ದರೆ, ಅಧಿಕಾರಸ್ಥ ರಾಜಕಾರಣಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಭಾರತ ಜ್ಞಾನ ವಿಜ್ಞಾನ ಸಮಿತಿ (ಬಿಜಿವಿಎಸ್) ಮತ್ತು ಸಮುದಾಯದಂತಹ ಪ್ರಗತಿಪರ ಸಂಘಟನೆಗಳು ಈ ಬಗ್ಗೆ ಅಧ್ಯಯನ ನಡೆಸಿ ಕ್ರಮಕ್ಕೆ ಆಗ್ರಹಿಸಿದ್ದಾರೆ. ತನಿಖಾ ವರದಿಯ ವಿವರ ಇಲ್ಲಿದೆ.

ಕೆಳೆದ ವರ್ಷ ಗುಲಬರ್ಗಾ ತಾಲೂಕಿನ ಹೊನ್ನಕಿರಣಗಿ ಗ್ರಾಮದಲ್ಲಿ ನಿಧಿ ಆಸೆಗಾಗಿ 6 ವರ್ಷದ ಬಾಲಕಿಯನ್ನು ಬಲಿ ತೆಗೆದುಕೊಂಡಿರುವುದು. ಈ ವರ್ಷ ಆಳಂದ ತಾಲೂಕಿನ ಮಟಕಿ ಗ್ರಾಮದಲ್ಲಿ ಭಾನಾಮತಿ ಹೆಸರಿನಲ್ಲಿ ರಸಾಯನಿಕ ಬಳಸಿ 11 ವರ್ಷದ ಹುಡುಗಿಯನ್ನು ಸುಟ್ಟು ಹಾಕಿರುವುದು. ಅದೇ ತಾಲೂಕಿನ ತಡೋಳಾ ಗ್ರಾಮದಲ್ಲಿ ಭಾನಾಮತಿ ಹೆಸರಿನಲ್ಲಿ ಹಲವಾರು ಕೋಳಿ ಮತ್ತು ಕುರಿಗಳನ್ನು ಸಾಯಿಸಿರುವುದು. ಮತ್ತೆ ಇತ್ತೀಚೆಗೆ ಖಜೂರಿ ಗ್ರಾಮದಲ್ಲಿ 6 ವರ್ಷದ ಹುಡುಗಿಯನ್ನು ಭಾನಾಮತಿಯ ಪ್ರಯೋಗದ ಸಲುವಾಗಿ ಬರ್ಬರವಾಗಿ ಹತ್ಯೆಗೈದಿರುವುದು. ಅದರಲ್ಲಿಯೂ ಸ್ವಾತಂತ್ರ್ಯಗಳಿಸಿ 58 ವರ್ಷಗಳ ನಂತರವೂ, 21ನೇ ಶತಮಾನ ಪ್ರವೇಶಿಸಿದ ನಂತರವೂ ನಮ್ಮ ನಾಡಿನಲ್ಲಿ ಇಂತಹ ಕ್ರೂರ ಆಚರಣೆಗಳು ಚಾಲ್ತಿಯಲ್ಲಿರುವುದು ಅತ್ಯಂತ ಆಘಾತಕಾರಿ ವಿಚಾರವಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಸಾವಿಗೀಡಾದವರೆಲ್ಲಾ ಬಾಲಕಿಯರು ಹಾಗೂ ಕೃಷಿ ಕೂಲಿಕಾರ್ಮಿಕರ ಮಕ್ಕಳೇ ಆಗಿದ್ದಾರೆ ಎಂಬುದೂ ಸಹ ಇಲ್ಲಿ ಗಮನಾರ್ಹವಾದ ವಿಚಾರವಾಗಿದೆ. ಪೊಲೀಸ್ ಇಲಾಖೆಯವರು ಪ್ರಕರಣಗಳನ್ನು ದಾಖಲಿಸಿಕೊಂಡಿದ್ದರೂ ಇಲ್ಲಿಯವರೆಗೆ ಯಾರೊಬ್ಬರನ್ನೂ ಬಂಧಿಸಿಲ್ಲ! ಭಾನಾಮತಿ ಹೆಸರಿನಲ್ಲಿ ಸರಣಿ ಕೊಲೆ ನಡೆದಿರುವುದರ ಬಗ್ಗೆ ಜನಪ್ರತಿನಿದಿಗಳಾದ ಶಾಸಕರು, ಅಧಿಕಾರಿಗಳು ಅಷ್ಟಾಗಿ ತಲೆ ಕೆಡಿಸಿಕೊಂಡಿಲ್ಲ.

ಆದರೆ ಭಾರತ ಜ್ಞಾನ ವಿಜ್ಞಾನ ಸಮಿತಿ ಗುಲಬರ್ಗಾ ಶಾಖೆಯ ಅಧ್ಯಕ್ಷರಾದ ಪ್ರೊ.ಲಿಂಗಪ್ಪಾ, ಕಾರ್ಯದರ್ಶಿ ಶಿವಶರಣ ಮುಳೇಗಾಂವ, ಸಮುದಾಯ ಗುಲ್ಬರ್ಗಾ ಜಿಲ್ಲಾ ಘಟಕದ ಅಧ್ಯಕ್ಷರಾದ ಶಂಕ್ರಯ್ಯಾ ಘಂಟಿ ಕಾರ್ಯದರ್ಶಿ ಶ್ರೀಶೈಲ ಘೋಳಿ ಮತ್ತು ವಕೀಲರಾದ ಸುಭಾಷ ಬಾಣೆಯವರನ್ನೊಳಗೊಂಡ ನಿಯೋಗ ಇತ್ತೀಚೆಗೆ ಭಾನಾಮತಿ ಪ್ರಕರಣಗಳು ನಡೆದ ಗ್ರಾಮಕ್ಕೆ ಭೇಟಿ ಮಾಡಿ ಕೆಲವು ಮಾಹಿತಿಗಳನ್ನು ಸಂಗ್ರಹಿಸಿದೆ.

ಹೊನ್ನಕಿರಣಗಿಯಲ್ಲಿ ನಿಧಿ ಆಸೆಗಾಗಿ 6 ವರ್ಷದ ಬಾಲಕಿಯನ್ನು ಕೂದಲಿನ ಸಮೇತ ತಲೆಯ ಚರ್ಮ ಸುಲಿದುಕೊಂಡಿದ್ದಾರೆ. ಎರಡೂ ಕೈಗಳನ್ನೂ ಕತ್ತರಿಸಿಕೊಂಡಿದ್ದಾರೆ. ಬೆನ್ನಿನ ಚರ್ಮ ಉಲ್ಟಾ ಸುಲಿಯಲಾಗಿದೆ. ಊರ ಹೊರಗಿನ ಹಳ್ಳದಲ್ಲಿ ಮಗುವಿನ ಹೆಣ ಬಿಸಾಕಿದ್ದಾರೆ. ಮಟಕಿಯಲ್ಲಿ ಬಸಯ್ಯಾಸ್ವಾಮಿ ಎಂಬುವರ 11 ವರ್ಷದ ಬಾಲಕಿಯನ್ನು ಅವರ ಸೋದರ ಸಂಬಂಧಿ ಶಿವಮ್ಮ ಎಂಬುವಳೇ ಭಾನಾಮತಿ ಮಾಡಲು ಹೋಗಿ ರಾಸಾಯನಿಕ ಹಾಕಿ ಸುಟ್ಟಿದ್ದಾಳೆ. ಅಷ್ಟೇ ಅಲ್ಲದೇ ಅವಳ ಶವಸಂಸ್ಕಾರಕ್ಕೆಂದು ಬಂದ ಅವಳ ಅಕ್ಕಳನ್ನೂ ಅದೇ ರಸಾಯನಿಕ ಬಳಸಿ ಸುಡಲು ಪ್ರಯತ್ನಿಸಿರುವುದೂ ನಡೆದಿದೆ. ನಂತರ ಅವಳನ್ನು ಆಸ್ಪತ್ರೆಯಲ್ಲಿ ಬದುಕಿಸಿಕೊಂಡಿದ್ದಾರೆ. ಈ ಶಿವಮ್ಮಳು ನಿರಗುಡಿ ಮುತ್ಯಾನ ಪಟ್ಟದ ಶಿಷ್ಯೆಯಾಗಿದ್ದು ಗ್ರಾಮದ ಪೂಜಾರಿಯ ಸಹಾಯದಿಂದ ಭಾನಾಮತಿಯ ತರಬೇತಿಯನ್ನು ಕಳೆದ ಕೆಲವು ವರ್ಷಗಳಿಂದ ಪಡೆಯುತ್ತಲೇ ಬಂದಿರುವಳು. ಊರಲ್ಲಿ ಅನುಷ್ಠಾನ, ತಪಸ್ಸು, ದ್ಯಾನ, ವ್ರತ, ಮಾಟ ಮಂತ್ರ ಇವುಗಳ ಹೆಸರಿನಿಂದ ಜನರನ್ನು ಮರಳುಗೊಳಿಸುತ್ತಲೇ ಬಂದಿರುವಳು. ಮಟಕಿ ಗ್ರಾಮದ ಹಲವಾರು ಜನ ಅವಳ ಇಂಥ ಕೈಚಳಕಕ್ಕೆ ಮೋಸ ಹೋಗಿದ್ದಾರೆ. ಮನೆಗಳ ಮೇಲೆ ಕಲ್ಲು ಬೀಳುವುದು ದನಕರುಗಳ ಹಾಲಿನಲ್ಲಿ ರಕ್ತ ಬರುವಂತೆ ಮಾಡುವುದು, ರೂಪಾಯಿ ನೋಟುಗಳು ಮತ್ತು ಅರಿವೆಗಳು ಇಟ್ಟಲ್ಲಿಯೇ ಸುಡುವುದು ಇತ್ಯಾದಿ.

ಈ ಶಿವಮ್ಮ ಈ ಮೊದಲು ಮುಂಬಯಿಯಲ್ಲಿ 10 ವರ್ಷ ಇದ್ದು ಬಂದಂಥವಳು. ಬರುವಾಗ ಆರ್ಥಿಕವಾಗಿ ತೊಂದರೆಯಲ್ಲಿದ್ದವಳು. ಇಲ್ಲಿಗೆ ಬಂದ ಮೇಲೆ ಜನರ ಅಜ್ಞಾನದ ಲಾಭ ಪಡೆದು 10 ಎಕರೆ ಜಮೀನು ಕೊಂಡು, ಅದರಲ್ಲಿ ಬೋರವೆಲ್ ಹಾಕಿಸಿಕೊಂಡು ಸುಸಜ್ಜಿತವಾಗಿದ್ದಾಳೆ. ಸುಟ್ಟು ಕೊಲೆ ಆಗಿರುವ ಹುಡುಗಿಯ ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿದ್ದು, ಅದರಲ್ಲಿ ಶೇ.75 ರಷ್ಟು ಸುಟ್ಟು ಸತ್ತಿರುತ್ತಾಳೆ ಎಂದಿದೆ. ಹುಡುಗಿಯನ್ನು ಬೆಂಕಿ ತಗಲುವ ಕೆಲವು ಗಂಟೆಗಳ ಮುಂಚೆ ಶಿವಮ್ಮಳ ಮನೆಗೆ ಕರೆಸಿಕೊಂಡಿರುವುದು ತಿಳಿದು ಬಂದಿದೆ. ಬೈಲು ಕಡೆ ಹೋದ ಹುಡುಗಿ ಕೆಲವೇ ನಿಮಿಷಗಳಲ್ಲಿ ಮೈಮೇಲೆ ಹಾಕಿಕೊಂಡಿರುವ ಬಟ್ಟೆಗಳಿಗೆ ಪೂರ್ಣವಾಗಿ ಬೆಂಕಿ ತಗಲಿ, ಜಿಲ್ಲಾ ಆಸ್ಪತ್ರೆಯಲ್ಲಿ ರಾತ್ರಿ 1.00 ಘಂಟೆಗೆ ಅಸು ನೀಗಿದ್ದಾಳೆ.

ಹುಡುಗಿಯ ಶವ ಸಂಸ್ಕಾರಕ್ಕೆ ಬಂದ ಅಕ್ಕಳಿಗೆ ನಾಲ್ಕು ದಿನಗಳ ತರುವಾಯ ಅದೇ ಸ್ಥಳದಲ್ಲಿ ಬೆಂಕಿ ತಗಲಿದೆ. ಸ್ವಲ್ಪ ತಿಳಿದವಳಾದ ಅಕ್ಕ ಉಟ್ಟ ಸೀರೆಯನ್ನು ಕಳೆದು ಬಿಸಾಕಿದ್ದಾಳೆ. ಎದೆಯ ಭಾಗ ಸುಟ್ಟು ಸೋಲಾಪೂರ ಆಸ್ಪತ್ರೆಯಲ್ಲಿ ಬದುಕಿ ಉಳಿದಿರುವಳು.

ಇವು ಎರಡೂ ಘಟನೆಗಳು ರಾಸಾಯನಿಕ ಕ್ರಿಯೆಯಿಂದ ನಡೆಯಲ್ಪಟ್ಟಿರುವುದು ಎಂಬುವುದು ಸ್ಪಷ್ಟವಾಗಿದೆ. ಈ ಕುರಿತು ಶಿವಮ್ಮಳ ಮೇಲೆ ಊರಿನ ಬಹುತೇಕ ಜನರು ಗುಮಾನಿಯಿಂದ ನೋಡಲಾಗಿ, ಅದೇ ಸಂದರ್ಭದಲ್ಲಿ ಶಿವಮ್ಮಾ ಊರು ಬಿಟ್ಟು ಹೋಗಿರುವುದು, ಮತ್ತೆ ಅವಳನ್ನು ಊರಿನ ಜನ ಹಿಡಿದುಕೊಂಡು ಬಂದಿರುವುದು ಮತ್ತು ಮಹಾರಾಷ್ಟ್ರದ ಬಿಗ್ವಾನದಲ್ಲಿ ಆಶ್ರಯ ಪಡೆದ ಶಿವಮ್ಮ ರಾಜಿ ಸೂತ್ರ ಮಾಡಿಸಿ, ಹಣದ ಆಮಿಷೆ ತೋರಿಸುತ್ತಿರುವುದು ನೋಡಿದರೆ ಈ ಘಟನೆಗೆ ಅವಳೇ ಮುಖ್ಯ ಕಾರಣವೆಂಬುವುದು ಸ್ಪಷ್ಟವಾಗುತ್ತದೆ.

ಖಜೂರಿ ಗ್ರಾಮ ಈ ಮಂಟಕಿ ಗ್ರಾಮದಿಂದ ಕೇವಲ 8 ಕಿ.ಮೀ ದೂರದಲ್ಲಿದೆ. ಇಲ್ಲಿ ದಲಿತರ ಸುಧಾಕರ ಮತ್ತು ಸುವರ್ಣಾ ಎಂಬ ಕೂಲಿ ಕಾರ್ಮಿಕ ದಂಪತಿಗಳ ಮಗಳಾದ ಸವಿತಾ ಎಂಬ 6 ವರ್ಷದ ಬಾಲಕಿಯನ್ನು ಕಸಾಯಿಖಾನೆಯಲ್ಲಿ ಕುರಿಯನ್ನು ಹರಿಯುವಂತೆ ಹರಿದಿದ್ದಾರೆ. ಹುಡುಗಿಯ ರುಂಡವೇ ಇನ್ನೂ ಸಿಕ್ಕಿಲ್ಲ. ಕೈಗಳ ಎಲುಬುಗಳು, ಎಡಗೈ ಕಿರುಬೆರಳು ಕಿತ್ತುಕೊಂಡಿದ್ದಾರೆ. ತೊಡೆಯ ಮಾಂಸ ಖಂಡಗಳನ್ನು ಚರ್ಮಸಮೇತ ಸುಲಿದಿದ್ದಾರೆ. ಬೆನ್ನಿನ ಚರ್ಮ ಉಲ್ಟಾ ಸುಲಿಯಲಾಗಿದೆ. ನೋಡಲು ಭಯ ಹುಟ್ಟುವಂತೆ ಅತ್ಯಂತ ಭೀಬತ್ಸವಾಗಿ ಕತ್ತರಿಸಿದ್ದಾರೆ. ಊರ ದಲಿತ ಕೇರಿ ಸಮೀಪ ಚಂದ್ರಪ್ಪಾ ಭದ್ರೆಯವರ ಹೊಲದಲ್ಲಿ ರುಂಡವಿಲ್ಲದ ದೇಹ ಸಿಕ್ಕಿದೆ. ರವಿವಾರ ಮದ್ಯಾಹ್ನ ಕಾಣೆಯಾದ ಹುಡುಗಿ ಹೆಣವಾಗಿ ಸಿಕ್ಕಿದ್ದು ಗುರುವಾರದಂದು ಮಟಕಿ ಗ್ರಾಮದ ಪೂಜಾರಿಯೊಂದಿಗೆ ಸಖ್ಯ ಬೆಳೆಸಿದ ಕೆಲವು ಖಜೂರಿಯ ಯುವಕರೇ ಭಾನಾಮತಿ ಪ್ರಯೋಗಾತ್ಮಕವಾಗಿ ಈ ಬರ್ಬರ ಹತ್ಯೆಗೈದಿದ್ದಾರೆ. ಮಾರಿದೇವಿಯ ಮುಂದೆ ಕೋಣದ ಬಲಿಕೊಟ್ಟ ಹಾಗೆ. ಹಸುಳೆಯನ್ನು ಕತ್ತರಿಸುವಾಗ ಅದರ ಜೀವ ಎಷ್ಟು ನೊಂದಿರಬೇಕು.

ಈ ಮೇಲಿನ ಎಲ್ಲ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿದು ಬರುವ ಇಷ್ಟು. ಪೊಲೀಸ್ ಇಲಾಖೆಯವರು ತಾಳಿದ ದಿವ್ಯ ನಿರ್ಲಕ್ಷ್ಯ ಮನೋಭಾವ. ಮೊದಲ ಪ್ರಕರಣದಲ್ಲಿ ಭಾಗಿಯಾದವರನ್ನು ಗುರುತಿಸಿ ನಿರ್ದಾಕ್ಷೀಣ್ಯವಾಗಿ ದಂಡಿಸದೇ ಇರುವುದು ಇಂಥ ಪ್ರಕರಣಗಳು ಮರುಕಳಿಸುವಂತಾಗಿದೆ. ಗುಲಬರ್ಗಾ ಪೊಲೀಸ್ ಅಧಿಕಾರಿಗಳ ಪ್ರಕಾ ಭಾನಾಮತಿ ಅಪರಾದಕ್ಕಾಗಿ ಯಾವುದೇ ಕಾನೂನು ಇಲ್ಲವಂತೆ.

ಕೊಲೆ ಯಾವುದೇ ಕಾರಣದಿಂದ ಆದರೂ ಅದು ಕೊಲೆಯೇ..... ಅವರಿಗೆ ಶಿಕ್ಷೆ ಆಗಲೇಬೇಕಲ್ಲವೇ!?! ಹೀಗಿರುವಾಗ ಅವಳ ಬೇಲ್ ಮೇಲೆ ಬಿಡುವ ಬದಲು ಸರಿಯಾಗಿ ವಿಚಾರಣೆಗೆ ಒಳಪಡಿಸಿದರೆ ಅವಳು ಮತ್ತು ಅವಳ ಸಂಗಡ ಇಂತಹ ಕುಕೃತ್ಯ ಎಸಗುವವ ಒಂದು ಜಾಲವೇ ಸಿಗುವುದು. ಈ ಸಂಬಂಧ ಪೊಲೀಸ್ ಇಲಾಖೆಯು ಶಿವಮ್ಮಳನ್ನು ಕೊಲೆ ಕೇಸಿನಲ್ಲಿ ತಮ್ಮ ಸುಪರ್ಧಿಗೆ ತೆಗೆದುಕೊಂಡು ಸೂಕ್ತ ಕ್ರಮ ವಹಿಸಬೇಕಿದೆ.

ಖಜೂರಿ ಊರಲ್ಲಿ ಜನರು ಕೂಲಿಗೆ ಇಬ್ ಬದಲು ಈಗ ಒಬ್ಬರೇ ಹೋಗುತ್ತಿದ್ದಾರೆ. ಹೆಂಡತಿ-ಮಕ್ಕಳನ್ನು ಕಾಯುತ್ತಾ ಮನೆಯಲ್ಲೇ ಕೂಡಬೇಕಾಗಿ ಬಂದಿದೆ. ಇಲ್ಲಿಯವರೆಗೆ ಅಪರಾಧಿಗಳ ಶೋಧವಾಗಿಲ್ಲ. ಇದು ಹೀಗೆ ಮುಂದುವರೆದರೆ ಸಾಮಾನ್ಯ ಬಡ ಕೃಷಿ ಕೂಲಿಕಾರರ ಜೀವನ ತುಂಬಾ ದುಸ್ತರವಾಗುವುದು. ಇಡೀ ಜಿಲ್ಲೆಯಲ್ಲಿ ಭಾನಾಮತಿಯ ವಿಷಯವಾಗಿ ಕೆಲಸ ಮಾಡುವವರ ಒಂದು ಜಾಲವೇ ಅಡಗಿದೆ. ಪೊಲೀಸ್ ಇಲಾಖೆಯವರು ‘ಭಾನಾಮತಿ ಮಾಡುವ’ವರನ್ನು ಮತ್ತು ಭಾನಾಮತಿ ‘ಕಡಿ ಮಾಡುವ’ವರನ್ನು ಚೆನ್ನಾಗಿ ವಿಚಾರಣೆಗೊಳಪಡಿಸಬೇಕು. ಅಂಥವರನ್ನು ಹುಡುಕಿ ನಿರ್ದಯವಾಗಿ ದಂಡಿಸಬೇಕು. ಜನರನ್ನು ಭಯದ ವಾತಾವರಣದಿಂದ ಮುಕ್ತಗೊಳಿಸಬೇಕು.

ಈ ಸಂಬಂಧ ಭಾರತ ಜ್ಞಾನವಿಜ್ಞಾನ ಸಮಿತಿ ಪೊಲೀಸ್ ಇಲಾಖೆಯವರಿಗೆ ಎಲ್ಲ ರೀತಿಯ ಸಹಾಯ ಮಾಡಲು ತಯಾರಿದೆ. ಆದರೆ ಅವರ ಸಹಾಯ ಪಡೆಯದೇ ನಿರ್ಲಕ್ಷ ಮಾಡುತ್ತ ಹೋದಂತೆ ಇಂಥ ಪ್ರಕರಣಗಳು ಹೆಚ್ಚುತ್ತ ಹೋಗುವ ಸಂಭವವಿದೆ.

- ಶಿವಶರಣ ಮುಳೇಗಾಂ



ಕಾಂ. ಮುಲ್ಲಾ ಕುಟುಂಬ ಸಹಾಯಾರ್ಥ ನಿಧಿ ಸಂಗ್ರಹ

ಇತ್ತೀಚೆಗೆ ಹಠಾತ್ ನಿಧನರಾದ ಯುವ ಮುಖಂಡ ಕಾಂ.ಅಬ್ದುಲ್ ರಜಾಕ್ ಮುಲ್ಲಾರವರ ಕುಟುಂಬದ ಸಹಾಯಾರ್ಥ ನಿಧಿ ಸಂಗ್ರಹಕ್ಕಾಗಿ ಸಮಿತಿಯೊಂದನ್ನು ರಚಿಸಲಾಗಿದ್ದು ಈಗಾಗಲೇ ನಿಧಿ ಸಂಗ್ರಹ ಕಾರ್ಯ ನಡೆದಿದೆ.

ಸಂಗಾತಿಗಳು ಹಿತೈಷಿಗಳು ಈ ನಿಧಿಗೆ ಉದಾರ ಕೊಡುಗೆ ನೀಡಲು ಸಂಘಟಕರು ಕೋರಿದ್ದಾರೆ.

1. ದ.ಕ. ಮತ್ತು ಉಡುಪಿ ಜಿಲ್ಲಾ ಕೃಪಾಂಕ ನೌಕರರ ಅಭಿನಂದನಾ ಸಭೆಯಲ್ಲಿ ಸಂಗ್ರಹ ರೂ.1015.00
2. ಬೆಳ್ತಂಗಡಿ ಡಿವೈಎಫ್ಐ 9ನೇ ತಾ.ಸಮಾವೇಶದಲ್ಲಿ ಸಂಗ್ರಹ ರೂ. 400.00
3. 30.10.2005ರಂದು ಗದಗ್‌ನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಂಗ್ರಹ ಪ್ರೊ.ಎಲ್.ಆರ್.ಅಂಗಡಿ 500.00 ಸಿಪಿಐ(ಎಂ) ರಾಮದುರ್ಗ ಪ್ರಾದೇಶಿಕ ಸಮಿತಿಯಿಂದ 1000.00
4. ಬೆಳ್ತಂಗಡಿ ಕೊಯ್ಯೂರು ಡಿವೈಎಫ್ಐ ಗ್ರಾಮೀಣ ಕ್ರೀಡಾ ಕೂಟದಲ್ಲಿ ಸಂಗ್ರಹ ರೂ.400.00
5. ಮಂಡ್ಯ ತಾಲ್ಲೂಕು ಸಾಕ್ಷರತಾ ಪ್ರೇರಕರ ಸಮಾವೇಶದಲ್ಲಿ ಸಂಗ್ರಹ ರೂ.562.50

ಇಲ್ಲಿಯವರೆಗೂ ಸಂಗ್ರಹವಾದ ಒಟ್ಟು ಹಣ ರೂ.3,877.00

ವ್ಯಾಪಾರ

ಕೇಳೊ ನಲ್ಲಾ !
ಪ್ರತಿ ತಿಂಗಳು
ನೀ ತರುವ ಸಂಬಳ
ನನ್ನದೇ ಎಲ್ಲಾ
ಏಕೆಂದರೆ,
ಮದುವೆಯಲ್ಲಿ
ನಿನಗೆ
ತೆತ್ತ ರೇಟು
ಗಿಟ್ಟಬೇಕಲ್ಲಾ

- ಎನ್.ವ್ಹಿ.ಸೌಮ್ಯರಾ
ಬಳ್ಳಾ

ಬೆಳಗಾವಿ ಪಾಲಿಕೆ ವಜಾ - ಸರ್ವಾಧಿಕಾರದ ಕ್ರಮ

ಬೆಳಗಾವಿ ಮಹಾನಗರ ಪಾಲಿಕೆಯನ್ನು ಕರ್ನಾಟಕ ಸರ್ಕಾರ ವಜಾಗೊಳಿಸಿದೆ. ಮಿತಿಮೀರಿ ವರ್ತಿಸಿರುವುದಕ್ಕೆ ತಕ್ಕ ಶಾಸ್ತಿ ಮಾಡಲಾಗಿದೆಯೆಂದು ಬೀಗಿದೆ. ಸುವರ್ಣ ಕರ್ನಾಟಕ ಆಚರಣೆಯ ಸಂಭ್ರಮದಲ್ಲಿ ಭ್ರಮೆಯನ್ನು ತೇಲಿಬಿಡುತ್ತಿರುವ ಸರ್ಕಾರ ಈ ಕ್ರಮ ಉಡುಗೊರೆ ಎಂಬಂತೆ ಬಿಂಬಿಸುತ್ತಿದೆ. ಇದು ಕನ್ನಡ ಪ್ರೇಮ ಎನ್ನುತ್ತಿದ್ದಾರೆ ಧರ್ಮಸಿಂಗ್! ನಾಡು-ನುಡಿ-ಗಡಿ ಪ್ರದೇಶಗಳ ಕಾಯುವ ಘನ ಹೆಜ್ಜೆ ಎಂದು ಬಣ್ಣಿಸುತ್ತಿದ್ದಾರೆ ಮಾಧ್ಯಮದವರು! ಆದರಿದು 'ಸರ್ವಾಧಿಕಾರದ ಕ್ರಮ', ಪ್ರಜಾಪ್ರಭುತ್ವದ ತತ್ವಗಳಿಗೆ ನೀಡಿದ ತಿಲಾಂಜಲಿ. ಯಾವ ಶಕ್ತಿಗಳ ವಿರುದ್ಧ ಹೋರಾಡುತ್ತಿದ್ದೇವೆ ಎಂಬ ಭ್ರಮೆ ಬಿತ್ತಲಾಗುತ್ತಿದೆಯೋ ಅದೇ ಶಕ್ತಿಗಳನ್ನು, ಭಾಷಾಂಧತೆಯನ್ನು ಬೆಳೆಸುವ, ಅವು ಬಲಿಯುವಂತೆ ಮಾಡುವ 'ಕೃತ್ಯ' ಎಂಬುದರಲ್ಲಿ ಅನುಮಾನವೇ ಇರಬೇಕಿಲ್ಲ.

ಇದೆಂತಹ ರಾಷ್ಟ್ರೀಯ ಪಕ್ಷ ?

ಬೆಳಗಾವಿ ಮಹಾನಗರ ಪಾಲಿಕೆ ಒಂದು ಚುನಾಯಿತ ಸಂಸ್ಥೆ. ಅದೊಂದು ನಿರ್ಣಯ ಕೈಗೊಂಡಿದೆ. ಅದು ಅದರ ವ್ಯಾಪ್ತಿ ಮೀರಿರಬಹುದು. ಹಿಂದೆಯೂ ಮರಾಠಿ ಭಾಷಿಕ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ನಿರ್ಣಯವನ್ನು ಮೂರು-ನಾಲ್ಕು ಬಾರಿ ಕೈಗೊಂಡಿದೆ. ಭಾವೋದ್ರಿಕ್ತತೆ ನಿರ್ಮಿಸಿ ತನ್ನ ರಾಜಕೀಯ ನೆಲೆ ಮಾಡಿಕೊಳ್ಳುವ ಹುನ್ನಾರ ಇದರ ಹಿಂದಿದೆ. ಇಂತಹ ನಿರ್ಣಯ ಕೈಗೊಂಡಾಗಲೆಲ್ಲ ಆ ನಿರ್ಣಯವನ್ನು ರದ್ದು ಪಡಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಈಗಲೂ ಮಾಡಬೇಕಾದದ್ದು ಅಷ್ಟೇ ಆಗಿತ್ತು. ಆದರೆ ಸರ್ಕಾರ ಪಾಲಿಕೆಯನ್ನು ವಜಾಗೊಳಿಸಿ ಮರಾಠಿ ಭಾಷಿಕರ ನಡುವೆಯೇ ನೆಲೆ ಕಳೆದುಕೊಳ್ಳುತ್ತಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ ತಂತ್ರಕ್ಕೆ ಮಣೆ ಹಾಕಿತು. ಅದು ಹಚ್ಚಿದ ಬೆಂಕಿಗೆ ತುಪ್ಪ ಎರೆದು ಆ ಬೆಂಕಿ ಬಿಸಿಯಲ್ಲಿ ತನ್ನ ಶಕ್ತಿ ವೃದ್ಧಿಸಿಕೊಳ್ಳಲು, ಮಹಾರಾಷ್ಟ್ರದೊಳಗೂ ಭಾಷಾಂಧ ಶಕ್ತಿಗಳು ಹೂಂಕರಿಸಲು ಅವಕಾಶ ಕಲ್ಪಿಸಿತು. ಎಂ.ಇ.ಎಸ್. ಬಯಸಿದ್ದು ಅದೇ. ಧರಂಸಿಂಗರ ಸರ್ಕಾರ ಮಾಡಿದ್ದು ಅದೇ! ಈ ರಾಜಕೀಯ ಗ್ರಹಿಕೆ, ಎಚ್ಚರವನ್ನು ವಹಿಸದೇ ಕನ್ನಡ-ಮರಾಠ ಭಾಷಾಂಧತೆಗೆ ಪ್ರಚೋದಿಸಿದೆ. ರಾಷ್ಟ್ರೀಯ ಪಕ್ಷವಾಗಿರುವ ಕಾಂಗ್ರೆಸ್ ಸ್ವರೂಪಕ್ಕೆ ಇದು ವಿರುದ್ಧವಾದುದು. ಈ ಸರ್ಕಾರ ಭಾಷಾಂಧರ ಒತ್ತಡಕ್ಕೆ ಮಣಿದಿದೆ.

ಸರ್ವಾಧಿಕಾರತ್ವದ ನಗ್ನ ಅನಾವರಣ

ಆದರೆ ಕಾಂಗ್ರೆಸ್‌ನಲ್ಲಿಯ ಸರ್ವಾಧಿಕಾರಿ ಗುಣ ಹೋಗಿಲ್ಲ. ಸರ್ಕಾರದ ರಚನೆ ಏಕಪಕ್ಷದಿಂದ ಸಾಧ್ಯವಿಲ್ಲ. ಮೈತ್ರಿಕೂಟದ ಹಾಗೂ ಹೊರಗಿನ ಬೆಂಬಲ ಅನಿವಾರ್ಯವೆಂದು ಒಪ್ಪಲು ಅಂತೂ ಬಹಳ ಪ್ರಯಾಸಪಟ್ಟ ಕಾಂಗ್ರೆಸ್ ಸ್ವಲ್ಪ ಉದಾರವಾದಿಯಂತೆ ಪೋಜು ಕೊಟ್ಟಿತ್ತು. ಆದರೆ ಅದರ ಸರ್ವಾಧಿಕಾರತ್ವದ ಗುಣ ಗೌಣವಲ್ಲ! ಅದೂ ಭೂಮಾಲೀಕ-ಬಂಡವಾಳಗಾರರ ಪಕ್ಷವಾಗಿರುವ ಕಾಂಗ್ರೆಸ್ ಸನ್ನ ವರ್ಗಗುಣವನ್ನು ಬಿಟ್ಟೀತೇ!? ಇಂತಹ ತೀರ್ಮಾನ ಕೈಗೊಳ್ಳುತ್ತಿರುವಾಗ ಮೈತ್ರಿಕೂಟದ ಇನ್ನೊಂದು ಭಾಗಿದಾರ ಜೆಡಿ(ಎಸ್), ಬಾಯಿಬಿಡದೇ ಕುಳಿತಿದೆಯಲ್ಲಾ! 'ಲಾಭ ಸಿಕ್ಕರೆ ಪಾಲಿರಲಿ ನಷ್ಟವಾದರೆ ಧರಂ ಹೊರಲಿ' ಎಂದು ಚೌಕಾಶಿ ಮಾಡುತ್ತಿದ್ದೆಯೇ!



ರಾಜ್ಯ ಸರ್ಕಾರದವನ್ನೂ ವಜಾಗೊಳಿಸಬಹುದಲ್ಲಾ!

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಧರಂಸಿಂಗರ ಸರ್ಕಾರಕ್ಕೆ ತಾನು ತೆಗೆದುಕೊಂಡಿರುವ ನಿರ್ಧಾರ ಸರಿಯಲ್ಲ ಎಂಬ ಬಗ್ಗೆ ಖಚಿತವಾದ ಅನಿಸಿಕೆ ಇದೆ. ಯಾಕೆಂದರೆ ಪಾಲಿಕೆಯನ್ನು ವಜಾ ಮಾಡಿರುವ ಆದೇಶದಲ್ಲಿ ಪಾಲಿಕೆ ಅಂಗೀಕರಿಸಿದ ನಿರ್ಣಯವನ್ನು ಒಂದು ಕಾರಣವನ್ನಾಗಿ ಗುರುತಿಸಿಯೇ ಇಲ್ಲ. ಗುಡುಗುತ್ತಿರುವ ಸರ್ಕಾರದ ದೌರ್ಬಲ್ಯವಿದು. ಆದರೆ ಅದು ಪ್ರಸ್ತಾಪಿಸಿರುವ ಕಾರಣಗಳು ಅತ್ಯಂತ ಅಪಾಯಕಾರಿ. ಪಾಲಿಕೆ ಸ್ವಯಂಘೋಷಿತ ಆಸ್ತಿ ತೆರಿಗೆ ಅಳವಡಿಸಿಕೊಂಡಿಲ್ಲ, ಕುಡಿಯುವ ನೀರಿನ ದರ ಮುಂತಾದ ಶುಲ್ಕಗಳನ್ನು ಹೆಚ್ಚಿಸಲು ಕ್ರಮವಹಿಸಿಲ್ಲ ಎಂಬ ಕಾರಣಗಳನ್ನು ನೀಡಲಾಗಿದೆ. ಅಂದರೆ ರಾಜ್ಯ ಸರ್ಕಾರದ 'ಸಾರ್ವಭೌಮತ್ವದ' ಫರ್ಮಾನುಗಳನ್ನು ಜಾರಿಗೊಳಿಸಿಲ್ಲ. ಜಾರಿಗೊಳಿಸದಿದ್ದರೆ ಹೇಗೆ? ಎಂಬುದು ಅದರ ನಿರ್ಧಾರ. ಜೊತೆಯಲ್ಲೇ ಸರ್ಕಾರದ ನಿರ್ಧಾರಗಳನ್ನು ಜಾರಿಗೊಳಿಸದಿದ್ದರೆ ಯಾವುದೇ ಸ್ಥಳೀಯ ಸಂಸ್ಥೆಗಳಿಗೂ ಇದೇ ಶಾಸ್ತಿ ಕಾದಿದೆ ಎಂಬ ಎಚ್ಚರಿಕೆಯನ್ನೂ ನೀಡಿದೆ.

ಇದೇ ತರ್ಕವನ್ನು ಒಪ್ಪಿದರೆ ಕೇಂದ್ರ ಸರ್ಕಾರವೂ ಸಹ ತನ್ನ ಸಲಹೆ-ಆದೇಶಗಳನ್ನು ಜಾರಿಗೊಳಿಸಿಲ್ಲವೆಂದು ರಾಜ್ಯ ಸರ್ಕಾರವನ್ನು ವಜಾ ಗೊಳಿಸಬಹುದು. ಇಂತಹ ತರ್ಕ, ಅನುಸರಿಸುತ್ತಿರುವ ನೀತಿಗಳು ಪ್ರಜಾಪ್ರಭುತ್ವದ ಅಡಿಗಲ್ಲಿಗೆ ಹಾಕಿದ ಆಘಾತಕಾರಿ ಪೆಟ್ಟು. ವಿಶ್ವಬ್ಯಾಂಕ್‌ನ ನಿರ್ದೇಶನ ಗಳನ್ನು ಚುನಾಯಿತ ಸಂಸ್ಥೆಗಳ ಮೇಲೆ ಹೇರುವ ಸರ್ವಾಧಿಕಾರತ್ವದ ನಗ್ನ ಕ್ರಮವಾಗಿದೆ. ಇದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು, ವಿರೋಧಿಸಬೇಕು.

ಠಾಕ್ರೇಗ ಕೆಲಸ!

ಪ್ರಕರಣ ಇಲ್ಲಿಗೇ ಮುಗಿದಿಲ್ಲ. ಈ ನಂತರದ ಬೆಳವಣಿಗೆಗಳೂ ಲಂಭಿಸುತ್ತಿವೆ. ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಅವರು ಯಾವುದೋ ಮಹಾವಿಜಯ ಸಾಧಿಸಿದವರಂತೆ ಬೀಗುತ್ತಿದ್ದಾರೆ. ಎಂಇಎಸ್ ಮುಖಂಡರದ್ದು ಇದೇ ಧಾಟಿ. ಘನೋದ್ದೇಶಕ್ಕಾಗಿ ಹೋರಾಡಿ ಹೊರಬಂದವರಂತೆ ಆಡುತ್ತಿದ್ದಾರೆ. ಸಂಭ್ರಮದ ಕೆಲವರ ಸ್ವಾಗತ ಅವರ ಕೃತ್ಯಗಳಿಗೆ ಕುಮ್ಮಕ್ಕು ನೀಡಬಲ್ಲದು.

ಎಂ.ಇ.ಎಸ್. ಸುಮ್ಮನೆ ಕುಳಿತಿಲ್ಲ. ಅದು ಮುಂಬಯಿಯವರೆಗೂ ಹೋಗಿದೆ. ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್‌ರಿಗೆ ಮನವಿ ನೀಡಿದೆ. ಶಿವಸೇನೆಯ ಕೋಟೆಗೂ ಪಾದ ಬೆಳೆಸಿ ಬಾಳಾ ಠಾಕ್ರೆಗೆ ದೂರು ನೀಡಿದೆ. ವಿಲಾಸ್‌ರಾವ್ ದೇಶ್‌ಮುಖ್ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಬಾಳಾಠಾಕ್ರೆ, ಕನ್ನಡಿಗರಿಂಗೂ ರಕ್ಷಣಾವೇದಿಕೆಯವರು ಮಾಡಿದ 'ಸೇವೆ'ಯಷ್ಟೇ ಮಾಡುವುದಾಗಿ, ಕನ್ನಡಿಗರನ್ನು ಹೊಡೆದಟ್ಟುವುದಾಗಿ ಹೇಳಿದ್ದು ಭಾಷೆ ಆಧಾರದಲ್ಲಿ ಗಲಭೆ ಸೃಷ್ಟಿಸಲು ಪ್ರಚೋದಿಸಿದ್ದಾರೆ. ಬೀದರ್, ಬಾಲ್ಕಿ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಇವು ಅತ್ಯಂತ ಪ್ರಚೋದನಾತ್ಮಕ ಹೇಳಿಕೆಗಳು.

ಎಡಬಿಡಂಗಿ ಮುತಾಲಿಕ

ಬೆಳಗಾವಿಯ ಈ ಪ್ರಕರಣದಲ್ಲಿ ಶಿವಸೇನೆಯೂ (ಕರ್ನಾಟಕ ಘಟಕದ್ದು) ಎಂ.ಇ.ಎಸ್. ನ ಜೊತೆ ಸೇರಿ ಪ್ರಚೋದನಾತ್ಮಕ ಕೃತ್ಯಗಳಲ್ಲಿ ಭಾಗಿಯಾಯಿತು. ಇದನ್ನು ಕೆಲವು ಕನ್ನಡ ಸಂಘಟನೆಗಳು ಟೀಕಿಸಿದಾಗ ಬೆಳಗಾವಿ ಪಾಲಿಕೆಯ ನಿರ್ಣಯ ವಿರೋಧಿಸುವುದಾಗಿ ಶಿವಸೇನೆ ನಾಯಕ ಮುತಾಲಿಕ ಹೇಳಿದ. ತನ್ನದು ಹಿಂದುತ್ವಕ್ಕೆ ಬದ್ಧತೆ, ಮಹಾರಾಷ್ಟ್ರ ಶಿವಸೇನೆ ಮರಾಠಿಗರನ್ನು ಅನ್ಯಭಾಷಿಕರ ವಿರುದ್ಧ ಎತ್ತಿಕಟ್ಟುವಂತೆ, ಇಲ್ಲಿ ಕನ್ನಡ ಸೇನೆಯಾಗಿ ಕೆಲಸ ಮಾಡುವುದಂತೆ, ಇದರ ಅರ್ಥ ಶಿವಸೇನೆಯ ಮೂಲ ಉದ್ದೇಶವನ್ನೇ ಇಟ್ಟುಕೊಂಡು ರಾಜ್ಯದಲ್ಲಿಯೂ ಹೊಸ ಆವೃತ್ತಿಯಾಗಿ, ಛಿದ್ರಕಾರಿಯಾಗಿ ಕೆಲಸಕ್ಕಿಳಿಯುವುದು ಎಂಬುದೇ ಆಗಿದೆ.

ಈ ಎಲ್ಲಾ ಬೆಳವಣಿಗೆಗಳೂ ಗಂಭೀರವಾದವು ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕು. ಸರ್ಕಾರ ಬೇಜವಾಬ್ದಾರಿತನದಿಂದ, ಅಸಂವಿಧಾನಿಕವಾಗಿ ವರ್ತಿಸುವುದನ್ನು ತಡೆಯಬೇಕು.

ಸುವರ್ಣ ಕರ್ನಾಟಕ : ಕಲಾಂ 'ಸರ್' ಆಕಾಶಕ್ಕೆ ಹಾಕಿದ ಏಣಿ!

ಉಜ್ವಲ ಕರ್ನಾಟಕದ ನೀಲನಕ್ಷೆಯೊಂದನ್ನು ರಾಷ್ಟ್ರಪತಿ ಕಲಾಂ ಅನಾವರಣಗೊಳಿಸಿದ್ದಾರೆ! ಹನ್ನೊರಿದು ಅಂಶಗಳ 15 ವರ್ಷಗಳ ಅವಧಿಯಲ್ಲಿ ಈ ನಕ್ಷೆಯು ರಾಜ್ಯದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲಿದೆ, ಅದು ಮುಂದುವರೆದರೆ ಕೋಟಿಯಾಗಬಹುದು. ತಲಾ ಆದಾಯ 26 ಸಾವಿರ ರೂಪಾಯಿಗಳಿಂದ 75 ಸಾವಿರಕ್ಕೇರಬಹುದು. 6.5 ಮೆಗಾವ್ಯಾಟ್ ವಿದ್ಯುತ್ತನ್ನು ಸೃಷ್ಟಿಸಬಹುದು. ಕೈಗಾರಿಕೆ, ತೋಟಗಾರಿಕೆ, ಪ್ರವಾಸೋದ್ಯಮ, ಜವಳಿ, ಜೈವಿಕ ಹಾಗೂ ಮಾಹಿತಿ ತಂತ್ರಜ್ಞಾನ............. ಬೆಳೆಯುವುದಕ್ಕೆ ಏನಿಲ್ಲ, ಯಾವ ಕ್ಷೇತ್ರಗಳೂ ಉಳಿದಿಲ್ಲ. ಇದರ ಅಂತ್ಯೋದಯ ಫಲವೆಂದರೆ ಶೇ 19 ರಷ್ಟಿರುವ ಬಡತನ ಶೇಕಡಾ 0 ತಲುಪಿ ಮಂಗಮಾಯ!

ಉಜ್ವಲ ಕರ್ನಾಟಕದ ನಿರ್ಮಾಣಕ್ಕೆ ಪ್ರಜ್ವಲ ಯೋಚನೆ, ಸಮಸ್ಯೆ ಎಂದರೆ ಇದರ ನಿಜವಾದ ಕಾರ್ಯಸಾಧನೆ ಹೇಗೆ ಎಂಬ ಪ್ರಶ್ನೆ. ನಿಂತ ನೆಲ, ಪರಿಸರದ ಪರಿಗಣನೆ ಇಲ್ಲದೇ ಇದನ್ನು ಸಾಧಿಸಲಾದೀತೆ? ದೇಶದ-ರಾಜ್ಯದ ಪರಿಸ್ಥಿತಿಯತ್ತ ಗಮನ ಬೇಡವೇ? ಇದ್ದುಳ್ಳವರನ್ನೇ ಕೊಬ್ಬಿ ಬೆಳೆಸುವ ಆರ್ಥಿಕ ನೀತಿಗಳನ್ನು ಉದಾರೀಕರಣ, ಜಾಗತೀಕರಣ ನೀತಿಗಳನ್ನು ಕೈ ಬಿಡದೆ ಇದು ಸಾಧ್ಯವೇ?



ಕರ್ನಾಟಕದ ಭೂ ಹೀನ ಬಡ ಜನರ ಕೈಗೆ ಭೂಮಿ ಸಿಗದೇ ಮೂಲಭೂತ ಕೈಗಾರಿಕೆಗಳು ಬೆಳೆಯದೇ ಸೈಬರ್ ಲೋಕದ ಸೃಷ್ಟಿಯಲ್ಲಿ ಕರ್ನಾಟಕ ಬೆಳಗೀತೆ? ಸಮಸ್ಯೆಗಳ ವಾಸ್ತವಿಕ ಅರಿವು, ಅದನ್ನು ನಿವಾರಿಸಿಕೊಂಡು ಹೋಗಬೇಕಾದ ದೃಢ ನೀತಿ-ಹೆಜ್ಜೆಗಳು ಇಲ್ಲದೇ ಪ್ರಗತಿ ಸಾಧಿಸಲಾದೀತೆ? ಇಲ್ಲವಾದರೆ ಆಕಾಶದಲ್ಲಿ ರಾಕೆಟ್ ಹಾರಿಸಿ ಭೂಮಿಯಲ್ಲಿ ಬೆಳೆ ಬೆಳೆಯುವ ಕನಸು ಇದಾಗಬಹುದು.

ಇದು ಕಲಾಂ ಸರ್‌ರವರ ಮೂಲ ಚಿಂತನೆಯೋ? ಅಥವಾ ಆಳುವವರ ಹಾದಿ ತಪ್ಪಿಸುವ ಚಿತ್ತಾರದ ಪರದೆಯೋ!

ಭಾಷಾವಾರು ಪ್ರಾಂತ ರಚನೆಯಾಗಿ 50 ವರುಷ ತುಂಬಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ 'ಸುವರ್ಣ ಕರ್ನಾಟಕ' ಸಂಭ್ರಮದ ಆಚರಣೆಗೆ ವಿದ್ಯುಕ್ತ ಉದ್ಘಾಟನೆಯನ್ನು 20 ರಂದು ರಾಷ್ಟ್ರಪತಿ ಅಬ್ದುಲ್ ಕಲಾಂರವರು ಮಾಡಿದರು. ವಿಧಾನಸಭೆ ಹಾಗೂ ಪರಿಷತ್‌ಗಳ ಜಂಟಿ ಅಧಿವೇಶನಕ್ಕೆ ವಿವಿಧ ಕ್ಷೇತ್ರಗಳ ಗಣ್ಯರೂ ಹಾಜರಿದ್ದರು. ಪತ್ರಿಕಾ ಮಾಧ್ಯಮದವರು ಇವರನ್ನು ರಾಷ್ಟ್ರಪತಿಗಳು ಎನ್ನುವುದಕ್ಕಿಂತ 'ಕಲಾಂ ಸರ್' ಎನ್ನುವುದರಲ್ಲೇ ಪ್ರೀತಿ, ಕಲಾಂ ಸಾರ್‌ಗೂ ಉಪನ್ಯಾಸ ನೀಡುವುದೆಂದರೆ ಇನ್ನಿಲ್ಲದ ಪ್ರೀತಿ!

ಹೈಟೆಕ್ ಮೂರ್ತಿಯ ಹೈಜಾಕ್ ಮಾತುಗಳು

ಇನ್‌ಫೋಸಿಸ್‌ನ ನಾರಾಯಣ ಮೂರ್ತಿಯವರು ಲಂಡನ್‌ನಿಂದ ವಾಪಸಾಗಿದ್ದಾರೆ. ಬಂದವರೇ ತಾವಿಲ್ಲದಾಗ ಏನೆಲ್ಲಾ ಆರೋಪ ಮಾಡಲಾಗಿದೆಯೆಂದು ಪಟ್ಟಿ ಮಾಡಿಕೊಂಡಂತೆ, ಪತ್ರಿಕಾಗೋಷ್ಠಿ ಕರೆದಿದ್ದಾರೆ. ರೈತರ ಭೂಮಿ ಮಾರುಕಟ್ಟೆ ದರದಲ್ಲಿ ಖರೀದಿಸಿರುವುದಾಗಿ ಹೇಳಿದ್ದಾರೆ. ಆದರೆ ದರ ಎಷ್ಟು ನೀಡಲಾಗಿದೆಯೆಂದು ಹೇಳುವುದನ್ನು ನಿರಾಕರಿಸಿದ್ದಾರೆ. ಭೂಮಿ ಇರೋದೆ ಖರೀದಿಸಲು, ಖರೀದಿಸುವುದೇ ನಮ್ಮ ಹಕ್ಕು ಎಂದು ಅವರ ಸಂವಿಧಾನದ ಹಕ್ಕಿನ ಬಗ್ಗೆ ಹೇಳಿದರಾದರೂ ಉದ್ಯಮಕ್ಕೆ ಎಷ್ಟು ಭೂಮಿ ಅಗತ್ಯವಿತ್ತು, ಇಷ್ಟ್ಯಾಕೆ ಎಂದು ಹೇಳಿಲ್ಲ! ರೈತರೊಂದಿಗೆ ಇವರೇ ಖರೀದಿಸಿದ್ದು ಎಂಬಂತೆ ಮಾತನಾಡಿದ್ದಾರೆ. ಆದರೆ ಸರ್ಕಾರದಿಂದ ರೈತರ ಭೂಮಿ ವಶವಡಿಸಿಕೊಳ್ಳುವ ಆದೇಶ ಹೊರಡಿಸಿದ್ದು ಹೇಳಿಲ್ಲ.


ಬೆಂಗಳೂರು ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣದ ಅಧ್ಯಕ್ಷ ಸ್ಥಾನಕ್ಕೆ ನೀಡಿದ ರಾಜಿನಾಮೆ ವಾಪಸು ಪಡೆಯೋಲ್ಲ, ಆದರೆ ಕಾಮಗಾರಿಗಳು ನಿಲ್ಲೋಲ್ಲ ಎಂದಿದ್ದಾರೆ. ಆದರೆ ಕಾನೂನು ಬಾಹಿರ ಟೆಂಡರ್ ನೀಡಿಕೆ ಬಗ್ಗೆ ಮಾತನಾಡಿಲ್ಲ. ಇವರ ಅಧ್ಯಕ್ಷತೆಯ ವ್ಯವಹಾರಗಳ ಬಗ್ಗೆ ಸಂಸದೀಯ ಉಪಸಮಿತಿಯು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಪತ್ರಕರ್ತರು ಪ್ರಶ್ನೆಯನ್ನು ಕೇಳಿಲ್ಲ. ನಾರಾಯಣಮೂರ್ತಿಯವರಿಗೆ ಪತ್ರಿಕೆಯವರು ಕೇಳುವುದು ಎಂದರೇನು? ಅದೂ ಎಲ್ಲಾ ನಾಗರಿಕರಿಗಿಂತ ಎತ್ತರದಲ್ಲಿರುವವರ ಬಗ್ಗೆ ಸರ್ಕಾರಗಳೇ ಅವರ ಅಭಿಪ್ರಾಯಗಳನ್ನೇ ಆಜ್ಞೆಗಳೆಂದು ಕಾಯುತ್ತಿರುವಾಗ!


ಆದಿವಾಸಿಗಳ ಬೇಡಿಕೆ ದಿನಾಚರಣೆ

ಸಿಪಿಐ(ಎಂ) ಕೇಂದ್ರಸಮಿತಿ ಕರೆಯಂತೆ ನವೆಂಬರ್ 18ರಂದು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯಲ್ಲಿ ಆದಿವಾಸಿಗಳ ಬೇಡಿಕೆ ದಿನಾಚರಣೆಯನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಲಾಯಿತು. ಹೆಗ್ಗಡದೇವನ ಕೋಟೆ ತಾಲ್ಲೂಕು ಆದಿವಾಸಿಗಳು ಹೆಚ್ಚು ಸಾಂದ್ರಿತರಾಗಿರುವ ಪ್ರದೇಶ. ಈ ತಾಲೂಕೊಂದರಲ್ಲೇ ಸುಮಾರು 30,000 ಆದಿವಾಸಿ ಕುಟುಂಬಗಳು ವಾಸಿಸುತ್ತಿವೆ. ಅರಣ್ಯದಿಂದ ಒಕ್ಕಲೆಬ್ಬಿಸಲಾಗಿರುವ ಈ ಜನ ತಮ್ಮ ಹಾಡಿಗಳ ಸಮೇತ ಹೊರಹೋಗಬೇಕಿದೆ. ಅರಣ್ಯ ಇಲಾಖೆ, ಪೊಲೀಸ್ ಇಲಾಖೆಗಳ ಕಿರುಕುಳವಂತೂ ಹೇಳತೀರದು. ಸೌದೆ ಆಯಲು, ಸೊಪ್ಪು ತರಲು, ಔಷಧಿ ಸಸ್ಯಗಳನ್ನು ಬಳಸಿಕೊಳ್ಳಲು ಇವರಿಗೆ ಕಾಡಿನ ಪ್ರವೇಶವಿಲ್ಲ. ನುಗು, ತಾರಕ, ಕಬಿನಿ ನೀರಾವರಿ ಯೋಜನೆಗಳು ಜಾರಿಯಾದಾಗ ತಮ್ಮ ಪರಂಪರಾಗತ ಉಳುಮೆಯ ಭೂಮಿಯನ್ನು ಕಳೆದುಕೊಂಡಿರುವ ಆದಿವಾಸಿ ಸಂತ್ರಸ್ತರಿಗೆ ಭೂ ದಾಖಲಾತಿ ಇಲ್ಲ ಎನ್ನುವ ನೆಪವೊಡ್ಡಿ ಪರಿಹಾರ ನೀಡಲಾಗಿಲ್ಲ. ಅತ್ಯಂತ ದಾರುಣ ಬದುಕನ್ನು ಅನುಭವಿಸುತ್ತಿರುವ ಆದಿವಾಸಿಗಳು ಇಲ್ಲಿಯವರೆಗೂ ಬೂರ್ಜ್ವಾ ಪಕ್ಷಗಳ ಮತ ಬ್ಯಾಂಕಿನಂತೆ ಬಳಕೆಯಾಗಿದ್ದು, ಸ್ವಯಂ ಸೇವಾ ಸಂಸ್ಥೆಗಳು ವಿದೇಶಿ ದಾನವನ್ನು ಪಡೆಯಲು ಅವರ ಪ್ರಚಾರದ 'ಮಾಡೆಲ್' (ರೂಪದರ್ಶಿ)ಗಳಾಗಿಯೂ ಬಳಕೆಯಾಗುತ್ತಿದ್ದರು. ಒಂದೆಡೆ ಸರ್ಕಾರದ ಧೋರಣೆ ದಬ್ಬಾಳಿಕೆ, ಇನ್ನೊಂದೆಡೆ ಸ್ವಯಂ ಸೇವಾ ಸಂಸ್ಥೆಗಳ ವಂಚನೆಯನ್ನು ಅನುಭವಿಸಿದ ಆದಿವಾಸಿಗಳು ತಮ್ಮ ಹಕ್ಕುಗಳ ಸಂರಕ್ಷಣೆಗೆ ಆದಿವಾಸಿ ಅಭಿವೃದ್ಧಿ ಸಂಘವನ್ನು ಸ್ಥಾಪಿಸಿ ಪ್ರಜ್ಞೆಯ ಬಂಡಾಯದ ಬಾವುಟವನ್ನು ಹಾರಿಸಿದ್ದಾರೆ.

ನವೆಂಬರ್ 18ರಂದು ಹೆಗ್ಗಡ ದೇವನ ಕೋಟೆ ತಾಲ್ಲೂಕಿನಲ್ಲಿ ಪಕ್ಷವು ನೀಡಿದ್ದ ಆದಿವಾಸಿಗಳ ಬೇಡಿಕೆಯ ದಿನಾಚರಣೆಯ ಕರೆಗೆ ಸ್ವಯಂ ಸೇವಾ ಸಂಸ್ಥೆಗಳ ಆಮಿಷಗಳನ್ನು, ಪಟ್ಟಭದ್ರರ ಒತ್ತಡಗಳನ್ನು ಧಿಕ್ಕರಿಸಿ ನೂರಾರು ಆದಿವಾಸಿಗಳು ಸ್ಪಂದಿಸಿದರು.

ಬೆಳಗ್ಗಿನಿಂದಲೇ ದೂರದ ಹಾಡಿಗಳಿಂದ ಹತ್ತಾರು ವಾಹನಗಳಲ್ಲಿ ಬಂದಿಳಿದ ಆದಿವಾಸಿ ಮಹಿಳೆಯರು ಪಟ್ಟಣದ ಹೊರಭಾಗದಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಸೇರಿದರು. ಸುಮಾರು 500 ಜನರಿದ್ದ ಮೆರವಣಿಗೆ (ಬಹುತೇಕ ಮಹಿಳೆಯರು)ಯನ್ನು ತಾಲ್ಲೂಕು ಆದಿವಾಸಿ ಅಭಿವೃದ್ಧಿ ಸಂಘದ ಅಧ್ಯಕ್ಷ ಕಾಳಯ್ಯನವರು ಉದ್ಘಾಟಿಸಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಮಾಡಿದ ಆದಿವಾಸಿ ಜನಾಂಗದ ಮಹಾನ್ ನಾಯಕ ಬಿರ್ಸಾ ಮುಂಡಾ ಅವರ ಪರಂಪರೆಯನ್ನು ಸ್ವಾತಂತ್ರ್ಯ ನಂತರದಲ್ಲಿ ಆದಿವಾಸಿಗಳು ಮುಂದುವರೆಸಬೇಕಾದ ಅಗತ್ಯತೆಯನ್ನು ಹೇಳಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆಯು ಆದಿವಾಸಿಗಳ ಅರಣ್ಯದ ಹಕ್ಕು, ಶಿಕ್ಷಣ ಉದ್ಯೋಗದ ಅವಶ್ಯಕತೆ, ಹೋರಾಟದ ಮಹತ್ವ ಹಾಗೂ ಅಗತ್ಯತೆ, ಪರಿಶಿಷ್ಟ ಪಂಗಡಗಳ ಮಸೂದೆ 2005ನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲೇಬೇಕೆಂಬ ಹಕ್ಕೊತ್ತಾಯದ ಘೋಷಣೆಗಳನ್ನು ಹಾಕಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಪ್ರಭಾಕರ್ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಎನ್. ವಿಜಯಕುಮಾರ್, ಎಲ್.ಜಗನ್ನಾಥ್ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಪಕ್ಷದ ಮುಖಂಡರಾದ ಕಾಂ.ಶಿವಣ್ಣ, ಅಕ್ಬರ್‌ಪಾಶಾ, ಕೆಂಪಯ್ಯ ಚೌಡಳ್ಳಿ, ಆದಿವಾಸಿ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಕಾವೇರ, ಸಂಘದ ಮಹಿಳಾ ವಿಭಾಗದ ಅಧ್ಯಕ್ಷೆ ಮಹದೇವಮ್ಮ ನೇತೃತ್ವ ವಹಿಸಿದ್ದರು. ತಹಶೀಲ್ದಾರ ಕಛೇರಿಯ ಆವರಣದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಂಘದ ಪದಾಧಿಕಾರಿಗಳು, ಪಕ್ಷದ ಪ್ರಭಾಕರ, ವಿಜಯಕುಮಾರ್, ಶಿವಣ್ಣ ಮಾತನಾಡಿದರು. ಆದಿವಾಸಿಗಳ ಹಕ್ಕಿನ ಬಗ್ಗೆ ಸಿಪಿಐ(ಎಂ) ಪಕ್ಷವು ರಾಂಚಿಯಲ್ಲಿ ಸಂಘಟಿಸಿದ್ದ ಅಖಿಲ ಭಾರತ ಸಮಾವೇಶದ ಘೋಷಣೆಗಳನ್ನು ಮತ್ತು ಅದರ ಆಧಾರದಲ್ಲೇ ರಾಷ್ಟ್ರಮಟ್ಟದ ಆಂದೋಲನವನ್ನು ಜರುಗಿಸುವ ಬಗ್ಗೆ ಪಕ್ಷದ ನಾಯಕರು ಮಾತನಾಡಿದರು. ಆದಿವಾಸಿಗಳ ರಾಷ್ಟ್ರೀಯ ಹಾಗೂ ಸ್ಥಳೀಯ ಬೇಡಿಕೆಗಳನ್ನು ಪಟ್ಟಿ ಮಾಡಿ ಕಾಂ.ಅಕ್ಬರ್ ಪಾಷ ಸಭೆಯ ಗಮನಕ್ಕೆ ತಂದರು. ಈ ಬೇಡಿಕೆಗಳ ಪಟ್ಟಿಯನ್ನು ತಹಶೀಲ್ದಾರರಿಗೆ ಶಿವಣ್ಣ ಮತ್ತು ಶ್ರೀ ಕಾವೇರ ಅವರು ನೀಡಿದರು. ಸಭೆಯ ನಂತರ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಪಕ್ಷದ ಮುಖಂಡರೊಡನೆ ಸಂವಾದ ನಡೆಸಿದರು. ಆದಿವಾಸಿಗಳ ಸ್ಥಳೀಯ ಸಮಸ್ಯೆಯ ಆಧಾರದಲ್ಲಿ ಹೋರಾಟವನ್ನು ರೂಪಿಸುವ ಬಗ್ಗೆಯೂ ಚರ್ಚಿಸಲಾಯಿತು. ನವೆಂಬರ್ 18ರ ಈ ಕಾರ್ಯಕ್ರಮದಿಂದಾಗಿ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಆದಿವಾಸಿ ಸಮುದಾಯದ ಮಧ್ಯೆ ಪಕ್ಷವು ತನ್ನನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದೆ.





ವರದಿ :

ಎನ್.ವಿಜಯಕುಮಾರ್

ವಿರಾಜಪೇಟೆ: ಶಾಸಕರ ಕೈಗೊಂಬೆಯಾಗಿರುವ ಪೊಲೀಸರು, ಅವರ ದೌರ್ಜನ್ಯ

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯ ದೇವರಪುರದಲ್ಲಿ ಇದೇ ನವೆಂಬರ್ 11ರಂದು ರಾತ್ರಿ ಪಿರಿಯಾಪಟ್ಟಣದ ಮರದ ಮಿಲ್‌ನ ಮಾಲೀಕರೊಬ್ಬರ ಮೇಲೆ ಮಾರಣಾಂತಿಕವಾಗಿ ನಡೆದ ಹಲ್ಲೆ ನಡೆಸಿ, ದರೋಡೆಗೈದ ಪ್ರಕರಣ ಸಂಭವಿಸಿದೆ.

ಇದಕ್ಕೆ ಸಂಬಂಧಿಸಿ 13 ರಂದು ಸಂಜೆ 7 ಗಂಟೆ ಸುಮಾರಿಗೆ ತೀರಾ ಪರಿಚಿತನಾದ ಚಹದಂಗಡಿಯ ಮಾಲೀಕನೊಂದಿಗೆ (ಈ ಧರೋಡೆ ಹಿನ್ನೆಲೆಯಲ್ಲಿ ರಾತ್ರಿ 10 ರ ನಂತರ ಚಹಾದಂಗಡಿ ತೆರೆದಿರುವುದು ಬೇಡೆಂದು) ದೇವರಪುರ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರೂ, ಹಾಲಿ ಸದಸ್ಯರೂ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರೂ ಆದ ಕೃಷ್ಣಕುಮಾರ್‌ರವರು ಮಾತನಾಡುತ್ತಾ ನಿಂತಿದ್ದರು. ಅಲ್ಲಿಗೆ ಬಂದ ವಿರಾಜಪೇಟೆ ಡಿ.ವೈ.ಎಸ್.ಪಿ.ಯವರಾದ ವೆಂಕಟೇಶಪ್ಪ (ಸಮವಸ್ತ್ರದಲ್ಲಿ ಇರಲಿಲ್ಲ) ಹಾಗೂ ಗೋಣಿಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ನಾಗಪ್ಪನವರು ಕೃಷ್ಣಕುಮಾರ್‌ರವರನ್ನು ಕರೆದು ಏಕಾಏಕಿಯಾಗಿ, ಏಕವಚನದಲ್ಲಿ ಗದರಿಸಿದ್ದಾರೆ, ಕಾರಣವೇನೆಂದು ಕೇಳಿದಾಗ ತೀವ್ರವಾಗಿ ಹಲ್ಲೆನಡೆಸಿದ್ದಾರೆ, ಆ ನಂತರ ಜೀಪ್‌ನಲ್ಲಿ ಪೊನ್ನಂಪೇಟೆ ಪೋಲಿಸ್ ಠಾಣೆಗೆ ಕರೆದೊಯ್ದಿದ್ದಾರೆ. ಈ ಹಲ್ಲೆಯಿಂದಾಗಿ ಅವರ ಬಲಗಣ್ಣು ಹಾಗೂ ಮೂಗಿಗೆ ಏಟು ಬಿದಿದ್ದು ಮೂಳೆ ಮುರಿದಿದೆ. ಈ ಕುರಿತಂತೆ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದ ಬಳಿಕ ಅಲ್ಲಿ ಮೆಡಿಕಲ್ ಲೀಗಲ್ ಕೇಸ್‌ನ್ನು ದಾಖಲು ಮಾಡಿಕೊಳ್ಳದಂತೆ ಇದೇ ಪೋಲಿಸ್ ಅಧಿಕಾರಿಗಳು ವೈದ್ಯರ ಮೇಲೆ ಒತ್ತಡ ಹೇರಿದ್ದಾರೆ. ನಂತರ ಪೋಲಿಸ್ ಠಾಣೆಯೆದುರು ಸಾರ್ವಜನಿಕರು ಪ್ರತಿಭಟಿಸಿದ ನಂತರ ಕೃಷ್ಣಕುಮಾರ್ ರವರನ್ನು ಠಾಣೆಯಿಂದ ಹೊರಗೆ ಕಳಿಸಿದ್ದಾರೆ. ಮತ್ತು ಏನಾದರೂ ಮೊಕದ್ದಮೆ ಹೂಡಿದರೆ ಅಥವಾ ಮೇಲಾಧಿಕಾರಿಗಳಿಗೆ ದೂರು ನೀಡಿದರೆ ಜೈಲಿನಲ್ಲೇ ಕೊಳೆಯುವಂತೆ ಜಾತಿ ನಿಂದನೆ ಮುಂತಾದ ಹಲವು ಮೊಕದ್ದಮೆ ಹೂಡುವುದಾಗಿ ಬೆದರಿಸಿದ್ದಾರೆ.



ಕೃಷ್ಣಕುಮಾರ್


ವಿರಾಜಪೇಟೆ ತಾಲ್ಲೂಕು ಹಾಗೂ ಕೊಡಗಿನಲ್ಲಿ ಜನರ ಸಮಸ್ಯೆಗಳ ಪರಿಹಾರಕ್ಕೆ, ಅಭಿವೃದ್ಧಿಗಾಗಿ ನಡೆಯುವ ಹೋರಾಟಗಳಲ್ಲಿ ಕೃಷ್ಣಕುಮಾರ್‌ರವರು ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಕಾವೇರಿ ಸೈನದಂತಹ ಕಾನೂನು ಶಿಸ್ತನ್ನು ಉಲ್ಲಂಘಿಸುವ ಸಮಾಜ ವಿರೋಧಿ, ಶಕ್ತಿಗಳ ಹುನ್ನಾರಗಳ ಕೃತ್ಯಗಳನ್ನು ವಿರೋಧಿಸಿದ್ದಾರೆ. ಜನಸಂಪರ್ಕ ಸಭೆ ನಡೆಯುವಾಗ ಬಿಜೆಪಿ ಶಾಸಕ ಬಸರಾಜು ಅವರ ಭ್ರಷ್ಟಾಚಾರ, ಜನವಿರೋಧಿ ನೀತಿಗಳನ್ನು ಬಹಿರಂಗವಾಗಿ ಪ್ರಶ್ನಿಸಿದ್ದಾರೆ. ಇಂತಹ ಕಾವೇರಿ ಸೈನ್ಯ ಹಾಗೂ ಇತರೆ ಸ್ಥಾಪಿತ ಹಿತಾಸಕ್ತಿಗಳೊಂದಿಗೆ ನಿಕಟ ಸಂಬಂಧ ಇರಿಸಿಕೊಂಡಿರುವ ಮೇಲ್ಕಾಣಿಸಿದ ಪೋಲಿಸ್ ಅಧಿಕಾರಿಗಳು (ಜಿಲ್ಲಾ ಅಪರಾಧ ದಳದ ಇನ್‌ಸ್ಪೆಕ್ಟರ್ ಬಿ.ಆರ್.ಲಿಂಗಪ್ಪನವರು ಸಹ) ದೇವರಪುರದಲ್ಲಿ ಕೃಷ್ಣ ಕುಮಾರ್ ರವರ ಮೇಲೆ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ಈ ಹಲ್ಲೆ ನಡೆಸಿದ್ದಾರೆ. ಕೃಷ್ಣ ಕುಮಾರ್‌ರವರು ಜನತೆಯನ್ನು ಸಂಘಟಿಸುತ್ತಿರುವ ಪ್ರಗತಿಪರರು, ಎಲ್ಲಾ ಜಾತಿ-ಧರ್ಮದ ಜನರ ನಡುವೆ ಕೆಲಸ ಮಾಡುತ್ತಿದ್ದಾರೆ. ಇವರ ಮೇಲೆ, ಹಲ್ಲೆ ನಡೆಸುವ ಮೂಲಕ ಜನತೆಯ ಹೋರಾಟಗಳನ್ನು ದಮನ ಮಾಡಲು ಪೋಲಿಸ್ ಅಧಿಕಾರಿಗಳು ಮುಂದಾಗಿದ್ದಾರೆ. ಈ ಅಧಿಕಾರಿಗಳು ಸಿಪಿಐ(ಎಂ) ಪಕ್ಷದ ಮುಖಂಡರಿಗೂ ಜನರ ಸಂಘಟನೆಗಳ ನಾಯಕರಿಗೂ ಹಿಂದೆ ಬೆದರಿಕೆ ಒಡ್ಡಿದ್ದಾರೆ. ಶಾಸಕರು ಹಾಗೂ ಕೆಲವು ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಗಳಾಗಿ ಅಧಿಕಾರಿಗಳು ವರ್ತಿಸುತ್ತಿದ್ದಾರೆ.

ಈ ಹಿಂದೆ ಇದ್ದ ವಿರಾಜಪೇಟೆ -ಡಿವೈಎಸ್‌ಪಿ ಯವರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಕಂಠರವರು ನಿಷ್ಪಕ್ಷಪಾತವಾಗಿ ನಿಷ್ಠುರವಾಗಿ ಕಾರ್ಯ ನಿರ್ವಹಿಸಿ ಒಳ್ಳೆಯ ಕೆಲಸಗಳ ಮೂಲಕ ಪೋಲಿಸ್ ಇಲಾಖೆಗೆ ಹೆಸರು ತಂದಿದ್ದರು, ಆದರೆ ಈಗ ವೆಂಕಟೇಶಪ್ಪನವರು ಬಂದ ನಂತರ ಅಂತಹ ವಾತಾವರಣವೇ ಕೆಡುತ್ತಿದೆ. ಇವರ ಮೇಲೆ ಕಾನೂನು ಬಾಹಿರವಾದ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಗಳು ಇವೆಯೆಂಬುದನ್ನು ಗಮನಿಸಬೇಕು.

ಕೃಷ್ಣಕುಮಾರ್‌ರವರ ಮೇಲೆ ನಡೆದ ಹಲ್ಲೆಯು ಪೂರ್ವಯೋಜಿತವಾಗಿದ್ದು, ತಪ್ಪಿತಸ್ಥ ಪೋಲಿಸ್ ಅಧಿಕಾರಿಗಳ ಮೇಲೆ ನಿಷ್ಠುರ ಕ್ರಮ ಜರುಗಿಸಬೇಕು. ಅವರನ್ನು ಅಮಾನತುಗೊಳಿಸಿ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬೇಕು.

ಶುಭಾಶಯಗಳು

ಸ್ವಾತಂತ್ರ್ಯ ಹೋರಾಟಗಾರರು, ಸಿಪಿಎಂ ಪಕ್ಷದ ಹಿರಿಯ ಮುಖಂಡರೂ ಆದ ದೊಡ್ಡಬಳ್ಳಾಪುರದ ಶ್ರೀ ಹೆಚ್.ಮುಗುವಾಳಪ್ಪ ನವರ ಮೊಮ್ಮಗ ಶ್ರೀ ಡಿ.ಎನ್.ಸುನೀಲ್ ಮತ್ತು ಎನ್.ದಿವ್ಯ ಅವರ ವಿವಾಹ ದಿನಾಂಕ 20.11.2005ರಂದು ದೊಡ್ಡಬಳ್ಳಾಪುರದಲ್ಲಿ ನಡೆಯಿತು. ಈ ಸಂದರ್ಭದಲ್ಲಿ 'ಐಕ್ಯರಂಗ' ಪತ್ರಿಕೆಗೆ ಅವರು 2000 ರೂಗಳನ್ನು ಕೊಡುಗೆಯಾಗಿ ಕೊಟ್ಟಿರುತ್ತಾರೆ. ಐಕ್ಯರಂಗ ಬಳಗ ಸುನಿಲ್ ಮತ್ತು ದಿವ್ಯ ಅವರ ವೈವಾಹಿಕ ಜೀವನ ಸದಾ ಸುಖ, ಸಂತೋಷದಿಂದ ಕೂಡಿರಲಿ ಎಂದು ಶುಭಾಷಯ ಕೋರುತ್ತದೆ.




ಬಿಹಾರ ಫಲಿತಾಂಶ

ಜಾತ್ಯತೀತ ಶಕ್ತಿಗಳಿಗೆ ಎಚ್ಚರಿಕೆ

ಹದಿನೈದು ವರ್ಷಗಳ ನಂತರ, ಇತ್ತೀಚಿನ ವಿಧಾನಸಭೆ ಚುನಾವಣೆಗಳ ಮೂಲಕ ಬಿಹಾರದ ರಾಜಕಾರಣದಲ್ಲಿ ಬದಲಾವಣೆಯಾಗಿದೆ. ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ ಮತ್ತು ಹರಿಯಾಣಗಳಲ್ಲಿ ಮತದಾರರು ಆಡಳಿತಾರೂಢ ಪಕ್ಷಗಳ ವಿರುದ್ಧ ಅಪಾರ ಪ್ರಮಾಣದಲ್ಲಿ ಮತ ಚಲಾಯಿಸಿದ್ದರು. ಇದೀಗ ಬಿಹಾರದ ಜನತೆ ರಾಜಕೀಯ ನಾಯಕತ್ವದ ಬದಲಾವಣೆಯತ್ತ ನೋಟ ಹರಿಸಿದ್ದಾರೆ.

ಜಾತ್ಯಾತೀತ ಶಕ್ತಿಗಳ ಪರವಾದ ಮತಗಳ ವಿಭಜನೆಯು ಕೋಮುಶಕ್ತಿಗಳು ಅಧಿಕಾರಕ್ಕೆ ಬರಲು ನೆರವಾಗಲಿವೆ ಎಂದು ಚುನಾವಣೆ ಪ್ರಕ್ರಿಯೆಯ ಆರಂಭದಿಂದಲೂ ಸಿಪಿಐ(ಎಂ) ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾ ಬಂದಿತ್ತು. ಅದು ಈಗ ನಿಜವಾಗಿದೆ. ಇಲ್ಲಿ ಮತ್ತೊಂದು ಗಣನೀಯವಾದ ಅಂಶ ಎಂದರೆ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಆರ್‌ಜೆಡಿ ಪಕ್ಷ ಗಳಿಸಿರುವ ಮತ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಳ ಕಂಡಿದೆ. ಕಳೆದ ಫೆಬ್ರವರಿಯಲ್ಲಿ ನಡೆದ ಚುನಾವಣೆಯಲ್ಲಿ ವಿವಿಧ ಸ್ವತಂತ್ರ ಪಕ್ಷಗಳು ಗಳಿಸಿದ್ದ ಮತ ಪ್ರಮಾಣದಲ್ಲಿ ತೀವ್ರ ಕುಸಿತ ಉಂಟಾಗಿದ್ದು, ಜೆಡಿಯು ಬಿಜೆಪಿ ಮೈತ್ರಿಕೂಟಕ್ಕೆ ಲಾಭದಾಯಕವಾಗಿ ಪರಿಣಮಿಸಿದೆ. ಜಾತ್ಯಾತೀತ ಪಕ್ಷಗಳ ಮತಗಳಲ್ಲಿಯ ವಿಭಜನೆಯು ಜೆಡಿಯು ಬಿಜೆಪಿ ಮೈತ್ರಿಕೂಟಕ್ಕೆ ಲಾಭದಾಯಕವಾಗಿರುವುದು ಇದರಿಂದ ದೃಢಪಟ್ಟಿದೆ.


ನಿತೀಶ್‌ಕುಮಾರ್

ಜಾತಿ ಪ್ರಾಬಲ್ಯ ಹೊಂದಿರುವ ಬಿಹಾರದ ರಾಜಕಾರಣದಲ್ಲಿ, ಹಿಂದುಳಿದ ಮತ್ತು ತುಳಿತಕ್ಕೊಳಪಟ್ಟಿರುವ ಜಾತಿ ಸಮುದಾಯಗಳ ನಡುವಿನ ಮತ ವಿಭಜನೆಯು ಬಿಜೆಪಿ, ಜೆಡಿಯು ಮೈತ್ರಿ ಕೂಟದ ಪ್ರಭಾವಿ ಜಾತಿಗಳ ಅಭ್ಯರ್ಥಿಗಳ ಗೆಲುವಿಗೆ ಕಾರಣವಾಗಿದೆ. ಮುಸ್ಲೀಮರು-ಯಾದವರನ್ನು ಮತ್ತು ಹಿಂದುಳಿದ ಜನಾಂಗಗಳನ್ನು ದೀರ್ಘಕಾಲದಿಂದ ನಿರ್ಲಕ್ಷಕ್ಕೊಳಪಡಿಸಿದ್ದರಿಂದ ಮತಗಳಿಸಲು ನಡೆಸಿದ ಅವರ ಒಗ್ಗಟ್ಟಿನ ತಂತ್ರವೂ ಫಲಿಸಲಿಲ್ಲ.

ಜಾತ್ಯಾತೀತ ಶಕ್ತಿಗಳು ವಿಘಟನೆಯಾದ ಸಂದರ್ಭಗಳಲ್ಲಿ ಕೋಮುವಾದಿ ಶಕ್ತಿಗಳಿಗೆ ಲಾಭದಾಯಕವಾಗಿರುವುದನ್ನು ಬಿಹಾರದಲ್ಲಿ ನಡೆದ ಈ ಹಿಂದಿನ ಚುನಾವಣೆಗಳಲ್ಲಿ ಖಚಿತಪಡಿಸಿವೆ. ಜಾತ್ಯಾತೀತ ಶಕ್ತಿಗಳನ್ನು ಒಂದೇ ಚುನಾವಣಾ ವೇದಿಕೆಗೆ ತರುವುದು ಮಾತ್ರ ಕೋಮುವಾದಿ ಪಕ್ಷಗಳನ್ನು ಹಿಮ್ಮೆಟ್ಟಿಸಬಲ್ಲದು. 1998ರ ಲೋಕಸಭೆ ಚುನಾವಣೆಗಳಲ್ಲಿ ಜಾತ್ಯಾತೀತ ಪಕ್ಷಗಳು ವಿಭಜನೆಯಾಗಿದ್ದರಿಂದ ಕೋಮುವಾದಿ ಪಕ್ಷಗಳು ಗೆಲುವು ಸಾಧಿಸಿದವು. ಆದರೆ 2004ರ ಚುನಾವಣೆಗಳಲ್ಲಿ ಜಾತ್ಯಾತೀತ ಪಕ್ಷಗಳು ಒಗ್ಗಟ್ಟಾಗಿದ್ದರಿಂದ ಕೋಮುವಾದಿ ಶಕ್ತಿಗಳು ಹೀನಾಯ ಸೋಲನ್ನನುಭವಿಸಿದ್ದವು. ಬಿಹಾರದ 40 ಲೋಕಸಭಾ ಸ್ಥಾನಗಳಲ್ಲಿ ಕಾಂಗ್ರೆಸ್, ಆರ್‌ಜೆಡಿ ಲೋಕಜನಶಕ್ತಿ ಪಕ್ಷಗಳು ಶೇ.43.3 ಪ್ರಮಾಣ ಮತಗಳಿಸಿ 29 ಸ್ಥಾನಗಳಲ್ಲಿ ಜಯಗಳಿಸಿದ್ದವು.

ಆರ್.ಜೆ.ಡಿ.ಯ ಆಡಳಿತ ವೈಫಲ್ಯವು ಚುನಾವಣೆಗಳ ಮೇಲೆ ಪರಿಣಾಮ ಬೀರಿದ ಮತ್ತೊಂದು ಕಾರಣವಾಗಿದೆ. ಕಳೆದ ಫೆಬ್ರುವರಿ ಚುನಾವಣೆಗಳಲ್ಲಿ ಆರ್‌ಜೆಡಿ ಅಧಿಕಾರವನ್ನು ಕಳೆದುಕೊಂಡರೂ 75 ಸ್ಥಾನಗಳಿಸಿ ವಿಧಾನಸಭೆಯಲ್ಲಿ ದೊಡ್ಡ ಪಕ್ಷವಾಗಿತ್ತು. 2004ರ ಲೋಕಸಭಾ ಚುನಾವಣೆಯಲ್ಲಿ ಆರ್‌ಜೆಡಿ ಶೇ.30.7ರಷ್ಟು ಮತ ಪ್ರಮಾಣ ಗಳಿಸಿತ್ತು. ಆದರೆ ಇಂದಿನ ಚುನಾವಣೆಯಲ್ಲಿ ಮತ ಪ್ರಮಾಣದೊಂದಿಗೆ ಸ್ಥಾನಗಳ ಸಂಖ್ಯೆ 54ಕ್ಕೆ ಕುಸಿದಿದೆ.

ಕೇರಳ : ಎಲ್‌ಡಿಎಫ್ ಗೆ ಜಯ

ಕೇರಳ ರಾಜ್ಯದ ಮಾಜಿ ಮುಖ್ಯಮಂತ್ರಿ ಸಿಪಿಐನ ನಾಯಕ ಪಿ.ಕೆ.ವಾಸುದೇವ ನಾಯರ್‌ರವರು ನಿಧನದಿಂದ ತೆರವಾಗಿದ್ದ ತಿರುವನಂತಪುರ ಲೋಕಸಭಾ ಸ್ಥಾನದ ಉಪಚುನಾವಣೆಯಲ್ಲಿ ಎಡಪ್ರಜಾಸತ್ತಾತ್ಮಕ ರಂಗದ ಪರವಾಗಿ ಸ್ಪರ್ಧಿಸಿದ್ದ ಸಿಪಿಐ ಪಕ್ಷದ ಅಭ್ಯರ್ಥಿ ಪಾನ್ಯನ್ ರವೀಂದ್ರನ್‌ರವರು 74,027 ಮತಗಳ ಅಂತರದಿಂದ ಆಡಳಿತಾತ್ಮಕ ಯುಡಿಎಫ್‌ನ ಪ್ರಮುಖ ಪಕ್ಷವಾದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ್ದಾರೆ. ಕೇರಳದ ಜನತೆ ಎಲ್‌ಡಿಎಫ್‌ನ್ನು ಬೆಂಬಲಿಸಿರುವುದು ಸ್ಪಷ್ಟವಾಗಿದೆ.

ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ರಮೇಶ್ ಚೆನ್ನಿತ್ತಾಲರವರು ಆರ್‌ಎಸ್‌ಎಸ್‌ನ ಮತಗಳು ಎಲ್‌ಡಿಎಫ್‌ಗೆ ವರ್ಗಾವಣೆ ಆಗಿರುವುದರಿಂದಾಗಿ ಎಲ್‌ಡಿಎಫ್‌ಗೆ ಗೆಲುವು ಸಾಧ್ಯವಾಗಿದೆ ಎಂದು ಆರೋಪಿಸಿದ್ದಾರೆ. ಆದರೆ ಸತ್ಯ ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿದೆ ಎಂಬುದು ಕೇರಳ ಜನತೆಗೆ ಗೊತ್ತಿಲ್ಲದ್ದೇ ಏನಿಲ್ಲ.


ಪಾಂ. ಪಿ.ರವೀಂದ್ರನ್

ಕೇರಳದಲ್ಲಿ ಸಿಪಿಐ(ಎಂ) ಪಕ್ಷದ ವಿರುದ್ಧ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ವಿರುದ್ಧ ಆರ್‌ಎಸ್‌ಎಸ್ ಬಿಜೆಪಿಗಳು ನಡೆಸುವ ಕುತಂತ್ರ ಕಸರತ್ತುಗಳು ಕೊನೆಗೆ ಆರ್‌ಎಸ್‌ಎಸ್ ತನ್ನ ಬದ್ಧ ವೈರಿ ಎಂದು ಬಿಂಬಿಸಿಕೊಳ್ಳುವ ಮುಸ್ಲಿಂ ಲೀಗ್‌ನೊಂದಿಗೆ ಸಹ ಈ ವಿಚಾರದಲ್ಲಿ ಕೈಗೋಡಿಸಲು ಸಂಘ ಪರಿವಾರ ಹಿಂಜರಿಯುವುದಿಲ್ಲ ಎಂಬ ವಿಚಾರ ಇಡೀ ಕೇರಳದ ಜನತೆಗೆ ಗೊತ್ತಿದೆ.

ಇದಕ್ಕೆ ಬೇಕಾದ ಎಲ್ಲಾ ಬಗೆಯ ಸಾಕ್ಷಿಗಳೂ ಸಿಗುತ್ತವೆ. 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ರಾಜಗೋಪಾಲ್‌ರು ಇದೇ ತಿರುವನಂತಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ 2,28,052 ಮತಗಳನ್ನು ಪಡೆದಿದ್ದರು. ಪ್ರಸಕ್ತ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿಗೆ ದಕ್ಕಿದ್ದು ಕೇವಲ 34,373 ಮತಗಳು ಮಾತ್ರ. ಏನಾದವು ಮಿಕ್ಕ ಮತಗಳು. ಬಿಜೆಪಿ ಕೇರಳ ರಾಜ್ಯ ಘಟಕ ಅಧ್ಯಕ್ಷರಾದ ಟಿ.ಎಸ್.ಶ್ರೀಧರನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಕಾರಣ ಏನು ಗೊತ್ತೇ? ಈ ಚುನಾವಣೆಯಲ್ಲಿ ಆರ್‌ಎಸ್‌ಎಸ್ ಬಿಜೆಪಿಯನ್ನು ಬೆಂಬಲಿಸಿಲ್ಲ, ಬಿಜೆಪಿಗೆ ಮತ ಹಾಕಿಲ್ಲ ಎಂದೂ ಅವರು ದೂರಿ ಈ ರಾಜಿನಾಮೆ ನೀಡಿದ್ದಾರೆ.

ಕಾಂಗ್ರೆಸ್, ಆರ್‌ಎಸ್‌ಎಸ್ ಗುಪ್ತ ಮೈತ್ರಿಗೆ ಇದಕ್ಕಿಂತ ಸಾಕ್ಷಿ ಮತ್ತೇನು ಬೇಕಿದೆ?

ಮಹಾರಾಷ್ಟ್ರ - ಬಿಜೆಪಿ - ಶಿವಸೇನೆ ಕೂಟಕ್ಕೆ ಸೋಲು

ಮಹಾರಾಷ್ಟ್ರದ ಮುಂಬೈ ವಾಯುವ್ಯ ಲೋಕಸಭಾ ಕ್ಷೇತ್ರಕ್ಕೆ ಹಿರಿಯ ಕಾಂಗ್ರೆಸ್ ಧುರೀಣ ಕಲಾವಿದ ಸುನಿಲ್‌ದತ್‌ರ ನಿಧನದಿಂದ ಉಪಚುನಾವಣೆ ನಡೆಯಿತು. ಸುನಿಲ್‌ದತ್ತರ ಪುತ್ರಿ ಪ್ರಿಯಾದತ್ ಇಲ್ಲಿ ವಿಜಯಗಳಿಸಿದ್ದಾರೆ. ಇಡೀ ದೇಶದ ಗಮನ ಸೆಳೆದ ಮಹಾರಾಷ್ಟ್ರದ ಮತ್ತೊಂದು ಕ್ಷೇತ್ರ ಮಾಲ್ವನ್ ವಿಧಾನಸಭಾ ಕ್ಷೇತ್ರ. ಶಿವಸೇನೆಯ ಪ್ರಬಲ ನೆಲೆ ಎಂದೇ ಪರಿಗಣಿಸಲಾಗಿದ್ದ ಕೊಂಕಣ ಪ್ರದೇಶದ ಈ ಕ್ಷೇತ್ರದಲ್ಲಿ ಹಿಂದೆ ಶಿವಸೇನೆಯ ರಾಜ್ಯ ಶಿವಸೇನೆಯ ರಾಜ್ಯ ಮುಖಂಡರಾಗಿ, ಮಹಾರಾಷ್ಟ್ರದ ಮುಖ್ಯಮಂತ್ರಿಯೂ ಆಗಿದ್ದ ನಾರಾಯಣ ರಾಣೆ ಇತ್ತೀಚೆಗೆ ಶಿವಸೇನೆ ತೊರೆದು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರಿಂದ ಈ ಕ್ಷೇತ್ರದ ಫಲಿತಾಂಶವೂ ಜನರ ಕುತೂಹಲಕ್ಕೆ ಕಾರಣವಾಗಿತ್ತು. ಈ ಕ್ಷೇತ್ರದಲ್ಲಿ ರಾಣೆ ವಿರುದ್ಧ ಸ್ಪರ್ಧಿಸಿದ್ದ ಶಿವಸೇನೆಯ ಅಭ್ಯರ್ಥಿ ಪರಶುರಾಮ ಉಪಾರ್ಕರ್ ಠೇವಣಿ ಕಳೆದುಕೊಂಡಿದ್ದಾರೆ. 78,616 ಮತ ಗಳಿಸಿರುವ ನಾರಾಯಣ ರಾಣೆ 63,372 ಮತಗಳ ಭಾರಿ ಅಂತರದಿಂದ ಜಯ ಸಾಧಿಸಿದ್ದಾರೆ. ಈ ಗಂಭೀರ ಚುನಾವಣಾ ಸೋಲು ಶಿವಸೇನೆಯಲ್ಲಿ ಹೊಸ ಬಿಕ್ಕಟ್ಟಿಗೆ ನಾಂದಿ ಹಾಡಿದಂತೆ ಕಾಣುತ್ತಿದೆ. ಮುಂದೇನಾಗಲಿದೆ ನೋಡಬೇಕು.

ಶೋಷಿತ ಸಮುದಾಯದ ಕೆಂಪು ಸೂರ್ಯ

ಶೋಷಿತ ಸಮುದಾಯದ ಕೆಂಪು ಸೂರ್ಯ
ಕಾರ್ಲ್‌ಮಾರ್ಕ್ಸ್
ಧರ್ಮ ದೇವರುಗಳಿಂದ
ತಳಮಟ್ಟಕ್ಕೆ ತುಳಿಸಿಕೊಂಡು
ರಕ್ತ ಬೆವರಾಗಿಸಿದವರಿಗೆ
ಶತಶತಮಾನಗಳಿಂದ ನ್ಯಾಯ ಸಿಗಲಿಲ್ಲ
ಚಿಂದಿಗೆ ತೇಪೆ ಹಾಕುವವರಿಗೆ,
ತಲೆಗೆ ತಲೆ ತಗ್ಗಿಸಿದವರಿಗೆ
ಹೊಸಬಟ್ಟೆ, ಹಿಡಿ ಅನ್ನಕ್ಕೆ
ತುಂಡು ಭೂಮಿಯ ಕನಸು ಬಿತ್ತಿದವನು
ಹಂಚಿ ತಿನ್ನುವವರನ್ನು ಹರಿದು ತಿಂದವರ
ಪ್ರಭುತ್ವಗಳ ಅಡಿಗಲ್ಲು ಸಡಿಲಿಸಿ
ಬಂದಿಯಾಗಿದ್ದ ಸೂರ್ಯನ ಸೆರೆ ಹರಿದು
ಹೊರ ತಂದವನು
ದುಡಿದುಡಿದು ನಡ ಬಗ್ಗಿಸಿದವರು
ನಾಜೂಕಿನ ಅವ್ಯವಸ್ಥೆಯ ನಡ ಮುರಿದು
ಸ್ವಾಭಿಮಾನದಿಂದ ಎದೆಯುಬ್ಬಿಸಿ
ಸಮಾನತೆಯ ಕಹಳೆಯನೂದಲು
ಶತಮಾನಗಳ ವೈಭವದ ಅಧಿಪತ್ಯಗಳ
ಸಂಕೋಲೆಗಳಲ್ಲಿ ಸದ್ದಗಿದವರಿಗೆ
ದಟ್ಟ ಮುಸುಕ ಹರಿದು ಬಂದು
ಜಗತ್ತು ಗೆಲ್ಲಲು ತೋರಿಸಿದ
ಉಳ್ಳವರ ಹಂಗಿನಿಂದ ದೂರ ಸರಿದು
ಇಲ್ಲದವರ ಶ್ರಮ ಶಕ್ತಿ ಬೆಸೆದು
ಸಮ ಸಮಾಜದ ಸಮತಾ ಜ್ವಾಲೆಯುಕ್ಕಿಸಿ
ಧನಿಕರೆದೆಂತು ಮಿಡಿತ ನಿಲ್ಲಿಸಿದ
ಅಂತರಗಳ ಅನಂತ ಕಂದಕಗಳ ಮುಚ್ಚು
'ತನ್ನ'ದನ್ನು ತಳ್ಳಿ, 'ನಮ್ಮ'ದನ್ನು ಜಾರಿಗೊಳಿಸಿ
ಎಲ್ಲಾರಿಗೂ ಪಾಲು, ಎಲ್ಲಾರಿಗೂ ಬಾಳು
ತೋರಿಸಿದ ಕರಿಯೊಡಲ ನೋವಿನ ಕೆಂಪುಸಿರು
ನೆಲದೊಡಲಲ್ಲಿ ಏಂದವರು ಎದೆ
ತಟ್ಟಿ ನಿಲ್ಲಲಿಲ್ಲ, ಕುಳಿತುಂಡವರ
ಸಿಂಹಾಸನಗಳು ಸ್ವಾಗತ ಕೋರಲು
'ಕ್ರಾಂತಿ'ಯ ಬಿರುಗಾಳಿ ಸೃಷ್ಟಿಸಿದ.
ನೊಂದವರ ಎದೆಯಲ್ಲಿ ಅಡಗಿದ್ದ
ಜ್ವಾಲೆಗಳ ಕುಲುಮೆಯಲ್ಲಿ ಜಗತ್ತನ್ನು
ಕೆಂಪಗೆ ಕಾಸಿ ಬಡಿದ ಕ್ರಾಂತಿಕಾರಿ
ನೆಮ್ಮದಿಯ ನಾಳೆಯ ಕೆಂಪು ಸೂರ್ಯ

- ವೀರಣ್ಣ ಕಲ್ಲಾನಿ ಬಾಚಿಗೊಂಡನಹಳ್ಳಿ.

ಹೊಸ ಹೊಸ ಸವಾ
ಚಿಮ್ಮಿ ಬರುತ್ತಿರುವ ವಿದ್ಯಾ

ಸಾಮಾಜಿಕ ನ್ಯಾಯ, ದೇಶದ ಬೌದ್ಧಿಕ ಸ್ವಾವಲಂಬನೆ ಹಾಗೂ ಶೈಕ್ಷಣಿಕ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಒಗ್ಗಟ್ಟಾಗಿ ಹೋರಾಡೋಣವೆಂಬ ಘೋಷಣೆಯೊಂದಿಗೆ ಎಸ್‌ಎಫ್‌ಐನ 11ನೇ ಅಖಿಲ ಭಾರತ ಸಮ್ಮೇಳನ ನಡೆದ ಸುಮಾರು 33 ತಿಂಗಳ ಅವಧಿಯಲ್ಲಿ ಶಿಕ್ಷಣ ರಂಗದಲ್ಲಿ ಆಗಿರುವ ಬದಲಾವಣೆ ಶಿಕ್ಷಣದ ಪರಿಕಲ್ಪನೆಯಲ್ಲಿ ಆಗಿರುವ ಪಲ್ಲಟಗಳ ಬಗೆಗೆ ಜಾಗತೀಕರಣದ ಭಾಗವಾಗಿ ಆಗುತ್ತಿರುವ ಶಿಕ್ಷಣದ ತೀವ್ರ ಖಾಸಗೀಕರಣದ ಪ್ರವೃತ್ತಿಗಳ ಬಗೆಗೆ ತಮ್ಮ ಮೇಲೆ ಹೇರಲಾಗುತ್ತಿರುವ ನಿರ್ದಯ ನೀತಿಗಳ ವಿರುದ್ಧ ಸಿಡಿದೆದ್ದಿರುವ ವಿದ್ಯಾರ್ಥಿ ಚಳುವಳಿಯ ಬಗೆಗೆ, ಹೊಮ್ಮಿ ಬಂದಿರುವ ಹೋರಾಟಗಳನ್ನು ಸಂಘಟನಾತ್ಮಕವಾಗಿ ಕ್ರೋಢೀಕರಿಸಿ ಚಳುವಳಿಯನ್ನು ವಿಸ್ತರಿಸುವ ವಿಧಾನದ ಬಗೆಗೆ ಶಿಕ್ಷಣದ ಸರಕೀಕರಣಕ್ಕೆ ಕುಮ್ಮಕ್ಕು ನೀಡುವ ಘನ ನ್ಯಾಯಾಲಯಗಳ ಅತಿ ಕ್ರಿಯಾಶೀಲತೆಯ ಬಗೆಗೆ ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ತರಲಾಗುತ್ತಿರುವ ಗಂಭೀರ ಕುತ್ತುಗಳ ಬಗೆಗೆ ಸಮ್ಮೇಳನ ಆಳವಾದ ಚರ್ಚೆ ನಡೆಸಿದೆ. ವಿದ್ಯಾರ್ಥಿ ಚಳುವಳಿಯ ಇತ್ತೀಚಿನ ಮಹತ್ತರ ಸಾಧನೆ ಕೊರತೆಗಳನ್ನು ಅವಲೋಕಿಸಿರುವ ಸಮ್ಮೇಳನ ಚಳುವಳಿ ಸಂಘಟನೆಯ ಮುಂದಿನ ದಾರಿಯ ಕುರಿತು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ. ಸಮ್ಮೇಳನದ ವರದಿ ಗುರುತಿಸಿದ ಅಂಶಗಳು-ಪ್ರತಿನಿಧಿಗಳ ಚರ್ಚೆಯ ಸಾರ ಹೀಗಿದೆ.

ಬದಲಾಗುತ್ತಿರುವ ಶಿಕ್ಷಣದ ಪರಿಕಲ್ಪನೆ ಶಿಕ್ಷಣ ರಂಗದಲ್ಲಿನ ಪಲ್ಲಟಗಳು

ಶಿಕ್ಷಣದ ಕುರಿತ ಕಲ್ಪನೆಗಳು ಇಂದು 60-70 ದಶಕದಲ್ಲಿದ್ದಂತೆ ಇಲ್ಲ. 80-90 ದಶಕಗಳಲ್ಲಿ ಆರಂಭವಾದ ಶಿಕ್ಷಣ ರಂಗದಲ್ಲಿನ ಪಲ್ಲಟ, ಬದಲಾವಣೆಗಳ ವೇಗ ಇಂದು ತೀವ್ರಗೊಂಡಿದೆ. ವಿಜ್ಞಾನ ತಂತ್ರಜ್ಞಾನಗಳಲ್ಲಿ ಆಗಿರುವ ಅಗಾಧ ಪ್ರಗತಿ ಬೆಳವಣಿಗೆಗಳು ಶಿಕ್ಷಣದ ತಿರುಳಿನಲ್ಲಿ ಬಹಳಷ್ಟು ಬದಲಾವಣೆ ತಂದು ಹೊಸ ಹೊಸ ಕೋರ್ಸುಗಳನ್ನು ಹುಟ್ಟಿಹಾಕಿವೆ. ರಾಜಕೀಯ ನೀತಿ ಮತ್ತು ಶಿಕ್ಷಣ ನೀತಿಗಳು ಜನವಿರೋಧಿ ದಾರಿ ಹಿಡಿದಿರುವ ಜಾಗತೀಕರಣದ ಈ ಸಂದರ್ಭದಲ್ಲಿ ಈ ಹೊಸ ಹೊಸ ವಿಜ್ಞಾನ ತಂತ್ರಜ್ಞಾನದ ಕೋರ್ಸುಗಳು ಶಿಕ್ಷಣ ರಂಗದಲ್ಲಿ ಬಡ ಮತ್ತು ಶ್ರೀಮಂತ ಕೋರ್ಸುಗಳು ಮತ್ತು ಬಡ ಮತ್ತು ಶ್ರೀಮಂತ ವಿದ್ಯಾರ್ಥಿ ಸಮುದಾಯಗಳ ನಡುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿವೆ.

ವೃತ್ತಿಶಿಕ್ಷಣ : ಹೊರ ಚಾಚಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಕೋರೆಹಲ್ಲು

ಸ್ವಲ್ಪ ಮರೆಯಲ್ಲಿದ್ದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಕೋರೆ ಹಲ್ಲುಗಳು 2002 ಅಕ್ಟೋಬರ್ 31ರ ಟಿ.ಎಂ.ಎ. ಪೈ ಫೌಂಡೇಷನ್ ಪ್ರಕರಣದ

ನವೆಂಬರ್ 17 ರಿಂದ 21 2005 ರವರೆಗೆ ಆಂಧ್ರಪ್ರದೇಶ ಹೈದರಾಬಾದ್‌ನಲ್ಲಿ ನಡೆದ ಎಸ್ಸೆಫ್ಐನ 12ನೇ ಅಖಿಲ ಭಾರತ ಸಮ್ಮೇಳನ ಬಹಿರಂಗ ಸಭೆ-ಉದ್ಘಾಟನಾ ಸಮಾರಂಭದ ವರದಿಗಳನ್ನು ಕಳೆದ ವಾರ ಓದಿದ್ದೀರಿ. ಪ್ರತಿನಿಧಿ ಅಧಿವೇಶನದ ಚರ್ಚೆಯ ಸಾರ, ಸಮ್ಮೇಳನದ ತೀರ್ಮಾನಗಳ ಕುರಿತು ಈ ವಾರ ಓದಿ

ತೀರ್ಪಿನ ನಂತರ ನಿರ್ಲಜ್ಜವಾಗಿ ಹೊರಚಾಚಿಕೊಂಡಿವೆ.

ಶಿಕ್ಷಣ ನೀಡುವ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿರುವ ಕೇಂದ್ರ ರಾಜ್ಯ ಸರ್ಕಾರಗಳ ಧೋರಣೆಯಿಂದಾಗಿ ಈ ಖಾಸಗಿ ಶಿಕ್ಷಣ ಸಂಸ್ಥೆಗಳು ಒಂದೆಡೆ ವ್ಯಾಪಕವಾಗುತ್ತಿದ್ದರೆ ಮತ್ತೊಂದೆಡೆ ಈ ಶಿಕ್ಷಣ ಸಂಸ್ಥೆಗಳಲ್ಲಿನ ಗುಣಮಟ್ಟ ನಿಯಂತ್ರಿಸಬೇಕಾದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE), ಭಾರತ ವೈದ್ಯಕೀಯ ಮಂಡಳಿ (MCI) ಯಂತಹ ಸಂಸ್ಥೆಗಳು ಸರ್ಕಾರಗಳ ಉದಾರೀಕರಣ ನೀತಿಗಳ ಫಲವಾಗಿ ಹಲ್ಲುಕಿತ್ತ ಹಾವಿನಂತಾಗಿವೆ.

ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ



'35 ವರ್ಷಗಳ ಅಭ್ಯಾಸ-ಹೋರಾಟ-ತ್ಯಾಗ' ಕಾರ್ಯಕ್ರಮದಲ್ಲಿ ಎಸ್ಸೆಫ್ಐನ ಹಾಲಿ-ಮಾಜಿ ಅಖಿಲಭಾರತ ಅಧ್ಯಕ್ಷರುಗಳೂ ಹಾಗೂ ಪ್ರಧಾನ ಕಾರ್ಯದರ್ಶಿಗಳು

ಪ್ರವೇಶ ನೀತಿ ಶುಲ್ಕ ಸ್ವರೂಪವನ್ನು ನಿಯಂತ್ರಿಸಲು ಸರ್ಕಾರಗಳಿಗೆ ಯಾವುದೇ ರೀತಿಯ ಅಧಿಕಾರವಿಲ್ಲ ಎನ್ನುವ 'ಟಿಎಂಎ ಪೈ ಫೌಂಡೇಷನ್' ಪ್ರಕರಣದ ತೀರ್ಪಿನ ನಂತರ ಸರ್ಕಾರಗಳು ನಡೆಸುತ್ತಿರುವ ನಿರಂತರ ಹುಸಿ 'ಕಾನೂನು ಸಮರ'ವೆಂಬ 'ಕಾನೂನು ಸಮುದ್ರ ಮಥನ'ದಲ್ಲಿ ಅಮೃತ ಹುಟ್ಟಲೇ ಇಲ್ಲ. ಹುಟ್ಟಿದ್ದೆಲ್ಲಾ ಬಹುತೇಕ ಹಾಲಾಹಲ. 'ಇಸ್ಲಾಮಿಕ್ ಅಕಾಡೆಮಿ' ಪ್ರಕರಣದಲ್ಲಿ ಅದೇ ಹಳೆಯ 'ಟಿಎಂಎ ಪೈ ಫೌಂಡೆಷನ್' ಪ್ರಕರಣದ ತೀರ್ಪಿನ ಛಾಯೆಯೇ ಮುಂದುವರಿಯಿತು. 'ಪಿ.ಎ.ಇನಾಂದಾರ್' ಪ್ರಕರಣದಲ್ಲಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಯಾವ ಬಗೆಗೆ ಸಾಮಾಜಿಕ ಮೀಸಲಾತಿಯ ನೀತಿಯನ್ನು ಪಾಲಿಸಬೇಕಿಲ್ಲವೆಂಬ ಅಮೋಘ ನಿರ್ದೇಶನವನ್ನು ನ್ಯಾಯಾಲಯ ನೀಡಿತು. ನ್ಯಾಯಾಲಯಗಳ ಜನಪರತೆ ಎಂಬ ತೋರು ಪರದೆ ಕಳಚಿಬಿದ್ದು ನ್ಯಾಯಾಂಗದ ಬತ್ತಲೆ ದೇಹವನ್ನು ಜನತೆ ಕಂಡು ಕಸಿವಿಸಿ ಪಡುವಂತಾಗಿದೆ.

ಖಾಸಗಿ ಮತ್ತು ಖಾಸಗಿ ಸ್ವಾಯತ್ತ ವಿವಿ (Demed Univesity)ಗಳ ದಾಳಿ

ನಮ್ಮ ದೇಶದ ಸಂವಿಧಾನ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡುವುದಿಲ್ಲ. ಹಗ್ಗ ತಿನ್ನುವ ಹನುಮಂತರಾಯನಿಗೆ ಅಕ್ಕಿ ಶ್ಯಾವಿಗೆ ಯಾವ ಲೆಕ್ಕ ಎಂದಂತೆ ಸಂವಿಧಾನವನ್ನೇ ಪರಾಮರ್ಶೆ ನಡೆಸಿ ಸಂವಿಧಾನದ ಅಡಿಗಲ್ಲುಗಳನ್ನೇ ಅಲುಗಾಡಿಸಲು ಹೊರಟಿದ್ದ ಬಿಜೆಪಿ ನೇತೃತ್ವ ಸರ್ಕಾರಕ್ಕೆ ಇವೆಲ್ಲಾ ಯಾವ ಲೆಕ್ಕ. ವಿಶ್ವ ವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಕಾಯ್ದೆಗೆ ತಿದ್ದುಪಡಿ ತಂದ ಸರ್ಕಾರ ಖಾಸಗಿ ಸ್ವಾಯತ್ತ ವಿಶ್ವ ವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಮಾಡಿಯೇಬಿಟ್ಟಿತು. 1995ರಲ್ಲಿ ಮಂಡಿಸಲಾದ ಖಾಸಗಿ ವಿ.ವಿ. ಮಸೂದೆ ಅಂಗೀಕಾರವಾಗದೇ ನಿರಾಶರಾಗಿರುವ ಶಿಕ್ಷಣೋದ್ಯಮಿಗಳಿಗೆ ಬಿಜೆಪಿ ಸರ್ಕಾರವೇ ಇಂತಹ ಕಳ್ಳ ಕಿಂಡಿ ತೋರಿಸಿದ್ದರಿಂದ ದೇಶದಲ್ಲಿ ನಾಯಿಕೊಡೆಗಳಂತೆ ಖಾಸಗಿ ವಿಶ್ವ ವಿದ್ಯಾಲಯಗಳು ಹುಟ್ಟಿಕೊಂಡವು. ಇನ್ನು ಶಿಕ್ಷಣ ರಂಗದಲ್ಲಿ ಕೋಮುವಾದದ ವಿಷವನ್ನು ಹರಡುವ ಎನ್‌ಡಿಎ ಸರ್ಕಾರ ಯತ್ನಗಳ ಬಗ್ಗೆ ಹೇಳುವಂತೆಯೇ ಇಲ್ಲ.

ರಾಷ್ಟ್ರ ರಾಜಕೀಯದಲ್ಲೊಂದು ಹೊಸ ಹೊರಳು - ಶಿಕ್ಷಣ ರಂಗದಲ್ಲಿ ಕೆಲವು ಸಕಾರಾತ್ಮಕ ಹೆಜ್ಜೆಗಳು

2004ರ ಚುನಾವಣೆಗಳನ್ನು ಬಳಸಿ ಕೋಮುವಾದಿ ಜನವಿರೋಧಿ ಶಿಕ್ಷಣ ವಿರೋಧಿ ದುಷ್ಟ ಎನ್‌ಡಿಎ ಕೂಟಕ್ಕೆ ಜನತೆ ಕೊಟ್ಟ ಹೊಡೆತ ಐತಿಹಾಸಿಕವಾದದ್ದು. ಈಗ ಎಡಪಕ್ಷಗಳ ಬಾಹ್ಯಬೆಂಬಲದಿಂದಾಗಿ ಅಧಿಕಾರಕ್ಕೆ ಬಂದಿರುವ ಕೇಂದ್ರ ಯುಪಿಎ ಸರ್ಕಾರ ಅದೇ ಕಾರಣಕ್ಕೆ ಶಿಕ್ಷಣದ ವಿಚಾರದಲ್ಲಿ ಕೆಲವಾದರೂ ಸಕಾರಾತ್ಮಕ ನಿರ್ಧಾರ ಕೈಗೊಂಡಿದೆ.

ಪೂರ್ಣ ತೃಪ್ತಿಕರವಲ್ಲವಾದರೂ ಆರ್.ಎಸ್.ಎಸ್ ಪ್ರೇರಿತ ವಿಚಾರಗಳಿಂದ ವಿಷಮಯವಾಗಿದ್ದ ಪಠ್ಯಗಳಿಂದ ವಿಷ ತೆಗೆಯುವ ಮತ್ತು ಶೈಕ್ಷಣಿಕ ಆಡಳಿತಾತ್ಮಕ ಸಂಸ್ಥೆಗಳಿಂದ ಮತಾಂಧರನ್ನು ಹೊರಗಟ್ಟುವ ಕೆಲವು ಕೆಲಸಗಳನ್ನು ಯು.ಪಿ.ಎ ಸರ್ಕಾರ ಕೈಗೊಂಡಿದ್ದು ಸಕಾರಾತ್ಮಕ ಬೆಳವಣಿಗೆಯಾದರೂ ಈ ನಿಟ್ಟಿನಲ್ಲಿ ಇನ್ನೂ ಬಹಳಷ್ಟು ಕೆಲಸ ಆಗಬೇಕಿದೆ.

ಶಿಕ್ಷಣ ತಜ್ಞರು ಜನಪರ ಚಿಂತಕರುಗಳ ಶಿಫಾರಸ್ಸುಗಳನ್ನು ತಿಪ್ಪೆಗೆಸೆದಿದ್ದ ಎನ್‌ಡಿಎ ಸರ್ಕಾರವು ದೇಶದ ದೊಡ್ಡ ಬಂಡವಾಳಶಾಹಿ ಪ್ರತಿನಿಧಿಗಳಿಂದ ಕೂಡಿದ 'ಬಿರ್ಲಾ-ಅಂಬಾನಿ' ಸಮಿತಿಯ ಶಿಫಾರಸ್ಸನ್ನು ಒಪ್ಪಿಕೊಂಡು 'ಯು.ಜಿ.ಸಿ ಮಾದರಿ ಕಾಯ್ದೆ' ಎಂಬುದೊಂದನ್ನು ರೂಪಿಸಿತ್ತು. ಉನ್ನತ ಶಿಕ್ಷಣದಲ್ಲಿ ಕೇಂದ್ರ ರಾಜ್ಯ ಸರ್ಕಾರಗಳಿಗೆ ಯಾವುದೇ ಪಾತ್ರವೂ ಇರಬಾರದು ಅದು ಪೂರ್ಣವಾಗಿ ಖಾಸಗಿ ಧಣಿಗಳು ಉದ್ದಿಮೆದಾರರ ಆಣತಿಯಂತೆ ಅವರ ಹಿಡಿತದಲ್ಲಿರಬೇಕೆಂಬುದೇ 'ಬಿರ್ಲಾ-ಅಂಬಾನಿ' ವರದಿಯ ಸಾರ. ಇಂತಹ ಶಿಕ್ಷಣ ವಿರೋಧಿ ಯುಜಿಸಿ ಮಾದರಿ ಕಾಯ್ದೆಯನ್ನು ಯುಪಿಎ ಸರ್ಕಾರ ರದ್ದು ಮಾಡಬೇಕಾಗಿ ಬಂದದ್ದು ಒಂದು ಮಹತ್ವದ ವಿಚಾರ. ವಿದ್ಯಾರ್ಥಿ ಚಳುವಳಿಯ ಒಂದು ಹಂತದ ಜಯ.

ಆರ್.

ಕೇಂದ್ರ ಶಿಕ್ಷಣ ಸಲಹಾ ಮಂಡಳಿ (CABE) ಎಂಬುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರತಿನಿಧಿಗಳನ್ನೊಳಗೊಂಡ ಶಿಕ್ಷಣ ನೀತಿ ನಿರೂಪಕ ಅಂಗಗಳಲ್ಲಿ ಒಂದು ಮುಖ್ಯ ಸಂಸ್ಥೆ. ವೈವಿಧ್ಯಮಯ ಭಾಷೆ, ಸಂಸ್ಕೃತಿ, ಸಾಮಾಜಿಕ ಭಿನ್ನತೆಗಳ ಭಾರತದಂತಹ ಒಂದು ಒಕ್ಕೂಟ ರಾಜ್ಯದಲ್ಲಿ ಈ CABE ಯಂತಹ ಸಂಸ್ಥೆಗಳ ಪಾತ್ರ ಶಿಕ್ಷಣದ ನೀತಿ ನಿರೂಪಣೆಯ ವಿಚಾರದಲ್ಲಿ ಬಹಳ ಮುಖ್ಯ. ಕಳೆದ 12 ವರ್ಷಗಳಿಂದ ಈ CABEಯ ಸಭೆಯೇ ಸೇರದಂತಹ ಪರಿಸ್ಥಿತಿ ಇತ್ತು. ಆದರೆ ಶಿಕ್ಷಣ ಪರ ಶಕ್ತಿಗಳ ಒತ್ತಡ ಹೋರಾಟಗಳಿಂದ ಇತ್ತೀಚಿಗೆ ಈ ಸಭೆ ನಡೆದಿದ್ದು ಒಂದು ಗಮನಾರ್ಹ ವಿಚಾರ.

ಹಾಗೇ ಉಳಿದದ್ದು ಹಲವು

ಹಿಂದಿನ ಎನ್‌ಡಿಎ ಸರ್ಕಾರ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಮಸೂದೆಯೊಂದನ್ನು ಅಂಗೀಕರಿಸಿತು. ಹಾಸ್ಯಾಸ್ಪದ ವಿಚಾರವೆಂದರೆ ಈ ಮಸೂದೆಯ ಪ್ರಕಾರ ಮಕ್ಕಳಿಗೆ ಶಿಕ್ಷಣ ನೀಡುವ

ನೂತನ ಸಮಿತಿ

ಎಸ್ಸೆಫ್ಐನ ನೂತನ ಕೇಂದ್ರ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಆಂಧ್ರ ಪ್ರದೇಶದ ಸಂಗಾತಿ ಕಾಂ. ಅರುಣ್ ಕುಮಾರ್ - ಕಳೆದ ಅವಧಿಗೆ ಅಧ್ಯಕ್ಷರಾಗಿದ್ದ ಕಾಂ. ಕೆ.ಕೆ.ರಾಘೇಶ್ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಒಟ್ಟು 17 ಜನರ ಕೇಂದ್ರ ಕಾರ್ಯದರ್ಶಿ ಮಂಡಳಿಗೆ ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ. ಬಿ.ರಾಜಶೇಖರ ಮೂರ್ತಿ ಯವರು ಆಯ್ಕೆಯಾಗಿ ದ್ದಾರೆ. ನೂತನ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ. ಹೆಚ್.ಆರ್. ನವೀನಕುಮಾರ್ ಕೋಲಾರ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕಾಂ. ಪಿ.ಮುನಿ ವೆಂಕಟಪ್ಪ, ರಾಜ್ಯ ಸಮಿತಿ ಸದಸ್ಯೆ ಕಾಂ. ಚಂದ್ರಕಲಾ ರವರು ಆಯ್ಕೆಯಾಗಿದ್ದಾರೆ.


ಆರ್.ಅರುಣ್‌ಕುಮಾರ್
ನೂತನ ಅಧ್ಯಕ್ಷರು


ಕೆ.ಕೆ.ರಾಘೇಶ್
ನೂತನ ಪ್ರ.ಕಾರ್ಯದರ್ಶಿ


ಬಿ.ರಾಜಶೇಖರಮೂರ್ತಿ


ಎಚ್.ಆರ್.ನವೀನಕುಮಾರ್


ಪಿ.ಮುನಿವೆಂಕಟಪ್ಪ


ಚಂದ್ರಕಲಾ

ಜವಾಬ್ದಾರಿ ಸರ್ಕಾರದ್ದಲ್ಲ. ಮಗುವಿನ ತಂದೆ ತಾಯಿಗಳದ್ದು. ಹೇಗಿದೆ ಕಣ್ಕಟ್ಟು ವ್ಯವಹಾರ. ಯುಪಿಎ ಸರ್ಕಾರವಾದರೂ ಈ ಬಗ್ಗೆ ಏನಾದರೂ ಮಾಡಬಹುದೇ ಎಂದು ನೋಡಿದರೆ ಅದೂ ಇದೇ ಬಗೆಯ ಮ್ಯಾಜಿಕ್‌ಗೆ ಮೊರೆ ಹೋಗುವ ಆತ್ಮವಂಚಕ ದಾರಿಯನ್ನು ಅಯ್ಕೆ ಮಾಡಿಕೊಂಡಿದೆಯೆಂಬುದು ಸ್ಪಷ್ಟವಾಗುತ್ತಿದೆ. ಎನ್‌ಡಿಎ ಸರ್ಕಾರ ಅಂಗೀಕರಿಸಿರುವ ಮಸೂದೆಯಲ್ಲಿ 6-14ರ ನಡುವಿನ ವಯೋಮಾನದ ಮಕ್ಕಳ ಬಗೆಗೆ ಮಾತನಾಡಿರುವುದು ಬಿಟ್ಟರೆ 6ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಶಿಕ್ಷಣದ ಬಗ್ಗೆ ಏನನ್ನು ಮಾತನಾಡಿಲ್ಲ, ಮಗುಂ ಆಗಿದೆ. ಅಂಗನವಾಡಿ, ಬಾಲವಾಡಿಗಳನ್ನು ಖಾಸಗೀಕರಣ ಮಾಡುವ ಯೋಜನೆ ಕೈಯಲ್ಲಿರುವಾಗ ಪೂರ್ವ ಪ್ರಾಥಮಿಕ ಶಿಕ್ಷಣದ ಬಗೆಗೆ ಪಾಪ ಸರ್ಕಾರ ಏನು ಮಾತನಾಡೀತು?

ಅಲ್ಪಸಂಖ್ಯಾತ ಶಿಕ್ಷಣ ಆಯೋಗ :

...ಲುಗಳು
...೯ ಚಳುವಳಿ

ಯುಪಿಎ- ಕೇಂದ್ರ ಸರ್ಕಾರವು ಅಲ್ಪಸಂಖ್ಯಾತ ಶಿಕ್ಷಣ ಅಯೋಗವೊಂದನ್ನು ರಚಿಸಿದೆ. ಅಲ್ಪಸಂಖ್ಯಾತ ಸಮುದಾಯ ಅದರಲ್ಲಿಯೂ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿರುವುದು ನಿಜ. ಆದರೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಬಗೆಗೆ ಸರ್ಕಾರದ ವಿವರಣೆ ಆತಂಕಕಾರಿಯಾಗಿದೆ. ಅಲ್ಪಸಂಖ್ಯಾತ ವ್ಯಕ್ತಿಗಳು ಅಥವಾ ಸಂಸ್ಥೆ ನಡೆಸುವ ಸಂಸ್ಥೆಗಳನ್ನು 'ಅಲ್ಪಸಂಖ್ಯಾತ ಸಂಸ್ಥೆ' ಎನ್ನಲಾಗಿದೆ. ಆದರೆ 'ಅಲ್ಪಸಂಖ್ಯಾತ ಸಂಸ್ಥೆ ಎಂಬ ಹೆಸರಿನಲ್ಲಿ ಸರ್ಕಾರದಿಂದ ಪಡೆದುಕೊಳ್ಳುವ ಅವಕಾಶ, ಆಧ್ಯತೆಗಳು ಆ ಸಮುದಾಯದ ವಿದ್ಯಾರ್ಥಿಗಳಿಗೆ ತಲುಪುವುದೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಯಾವ ವಿಚಾರವೂ ಕಾನೂನಿನಲ್ಲಿಲ್ಲ. ಈ ವಿಶೇಷ ಹಕ್ಕಿನ ದುರುಪಯೋಗದ ಬಗೆಗೆ ಕ್ರಮಗಳೂ ಇಲ್ಲ.

ಇದು ಸಾಲದೆಂಬಂತೆ ಆಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಮಿಸಲಾತಿ ಕಲ್ಪಿಸುವ ಅನಗತ್ಯ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಚಾರಿತ್ರಿಕವಾಗಿ ಮುಸ್ಲಿಂ ಸಮುದಾಯ ಶೈಕ್ಷಣಿಕ ಪ್ರಗತಿಯ ಉದ್ದೇಶದಿಂದ ಆರಂಭವಾಗಿದ್ದರೂ ಈಗ ಜಾತಿ ಮತಗಳ ಗಡಿಗಳನ್ನು ಮೀರಿ ಶೈಕ್ಷಣಿಕ ಉದ್ದೇಶವನ್ನು ಪೂರೈಸುತ್ತಿರುವ ಈ ಸಂಸ್ಥೆಯಲ್ಲಿ ಮತೀಯ ಮೀಸಲಾತಿ ಅಗತ್ಯವೇನೂ ಇರಲಿಲ್ಲ. ಸರ್ಕಾರ ತನ್ನ ಘೋಷಿತ ಉದ್ದೇಶದಲ್ಲಿ ಪ್ರಾಮಾಣಿಕವಾಗಿದದ್ದೇ ಆಗಿದ್ದಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಶೈಕ್ಷಣಿಕ ಪ್ರಗತಿಗಾಗಿ ಮಾಡಬೇಕಾದ ಬೇರೆ ಕೆಲಸಗಳು ಬಹಳಷ್ಟಿವೆ.


ಸಮ್ಮೇಳನದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ವಿದೇಶಿ ವಿ.ವಿ. ಹಾಗೂ ಶಿಕ್ಷಣ ರಂಗದಲ್ಲಿ ವಿದೇಶಿ ಬಂಡವಾಳಕಾಣಬೇಕಿದೆ ಹಳುವಿನ ಹಿಂದಿನ ಗಾಳ

ಭಾರತದ ಶಿಕ್ಷಣ ರಂಗದಲ್ಲಿ ಶೇ 100 ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ನೀಡಲು ಹಾಗೂ ವಿದೇಶಿ ವಿಶ್ವವಿದ್ಯಾಲಯಗಳನ್ನು ರತ್ನಗಂಬಳಿ ಹಾಸಿ ಸ್ವಾಗತಿಸಲು ಕೇಂದ್ರ ಸರ್ಕಾರ ತುದಿಗಾಲ ಮೇಲೆ ನಿಂತಿದೆ. ವಿಶ್ವ ವಾಣಿಜ್ಯ ಸಂಘಟನೆ (WTO) ಷರತ್ತುಗಳ ಭಾಗವಾಗಿ - 'ಗ್ಯಾಟ್ಸ್' (General Agreement on Trade and Services) ಒಪ್ಪಂದವನ್ನು ಜಾರಿಗೊಳಿಸಲು ಸಕಲ ಸಿದ್ಧತೆಗಳನ್ನು ಸರ್ಕಾರ ಮಾಡಿಕೊಂಡಿದೆ. ಸಮಾಜದ ಸರ್ವತೋಮುಖ ಪ್ರಗತಿಯ ಪ್ರೇರಕ ಶಕ್ತಿಯಾಗಬೇಕಾದ ಹಾಗೂ ಸಾಮಾಜಿಕ ಆರ್ಥಿಕ ಪರಿವರ್ತನೆಯ ಸಾಧನವಾಗಬೇಕಾದ ಶಿಕ್ಷಣ ಜಾಗತೀಕರಣ ಯುಗದಲ್ಲಿ ಒಂದು ವ್ಯಾಪಾರದ ಸರಕಾಗಿ ಪರಿಗಣಿತವಾಗಲಿದೆ. ಏಕೆಂದರೆ ಸೇವಾ ವಲಯದ ಭಾಗವಾಗಿ ಶಿಕ್ಷಣವೂ ಸಹ ಇಂದು WTO ವ್ಯಾಪ್ತಿಗೆ ಬರುತ್ತಿದೆ.

ಆಳುವ ನಮ್ಮ ಸರ್ಕಾರಗಳ ಹೊಣೆಗೇಡಿತನ ಎಷ್ಟಿದೆ ಎಂದರೆ ಶಿಕ್ಷಣ ರಂಗದಲ್ಲಿ ವಿದೇಶಿ ಬಂಡವಾಳ-ವಿದೇಶಿ ವಿವಿಗಳಿಗೆ ಸಂಬಂಧಿಸಿ ವಿವಿಧ ದೇಶಗಳ ಅನುಭವದಿಂದ ಯಾವ ಪಾಠವನ್ನು ಕಲಿಯಲೂ ಇವು ಸಿದ್ಧವಿಲ್ಲ. ಸ್ವತಃ ಅಮೆರಿಕಾ ದೇಶವು ವಯಸ್ಕ ಶಿಕ್ಷಣ - ಅನೌಪಚಾರಿಕ ಶಿಕ್ಷಣದಂತಹ ಅಷ್ಟೇನು ಆಯಕಟ್ಟಿನ ವಿಭಾಗವಲ್ಲದ ಶಿಕ್ಷಣದ ಕ್ಷೇತ್ರಗಳಲ್ಲಿ ಮಾತ್ರ ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿದೆ. ಮುಖ್ಯಧಾರೆಯ ಶಿಕ್ಷಣ ಕ್ಷೇತ್ರದಲ್ಲಿ ಈ ಅವಕಾಶ ನೀಡಿಲ್ಲ. ಇದು ಒಂದು ಮುಖವಾದರೆ ಅತ್ಯುನ್ನತ ತಂತ್ರಜ್ಞಾನ ವಿಜ್ಞಾನ-ಶೈಕ್ಷಣಿಕ ಕೋರ್ಸುಗಳೊಂದಿಗೆ ತಮ್ಮ ದೇಶಕ್ಕೆ ವಿದೇಶಿ ವಿ.ವಿ.ಗಳು ಬರುತ್ತವೆ ಎಂಬ ಭ್ರಮೆಯಲ್ಲಿ ಕಾದಿರುವ ಮೂರನೇ ಜಗತ್ತಿನ ದೇಶಗಳಿಗೆ ದೊಡ್ಡ ನಿರಾಶೆ ಕಾದಿದೆ. ಈ ವಿಚಾರದಲ್ಲಿ ಬೇರೆ ಬೇರೆ ದೇಶಗಳ ಅನುಭವ ಏನೆಂದರೆ ಈ ಮೇಲಿನ ನೀತಿಗಳಿಂದ ದೈತ್ಯ ಬಹುರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳ ಲೂಟಿಗೆ ಮಾತ್ರ ಅವಕಾಶವಾಗುತ್ತದೆ. ಅವು ಯಾವ ಹೊಸ ತಂತ್ರಜ್ಞಾನವನ್ನು ಕೊಡುವುದಿಲ್ಲ. ಮುಂದುವರಿದ ದೇಶಗಳಲ್ಲಿ ನಿರುಪಯುಕ್ತವೆಂದು ಪರಿಗಣಿಸಿದ ಕೋರ್ಸುಗಳನ್ನು ಆರಂಭಿಸಿ ಹಣ ಸುಲಿಯುತ್ತವೆ. ಅವು ಮಾಹಿತಿ ತಂತ್ರಜ್ಞಾನದ ವಿಷಯದಲ್ಲಿ ತಂತ್ರಜ್ಞಾನ ನೀಡಲು ಸಿದ್ಧವಿವೆ. ಆದರೆ ಭಾರತಕ್ಕೆ ಅವು ಅನಿವಾರ್ಯವಲ್ಲದ ತಂತ್ರಜ್ಞಾನ. ಇನ್ನು ಅತಿಥಿ ಸತ್ಕಾರದಂತಹ (Receptionist) ಕೋರ್ಸುಗಳನ್ನು ಅವು ತಮ್ಮೊಂದಿಗೆ ಹೊತ್ತು ತರುತ್ತವೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಈ ದೇಶಗಳಿಗೆ ಲಗ್ಗೆ ಇಡುವ ಬಹುರಾಷ್ಟ್ರೀಯ ಕಂಪನಿಗಳ ಲೂಟಿ-ಸುಲಿಗೆಯನ್ನು ಮರೆಮಾಚಿ ಅವರನ್ನು ಸ್ವಾಗತಿಸುವುದು ಹೇಗೆ, ಸತ್ಕರಿಸುವುದು ಹೇಗೆಂದು ನಮಗೆ ಹೇಳಿ ಕೊಡಲಿವೆ. ದೇಶದ ಬೌದ್ಧಿಕ ಸಾರ್ವಭೌಮತೆಯ ಪ್ರತೀಕಗಳಂತಿರಬೇಕಾದ ವಿಶ್ವ ವಿದ್ಯಾಲಯಗಳಲ್ಲಿ ವಿದೇಶಿ ಹಣಕಾಸು ಬಂಡವಾಳಕ್ಕೆ ಡೊಗ್ಗು ಸಲಾಮು ಹೊಡೆಯುವ ಬೌದ್ಧಿಕ ಜೀತದಾಳುಗಳನ್ನು ರೂಪಿಸುವ ಸಮಾಜ ವಿಜ್ಞಾನಗಳನ್ನು, ಸಿದ್ಧಾಂತಗಳನ್ನು ಸಹ ವಿದೇಶಿ ವಿ.ವಿ.ಗಳು ಖಂಡಿತ ತರುತ್ತವೆ. ನಮ್ಮ ದೇಶದ ಆಳುವ ವರ್ಗಗಳಿಗೆ ಸಹ ಇದರಲ್ಲಿ ಬಹಳ ಪ್ರಯೋಜನವಿದೆಯಲ್ಲವೇ? ಹಾಗಿದ್ದ ಮೇಲೆ ಅವರು ಯಾಕಾದರೂ ಅದನ್ನು ವಿರೋಧಿಸಿಯಾರು?

ಇವೆಲ್ಲ ಉನ್ನತ ಶಿಕ್ಷಣರಂಗದ ಪ್ರಶ್ನೆಗಳಾದರೆ ಪ್ರಾಥಮಿಕ ಶಿಕ್ಷಣಸೇರಿದಂತೆ ಒಟ್ಟು ಶಿಕ್ಷಣದ ಪ್ರಶ್ನೆಯೂ ಸಮ್ಮೇಳನದ

ಪುಟ 12 ಕ್ಕೆ

ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘ ಚುನಾವಣೆಗಳಲ್ಲಿ ಎಸ್‌ಎಫ್‌ಐ ಜಯಭೇರಿ

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಸಂಕೇತವಾಗಿರುವ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ರದ್ದುಪಡಿಸಿ ಹಲವಾರು ವಿ.ವಿಗಳಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ನಿರಂತರವಾಗಿ ಈ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಾ ಬಂದಿರುವ ಎಸ್‌ಎಫ್‌ಐ ಸಂಘಟನೆ ಪ್ರಸ್ತುತ ಚಾಲ್ತಿಯಲ್ಲಿರುವ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾರಿ ಮುನ್ನಡೆಯನ್ನು ಗಳಿಸಲು ಯಶಸ್ವಿಯಾಗಿದೆ. ಬಹಳ ಪ್ರಮುಖವಾಗಿ ಭಾರತದ ಪ್ರತಿಷ್ಠಿತ ವಿ.ವಿಯಲ್ಲೊಂದಾದ ಜವಹರಲಾಲ್ ನೆಹರು ವಿ.ವಿ(ಜೆ.ಎನ್.ಯು)ಯ ಜೊತೆಗೆ ಹಿಮಾಚಲ ಪ್ರದೇಶದ ವಿ.ವಿ, ಹೈದರಾಬಾದ್ ವಿ.ವಿ ಮತ್ತು ಮಹಾರಾಷ್ಟ್ರದ ಮರಾಠವಾಡ ವಿ.ವಿ (ನಾಡೆಡ್)ಗಳಲ್ಲಿ ಶಕ್ತಿ ಪ್ರದರ್ಶನವಾಗಿದೆ.

ಜೆ.ಎನ್.ಯು

ಜವಹರಲಾಲ್ ನೆಹರು ವಿ.ವಿ.ಗೆ ನಡೆದ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್‌ಎಫ್‌ಐ, ಎಐಎಸ್‌ಎಫ್‌ನ ಪ್ರತಿಸ್ಪರ್ಧಿಗಳಾಗಿ ಎ.ವಿ.ವಿ.ಪಿ, ಎನ್.ಎಸ್.ಯು.ಐ. ಮತ್ತು ಎ.ಐ.ಎಸ್.ಎ ಸಂಘಟನೆಗಳು ಇದ್ದವು. ಜೆ.ಎನ್.ಯು ವಿದ್ಯಾರ್ಥಿ ಸಂಘದ ಚುನಾವಣೆ ಎಂದರೆ ಅದು ದೇಶದ ವಿದ್ಯಾರ್ಥಿ ರಂಗದ ಮತ್ತು ವಿ.ವಿ.ಗಳ ನಡುವಿನ ಒಂದು ಪ್ರಮುಖ ಘಟ್ಟ. ಇಲ್ಲಿ ಚುನಾವಣಾ ಪ್ರಚಾರಗಳು ನಡೆಯುವ ಸಂದರ್ಭದಲ್ಲೇ ಇಡೀ ವಿ.ವಿ.ಯ ಕ್ಯಾಂಪಸ್‌ನಲ್ಲಿ ಒಂದು ದೊಡ್ಡ ರಾಜಕೀಯ ಚರ್ಚೆಯನ್ನೇ ಹುಟ್ಟುಹಾಕುತ್ತದೆ. ಬಹಳ ಹಿಂದಿನಿಂದ ಎಸ್‌ಎಫ್‌ಐ ಇಲ್ಲಿಯ ಚುನಾವಣೆಯಲ್ಲಿ ಜಯಭೇರಿ ಭಾರಿಸುತ್ತಾ ಮುನ್ನಡೆಯುತ್ತಿದ್ದು ಈ ಬಾರಿಯ ಚುನಾವಣೆ ಇದಕ್ಕೆ ಹೊರತೇನಲ್ಲ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಸ್‌ಎಫ್‌ಐ, ಎಐಎಸ್‌ಎಫ್‌ನ ಅಭ್ಯರ್ಥಿಯನ್ನು ಸೋಲಿಸಲು ಎಬಿವಿಪಿಯು ತನ್ನ ಎಲ್ಲ ಮತಗಳನ್ನು ಎ.ಐ.ಎಸ್.ಎ. ಸಂಘಟನೆಯ ಅಭ್ಯರ್ಥಿಗೆ ನೀಡುವ ಮೂಲಕ ಗೆಲ್ಲಲಾಗಿದೆ. ಅಧ್ಯಕ್ಷ ಸ್ಥಾನವೊಂದನ್ನು ಹೊರತುಪಡಿಸಿ ಉಳಿದಂತಹ ಪ್ರಮುಖ ಸ್ಥಾನಗಳಾದ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಸ್ಥಾನಗಳನ್ನು ಎಸ್‌ಎಫ್‌ಐ, ಎಐಎಸ್‌ಎಫ್ ಉಳಿಸಿಕೊಂಡಿದೆ. ಇದರ ಜೊತೆಗೆ 16 ಜನ ಕೌನ್ಸಿಲರ್ಸ್‌ಗಳನ್ನು ಗೆಲ್ಲಲು ಸಾಧ್ಯವಾಗಿದೆ.

ಹಿಮಾಚಲ ಪ್ರದೇಶ ವಿ.ವಿ.

ಹಿಮಾಚಲ ಪ್ರದೇಶ ವಿಶ್ವ ವಿದ್ಯಾಲಯದಲ್ಲಿ ಬಿ.ಜೆ.ಪಿ - ಎ.ವಿ.ವಿ.ಪಿ, ಎನ್‌ಎಸ್‌ಯುಐ ಮತ್ತು ಎಪಿಎಸ್‌ಎಸ್‌ಗಳ ತೀವ್ರ ಪ್ರತಿರೋದದ ನಡುವೆಯೂ ಅಲ್ಲಿನ ವಿದ್ಯಾರ್ಥಿಗಳು ಮತ್ತೊಮ್ಮೆ ಎಸ್‌ಎಫ್‌ಐನ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ತಮ್ಮ ಜಾತ್ಯಾತೀತ ಧರ್ಮನಿರಪೇಕ್ಷ ಪ್ರಗತಿಪರ ಮೌಲ್ಯಗಳನ್ನು ಎತ್ತಿಹಿಡಿದು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಚಲಾಯಿಸಿದ್ದಾರೆ. 4 ಪ್ರಮುಖ ಸ್ಥಾನಗಳಿಗೆ ನೇರ ಪ್ರತಿಸ್ಪರ್ಧಿಯಾಗಿದ್ದ ಎಬಿವಿಪಿಯ ಅಭ್ಯರ್ಥಿಗಳನ್ನು ಸೋಲಿಸಿದ್ದು ಎಸ್‌ಎಫ್‌ಐನ ಅಭ್ಯರ್ಥಿಗಳಾದ ವಿಕ್ರಮ್‌ಸಿಂಗ್ ಅಧ್ಯಕ್ಷರಾಗಿ, ಹೇಮಾ ಠಾಕೂರು ಪ್ರಧಾನ ಕಾರ್ಯದರ್ಶಿ, ಜೋಗಿಂದರ್‌ಕುಮಾರ್ ಮತ್ತು ಕಲ್ಪನಾ ಕನ್ವರ್ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇದರ ಜೊತೆಗೆ ವಿಭಾಗವಾರು ನಡೆಯುವ ಪ್ರತಿನಿಧಿಗಳ ಆಯ್ಕೆಯಲ್ಲಿ ಎಸ್‌ಎಫ್‌ಐ ಹಿಂದೆ ಬಿದ್ದಿಲ್ಲ. ಒಟ್ಟು 25 ಸ್ಥಾನಗಳಲ್ಲಿ ಎಸ್‌ಎಫ್‌ಐ 16 ರನ್ನು ಗೆದ್ದರೆ ಉಳಿದ ಎಲ್ಲ ಸಂಘಟನೆಗಳಿಂದ 9 ಸ್ಥಾನಗಳನ್ನು ಗಳಿಸಿದ್ದಾರೆ.

ಹೈದರಾಬಾದ್ ವಿ.ವಿ

ಐತಿಹಾಸಿಕ ಪ್ರಸಿದ್ಧವಾದ ಹೈದರಾಬಾದ್ ನಗರದಲ್ಲಿರುವ ಹೈದರಾಬಾದ್ ವಿ.ವಿಯಲ್ಲಿ, ಒಂದೆಡೆ ಮತಾಂಧ ಶಕ್ತಿಗಳು, ಜಾತಿವಾದಿ ಶಕ್ತಿಗಳು ಪ್ರಾಬಲ್ಯದ ನಡುವೆ ನಿರಂತರವಾಗಿ ವಿದ್ಯಾರ್ಥಿರಂಗದ ಮೇಲಿನ ಶೈಕ್ಷಣಿಕ ಧಾಳಿಗಳನ್ನು ಎದುರಿಸಿ ವಿದ್ಯಾರ್ಥಿಗಳ ಮೂಲಭೂತ ಸೌಕರ್ಯಗಳಿಗಾಗಿ ನಿರಂತರ ಹೋರಾಟಗಳನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳ ನಡುವೆ ಜಾತ್ಯಾತೀತ ಮನೋಭಾವವನ್ನು ಬೆಳೆಸಲು ಎಸ್‌ಎಫ್‌ಐ ಸಫಲವಾಗಿದ್ದರ ಪರಿಣಾಮವಾಗಿ 6 ಪ್ರಮುಖ ಸ್ಥಾನಗಳಲ್ಲಿ ಸಾಂಸ್ಕೃತಿಕ ಕಾರ್ಯದರ್ಶಿ ಸ್ಥಾನವೊಂದನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ಥಾನಗಳನ್ನು ನೇರ ಸ್ಪರ್ಧಿಯಾದ ಎಬಿವಿಪಿಯನ್ನು ಭಾರಿ ಅಂತರಗಳಿಂದ ಎಸ್‌ಎಫ್‌ಐನ ನೇತೃತ್ವದಲ್ಲಿರುವ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರ (ಯೂನಿವರ್ಸಿಟಿ ಡಿಸ್ಕಶನ್ ಫೋರಂ) ಗೆದ್ದುಕೊಂಡಿದೆ. ಈ ವಿ.ವಿ.ಯಲ್ಲಿ ವಿದ್ಯಾರ್ಥಿಗಳ ನಿರ್ದಿಷ್ಟ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸುವಲ್ಲಿ ಎಸ್‌ಎಫ್‌ಐ ಯಶಸ್ವಿಯಾಗಿದೆ.

ಮಹಾರಾಷ್ಟ್ರದ ಮರಾಟವಾಡ ವಿ.ವಿ (ನಾಡೆಡ್)

ಮಹಾರಾಷ್ಟ್ರದ ಮರಾಟವಾಡ ವಿ.ವಿ.ಯಲ್ಲಿಯೂ ಕೂಡ ಎಸ್‌ಎಫ್‌ಐನ ನಗರಸಮಿತಿಯ ಸದಸ್ಯರಾದ ಶಿವಾಜಿ ಶಿಂಪಿ ಭಾರತೀಯ ವಿದ್ಯಾರ್ಥಿ ಸೇನಾ ಮತ್ತು ನ್ಯಾಷನಲಿಸ್ಟ್ ಸ್ಟುಡೆಂಟ್ ಕೌನ್ಸಿಲ್‌ನ ಅಭ್ಯರ್ಥಿಯ ವಿರುದ್ಧ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರೆ ಇದೇ ಮಹಾರಾಷ್ಟ್ರದ ಎಸ್‌ಆರ್‌ಟಿಎಮ್ ವಿ.ವಿಯಲ್ಲಿ ಪುಣ್ಯಪ್ರತಾಪ್‌ಸಿಂದ್ ಅಧ್ಯಕ್ಷರಾಗಿ ಯೋಗಿರ್‌ಜಿಪುಣೆಕರ್ ಕಾರ್ಯದರ್ಶಿಯಾಗಿ ಇದೇ ಮೊದಲ ಬಾರಿಗೆ ಎಸ್‌ಎಫ್‌ಐನ್ನು ಪ್ರತಿನಿಧಿಸಿ ಆಯ್ಕೆಯಾಗಿದ್ದಾರೆ.

ಒಟ್ಟಾರೆ ಹೇಳುವುದಾದರೆ ಎಲ್ಲೆಲ್ಲಾ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆಗಳು ನಡೆದಿವೆಯೋ ಅಲ್ಲೆಲ್ಲಾ ವಿದ್ಯಾರ್ಥಿಗಳು ತಮ್ಮ ಮತಗಳ ಮೂಲಕ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ, ಜಾತ್ಯಾತೀತ ಮೌಲ್ಯಗಳ ಉಳಿವಿಗಾಗಿ ಹೋರಾಡುತ್ತಿರುವ ಎಸ್‌ಎಫ್‌ಐನ ಪರಂಪರೆಯನ್ನು ಮುಂದುವರಿಸಲು ಬೆಂಬಲಿಸುತ್ತಿದ್ದಾರೆ. ಇವುಗಳ ಮೂಲಕ ವಿ.ವಿಯ ವಿದ್ಯಾರ್ಥಿಗಳು ಪ್ರಗತಿಪರ ಮೌಲ್ಯಗಳಿಗಾಗಿ ತುಡಿಯುತ್ತಿರುವುದು ಗೋಚರವಾಗುತ್ತದೆ.

ವಿ.ವಿಗಳ ಚುನಾವಣೆಗಳಲ್ಲದೇ ಕಾಲೇಜು ಚುನಾವಣೆಗಳಲ್ಲೂ ಕೂಡ ದೇಶಾದ್ಯಂತ ಎಸ್‌ಎಫ್‌ಐನ ಅಭ್ಯರ್ಥಿಗಳು ಆಯ್ಕೆಯಾಗುತ್ತಿದ್ದಾರೆ. ಉದಾಹರಣೆಗೆ ಕರ್ನಾಟಕದ ಬೆಂಗಳೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಪ್ರಗತಿತಂಡದ ಹೆಸರಿನಲ್ಲಿ ಎಸ್‌ಎಫ್‌ಐನ ನೇತೃತ್ವ ಸಿಂಡಿಕೇಟ್‌ನ ಎಲ್ಲ ಪದಾಧಿಕಾರಿಗಳೂ ಆಯ್ಕೆಯಾಗಿದ್ದಾರೆ.

- ಹೆಚ್.ಆರ್.ನವೀನ್‌ಕುಮಾರ್

ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಒತ್ತಾಯಿಸಿ

ಸಿಪಿಐ(ಎಂ)ನಿಂದ ರಾಜ್ಯವ್ಯಾಪಿ ಪ್ರತಿಭಟನೆ

ವಿಧಾನಸಭೆಗಳು ಮತ್ತು ಸಂಸತ್ತಿನಲ್ಲಿ ಶೇ33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ಸಂಬಂಧದ ಮಸೂದೆಯನ್ನು ಪ್ರಸಕ್ತ ಸಂಸತ್ತಿನ ಬೇಸಿಗಾಲದ ಅಧಿವೇಶನದಲ್ಲಿಯೇ ಮಂಡಿಸಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ರಾಷ್ಟ್ರವ್ಯಾಪಿಯಾಗಿ ನಡೆದ ಚಳುವಳಿಯ ಭಾಗವಾಗಿ ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು.

ಗುಲ್ಬರ್ಗಾ : ಸುಮಾರು 400 ಜನರ ಪ್ರತಿಭಟನಾ ಮೆರವಣಿಗೆಯು ಗುಲ್ಬರ್ಗಾ ನಗರ ಕನ್ನಡ ಭವನದಿಂದ ಹೊರಟು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಜಮಾಯಿಸಿತು. ಮಹಿಳಾ ಮೀಸಲಾತಿಯನ್ನು ಹಲವು ತಂತ್ರ ಕುತಂತ್ರಗಳ ಮೂಲಕ ತಡೆಯುತ್ತಿರುವ ಬಿಜೆಪಿ ಮತ್ತಿತರ ಪಕ್ಷಗಳ ಧೋರಣೆಯನ್ನು ಪುರುಷ ಪ್ರಧಾನ ಸಮಾಜದ ಅಸಮಾನ ಸಾಮಾಜಿಕ ಧೋರಣೆಯನ್ನು ಖಂಡಿಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಜಿಲ್ಲಾ ಮುಖಂಡರೂ ಆದ ಕೆ.ನೀಲಾ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಗಂಗಮ್ಮ, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಗೌರಮ್ಮ ಪಾಟೀಲ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೇಘರಾಜ ಕಠಾರೆ, ಮುಂತಾದವರು ಮಾತನಾಡಿದರು. ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿಯವರಿಗೆ ಪಕ್ಷದ ಬೇಡಿಕೆಯನ್ನು ಸಲ್ಲಿಸಲಾಯಿತು.


ದಕ್ಷಿಣ ಕನ್ನಡ : ಸುಮಾರು 200 ಜನರ ಪ್ರತಿಭಟನಾ ಮೆರವಣಿಗೆ ಮಂಗಳೂರಿನ ಮೈದಾನ ರಸ್ತೆಯಿಂದ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಗಳೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಶ್ರೀಯಾನ್ ಮುಂತಾದವರು ಮಾತನಾಡಿದರು. ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿಯವರಿಗೆ ಬೇಡಿಕೆ ಪಟ್ಟಿ ಸಲ್ಲಿಸಲಾಯಿತು. ಹೊಸ ಹೊಸ ವಿಭಾಗಗಳಿಂದ ಬಂದ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಉಡುಪಿ : ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಶಾಸ್ತ್ರಿ ಸರ್ಕಲ್‌ನಲ್ಲಿ ಸೇರಿದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ತಹಶೀಲ್ದಾರರ ಕಛೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲ್ಲೂಕು ಕಛೇರಿಯ ಮುಂದೆ ಮತ ಪ್ರದರ್ಶನ ನಡೆಸಿದರು. ಸುಮಾರು 400ಕ್ಕೂ ಹೆಚ್ಚು ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಜಿಲ್ಲಾ ಮುಖಂಡರಾದ ಸಿ.ನಾರಾಯಣ, ಮಹಾಬಲ ವಡೇರ ಹೋಬಳಿ, ಮುತ್ತಯ್ಯ ಕನ್ನಾಣ, ಕರಿಯ ದೇವಾಡಿಗ, ಜಿ.ಬಿ.ಮಹಮದ್, ಎಲ್ ಸೀನಾ, ಕೋಡಿಬಾಬು, ಇವರಲ್ಲದೆ ಕುಂದಾಪುರ ಪುರಸಭೆಯ ಮಾಜಿ ಅಧ್ಯಕ್ಷೆ ಗುಣರತ್ನರವರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಬಿಜಾಪುರ: ಬಿಜಾಪುರ ನಗರದಲ್ಲಿ ನೂರಾರು ಜನರು ಪಾಲ್ಗೊಂಡ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನಾ ಪ್ರದರ್ಶನ ನಡೆದಿದೆ. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರಾ, ಜಿಲ್ಲಾ ಮುಖಂಡರುಗಳಾದ ಭೀಮಸಿ ಕಲಾದಗಿ, ಸುರೇಖಾ ರಜಪೂತ ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು.

ಕೋಲಾರ : ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸುಮಾರು ಒಂದು ಸಾವಿರಕ್ಕೂ ಅಧಿಕ ಜನರ ಪ್ರತಿಭಟನಾ ಮೆರವಣಿಗೆ ಮತ್ತು ಮತ ಪ್ರದರ್ಶನ ನಡೆದಿದೆ. ಗೂಳೂರು ವೃತ್ತದಿಂದ ಮೆರವಣಿಗೆ ಹೊರಟು ತಾಲ್ಲೂಕು ಕಛೇರಿಯ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಸಿಪಿಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ ವೆಂಕಟಸ್ವಾಮಿ ರೆಡ್ಡಿ, ಗಂಗುಲಪ್ಪ, ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಶ್ರೀರಾಮಪ್ಪ, ಅಂಗನವಾಡಿ ನೌಕರರ ಸಂಘಟನೆಯ ತಾಲ್ಲೂಕು ಕಾರ್ಯದರ್ಶಿ

ಪುಟ 9 ಕ್ಕೆ


ಕುಂದಾಪುರ


ತುಮಕೂರು



ಮೈಸೂರು

ದೇವನಹಳ್ಳಿ ವಿಮಾನ ನಿಲ್ದಾಣ : ಹಗರಣದ ವಾಸನೆ ?

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದೊಡ್ಡ ವ್ಯಾಪಾರಿ ನಾರಾಯಣ್‌ಮೂರ್ತಿ ಲಂಡನ್‌ನಿಂದಲೇ ರಾಜಿನಾಮೆ ನೀಡಿದ್ದು ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಬಹಳ ಚರ್ಚೆಗೆ ಒಳಗಾಗಿದೆ. ಅವರ ರಾಜಿನಾಮೆಗೆ ಮಾಜಿ ಪ್ರಧಾನಿ ದೇವೇಗೌಡರ ಕೆಲವು ನಿಲುವುಗಳೇ ಕಾರಣವಾಗಿದೆ ಎಂಬ ವಿವಾದ ಮತ್ತು ನಾರಾಯಣ ಮೂರ್ತಿಯನ್ನು ಮನವೊಲಿಸುವ ಕಸರತ್ತುಗಳು ಮುಖಪುಟದ ಸುದ್ದಿಗಳಾಗಿದ್ದವು. ಆದರೆ ಯಾವುದೇ ಪತ್ರಿಕೆ, ಟಿವಿ ಚಾನಲ್‌ನಲ್ಲಿಯೂ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯದಲ್ಲಿನ ಹಗರಣಕಾರಿ ಅಂಶಗಳ ಬಗ್ಗೆಯಾಗಲಿ, ಪಾರ್ಲಿಮೆಂಟರಿ ಸ್ಥಾಯಿ ಸಮಿತಿಯು ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕ ಹಣ ಕೋಟ್ಯಾಂತರ ರೂಪಾಯಿಗಳು ಅನುಮಾನಾಸ್ಪದ ರೀತಿಯಲ್ಲಿ ವ್ಯಯವಾಗುತ್ತಿರುವ ಬಗ್ಗೆ ಒಂದು ಕಲಂ ಸುದ್ದಿಯೂ ಪ್ರಕಟವಾಗಿಲ್ಲ. ಏಕೆ?

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಒಳಗೊಂಡಂತೆ ದೇಶದ ವಿಮಾನಯಾನ ಅಭಿವೃದ್ಧಿಪಡಿಸುವ ದಿಶೆಯಲ್ಲಿ ಸರಕಾರದ ದಿವಾಳಿಕೋರ ನೀತಿಗಳನ್ನು ಪಾರ್ಲಿಮೆಂಟ್‌ನ 'ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸ್ಥಾಯಿಸಮಿತಿ' ಬಯಲಿಗೆಳೆದಿದೆ. ಅದರಲ್ಲೂ ಬೆಂಗಳೂರು ಅಂ.ವಿ.ನಿಲ್ದಾಣ (ಬಿ.ಐ.ಎ.ಎಲ್) ಕಾಮಗಾರಿಗಳಲ್ಲಿ ರೂ.1411 ಕೋಟಿ ರೂ.ಗಳ ಕಾಂಟ್ರಾಕ್ಟ್‌ಗಳನ್ನು ವಹಿಸುವ ವಿಚಾರ ಭಾರಿ ಹಗರಣಕಾರಿಯಾಗಿದ್ದು "ಸ್ವತಂತ್ರ ತನಿಖಾ ಸಂಸ್ಥೆ"ಯಿಂದ ವಿಚಾರಣೆ ನಡೆಸಲು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಪಾರ್ಲಿಮೆಂಟರಿ ಸ್ಥಾಯಿ ಸಮಿತಿಯು ಕಾಂಗ್ರೆಸ್, ಬಿಜೆಪಿ, ಬಿಎಸ್‌ಪಿ, ಸಿಪಿಐ(ಎಂ) ಮತ್ತಿತರ ರಾಜಕೀಯ ಪಕ್ಷಗಳ 32 ಸಂಸತ್ ಸದಸ್ಯರನ್ನು ಒಳಗೊಂಡಿದೆ. ಕರ್ನಾಟಕದ ಜನಾರ್ಧನ ಪೂಜಾರಿ ಒಳಗೊಂಡಿರುವ ಸ್ಥಾಯಿ ಸಮಿತಿಗೆ ಸಿಪಿಐ(ಎಂ) ರಾಜ್ಯಸಭಾ ನಾಯಕ ನೀಲೊತ್ಪಲ್ ಬಸು ಅವರು ಅಧ್ಯಕ್ಷರಾಗಿದ್ದಾರೆ. ಈ ಸ್ಥಾಯಿ ಸಮಿತಿ 90 ಪ್ಯಾರಾಗಳ ಸಮಗ್ರ ವರದಿ ನೀಡಿದೆ.

ಕೇಂದ್ರ ಸರಕಾರವು ವಿಮಾನಯಾನದ ಆಧುನೀಕರಣ ಮಾಡಲು ಖಾಸಗೀ ಸಹಭಾಗಿತ್ವ ಬಹಳ ಅಗತ್ಯವೆಂದು ಮತ್ತು ದೆಹಲಿ, ಮುಂಬೈ ವಿಮಾನ ನಿಲ್ದಾಣಗಳನ್ನು ದೀರ್ಘಕಾಲಿಕ 'ಲೀಜ್' ಮೂಲಕ ಖಾಸಗೀಕರಿಸಲು ತರಾತುರಿಯಲ್ಲಿ ಪ್ರಯತ್ನಿಸುತ್ತಿದೆ. ಈ ತರಾತುರಿಯ ಪ್ರಯತ್ನದಲ್ಲಿ 'ಏರ್ ಅಥಾರಿಟಿ ಆಫ್ ಇಂಡಿಯಾ ಕಾಯ್ದೆ'ಗೆ ತಿದ್ದುಪಡಿಗಳನ್ನು ಮಾಡಲಾಗಿದೆ. ಅದರಂತೆ ಸರಕಾರಿ ನಿಯಂತ್ರಣದ 'ಏರ್ ಅಥಾರಿಟಿ ಆಫ್ ಇಂಡಿಯಾ (ಎಎಐ)' ಸಂಸ್ಥೆ ಇದುವರೆಗೆ ದೇಶದ ಎಲ್ಲಾ ವಿಮಾನ ನಿಲ್ದಾಣಗಳ ನಿರ್ವಹಣೆ ಮತ್ತು ನಿಯಂತ್ರಣ ಹೊಣೆಗಾರಿಕೆಯನ್ನು ಖಾಸಗೀ ಬಂಡವಾಳಗಾರರಿಗೆ ವರ್ಗಾಯಿಸಲು ಎಲ್ಲಾ ಬದ್ಧತೆಗಳನ್ನು ಬಿಜೆಪಿ ನೇತೃತ್ವದ ಸರಕಾರದ ಆಡಳಿತಾವಧಿಯಲ್ಲಿ ಆರಂಭಿಸಿದ್ದು, ಈಗಿನ ಯುಪಿಎ ಕೇಂದ್ರ ಸರಕಾರ ಅದನ್ನು ಮುಂದುವರೆಸಿ ಜಾರಿಗೊಳಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ಬೆಂಗಳೂರು ಮತ್ತು ಹೈದರಾಬಾದ್‌ಗಳಲ್ಲಿ ನಿರ್ಮಾಣಗೊಳ್ಳುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು 'ಏರ್ ಅಥಾರಿಟಿ ಆಫ್ ಇಂಡಿಯಾ' (ಎಎಐ) ಆಡಳಿತ ವ್ಯಾಪ್ತಿಯಿಂದ ಹೊರಗಿಡುವ ತಿದ್ದುಪಡಿಯನ್ನು ನಿರ್ದಿಷ್ಟವಾಗಿ ಮಾಡಲಾಗಿದೆ.

ಉತ್ಪ್ರೇಕ್ಷಿತ ಅಂದಾಜಿನ ಉದ್ದೇಶಗಳೇನು?

ಕೇಂದ್ರ ಸರಕಾರ ವಿಮಾನ ನಿಲ್ದಾಣಗಳ ಆಧುನೀಕರಣಕ್ಕೆ ಅದರಲ್ಲೂ ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳಲ್ಲಿ ಹೆಚ್ಚಿನ ಸೌಲಭ್ಯ - ರನ್‌ವೇಗಳನ್ನು ಹೆಚ್ಚಿಸಿ ಹೆಚ್ಚಿನ ವಿಮಾನಗಳ ಹಾರಾಟಕ್ಕೆ ಅನುಕೂಲವಾಗಲು ರೂ.10,000ದಿಂದ 20,000 ಕೋಟಿ ಕೂಡಲೇ ಅಗತ್ಯವಿದೆ ಎಂದು ಹೇಳಿದ ಕೇಂದ್ರ ಸರಕಾರ ಇಷ್ಟು ದೊಡ್ಡ ಮೊತ್ತವನ್ನು ವೆಚ್ಚ ಮಾಡಲು ಸರಕಾರಕ್ಕೆ ಕಷ್ಟವಾಗುತ್ತದೆ ಎಂಬ ಕಾರಣ ಹೇಳಿ ಖಾಸಗೀ ಬಂಡವಾಳಗಾರರ ಪಾಲುದಾರಿಕೆ ಅಗತ್ಯವೆಂದು ಪ್ರತಿಪಾದಿಸಿದೆ. ಆದರೆ ಸರಕಾರವೇ ನೇಮಿಸಿದ ತಾಂತ್ರಿಕ ಸಲಹೆಗಾರರು (ಏರ್‌ಪ್ಲಾನ್-ಆಸ್ಟ್ರೇಲಿಯಾ) ನೀಡಿದ ಅಂದಾಜು ಪ್ರಕಾರ ಮುಂಬೈ ವಿಮಾನ ನಿಲ್ದಾಣದ ಆಧುನೀಕರಣಕ್ಕೆ 2005ರಿಂದ 2019ರವರೆಗೆ 14



ವರ್ಷಗಳಲ್ಲಿ ರೂ.6,300 ಕೋಟಿ-3 ಹಂತಗಳಲ್ಲಿ ಅಗತ್ಯವಾಗಿದೆ ಮತ್ತು ದೆಹಲಿ ವಿಮಾನ ನಿಲ್ದಾಣದ ಆಧುನೀಕರಣಕ್ಕೆ 2005ರಿಂದ 2024ರವರೆಗೆ 19 ವರ್ಷಗಳಲ್ಲಿ ರೂ.6,500 ಕೋಟಿಗಳು 4 ಹಂತಗಳಲ್ಲಿ ಅಗತ್ಯವಾಗಿದೆ. ವಾಸ್ತವಾಂಶಗಳು ಹೀಗಿರುವಾಗ ಕೇಂದ್ರ ಸರಕಾರ ಉತ್ಪ್ರೇಕ್ಷಿತವಾದ ಅಂದಾಜುಗಳನ್ನು ಮುಂದಿಟ್ಟು ದೇಶದ ಪಾರ್ಲಿಮೆಂಟಿನ, ಜನತೆಯ ಕಣ್ಣಿಗೆ ಮಣ್ಣೆರಚಿ ಖಾಸಗೀ ಬಂಡವಾಳಗಾರರಿಗೆ ಸಾರ್ವಜನಿಕ ಆಸ್ತಿಗಳನ್ನು ಬಾಚಿ ಉಡಿತುಂಬಲು ಹೊರಟಿದೆ.

ಖಾಸಗೀಕರಣಕ್ಕೆ ಏಕೆ ಇಷ್ಟು ಆತುರ? ಏಕೆಂದರೆ ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳು ಅತ್ಯಂತ ಲಾಭದಾಯಕವಾಗಿ ನಡೆಯುತ್ತಿವೆ. ದೇಶದ ವಿಮಾನಯಾನ ಆದಾಯದ ಶೆ.77ರಷ್ಟು ಲಾಭ ಕೇವಲ ಈ ಎರಡು ವಿಮಾನ ನಿಲ್ದಾಣಗಳಿಂದಲೇ ಬರುತ್ತಿದೆ. ಕಳೆದ ವರ್ಷದ ಮುಂಬೈ ವಿಮಾನ ನಿಲ್ದಾಣದ ಲಾಭ ರೂ.34527.98 ಲಕ್ಷಗಳು ಮತ್ತು ದೆಹಲಿ ವಿ.ನಿ.ದ ಲಾಭ ರೂ.27,203.49 ಲಕ್ಷಗಳು ಬೆಂಗಳೂರು ವಿ.ನಿ.ದ ಲಾಭ ರೂ.3639.95 ಲಕ್ಷಗಳು.

ದೆಹಲಿ ಮತ್ತು ಮುಂಬಯಿ ನಂತಹ ವಿಮಾನ ನಿಲ್ದಾಣಗಳಿಂದ ಬರುವ ಲಾಭದ ಹಣವನ್ನು ದೇಶದ ಹಿಂದುಳಿದ ಪ್ರದೇಶಗಳಾದ ಈಶಾನ್ಯ ರಾಜ್ಯಗಳು, ಮತ್ತಿತರ ಕಡಿಮೆ ಟ್ರಾಫಿಕ್ ಇರುವಲ್ಲಿ ವಿಮಾನಯಾನ ಅಭಿವೃದ್ಧಿಗೆ ಬಳಸಲಾಗುತ್ತಿದೆ. ಸರಕಾರದ ನೀತಿಯು ಅತ್ಯಂತ ಲಾಭದಾಯಕವಾದ ಎರಡು ವಿಮಾನ ನಿಲ್ದಾಣಗಳನ್ನು ಜಂಟಿ ವ್ಯವಹಾರದ ಹೆಸರಲ್ಲಿ ಖಾಸಗೀ ಬಂಡವಾಳಗಾರರನ್ನು ಕೊಬ್ಬಿಸಲು ಹವಣಿಸುತ್ತಿದೆ. ಇದರಿಂದ ದೇಶದ ವಿಮಾನಯಾನ ಅಭಿವೃದ್ಧಿಗೆ ಏನು ಪ್ರಯೋಜನ ಎನ್ನುವ ಪ್ರಶ್ನೆಗೆ ಉತ್ತರವೇ ಇಲ್ಲ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪುರಾಣ ಏನೆಂದು ನೋಡೋಣ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಜಂಟಿ ವ್ಯವಹಾರದ ಒಪ್ಪಂದವನ್ನು ದಿನಾಂಕ 3-5-1999ರಲ್ಲೇ ಮಾಡಲಾಗಿದೆ. ಅದರಂತೆ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಅಗತ್ಯವಾದ ಮೊತ್ತ ಒಟ್ಟು ರೂ.1411 ಕೋಟಿ ರೂಪಾಯಿಗಳು. ನಿರ್ಮಾಣ ಮಾಡಲು ಜಂಟಿ ಸಹಬಾಗಿತ್ವ- ಅದರಲ್ಲಿ ಕೇಂದ್ರ ಸರಕಾರದ ಏರ್ ಅಥಾರಿಟಿ ಆಫ್ ಇಂಡಿಯಾ ರೂ.85 ಕೋಟಿ ಹೂಡುತ್ತದೆ. ರಾಜ್ಯ ಸರಕಾರವು 4300 ಎಕ್ರೆಗಳ ಭೂಮಿಯನ್ನು ಅಂದರೆ ರೂ 175 ಕೋಟಿ ಬೆಲೆ ಬಾಳುವ ಭೂಮಿಯನ್ನು ನೀಡಿದೆ ಮತ್ತು ರಾಜ್ಯ ಸರಕಾರದ ಬೆಂಬಲದ ಹಣವಾಗಿ ರೂ.350 ಕೋಟಿ ನಗದು ಮೊತ್ತ ನೀಡುತ್ತದೆ. ಅಂದರೆ ರಾಜ್ಯ ಸರಕಾರ ಭೂಮಿ ಮತ್ತು ನಗದು ಬೆಂಬಲ ಒಟ್ಟು ಹಣ ರೂ.525 ಕೋಟಿ ಹೂಡುತ್ತದೆ ಮತ್ತು ಕೇಂದ್ರ ಸರಕಾರದ ಹೂಡಿಕೆ 85 ಕೋಟಿ. ಅಂದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜನರಿಂದ ಸಂಗ್ರಹಿಸಿದ ತೆರಿಗೆ ಹಣವನ್ನು ಖಜಾನೆಗಳಿಂದ ನೀಡುವ ಒಟ್ಟು ಮೊತ್ತ 610 ಕೋಟಿ.

ಖಾಸಗಿ ಪಾಲುದಾರರಾಗಿ ಭಾಗವಹಿಸುವ ಬಂಡವಾಳಗಾರರೆಂದರೆ ಜರ್ಮನಿ ದೇಶದ 'ಸೀಮೆನ್ಸ್' ಮತ್ತು ಸ್ವಿಡ್ಜರ್‌ಲ್ಯಾಂಡ್‌ನ 'ಯೂನಿಕ್ ಜ್ಯೂರಿಚ್' ಹಾಗೂ ಭಾರತದ 'ಎಲ್ ಅಂಡ್ ಟಿ' ಕಂಪನಿಗಳಾಗಿವೆ. ಈ 3 ಕಂಪನಿಗಳ ಬಂಡವಾಳಗಾರರು ರೂ.240 ಕೋಟಿಗಳನ್ನು ಶೇರು ಬಂಡವಾಳವಾಗಿ ಹೂಡುತ್ತಾರೆ. ಈ ಜಂಟಿ ವ್ಯವಹಾರದಲ್ಲಿ ಕೇವಲ ರೂ.240 ಕೋಟಿ ಹೂಡುವ 3 ಕಂಪನಿಗಳು ಒಟ್ಟು ಶೇ.74 ಪಾಲು ಪಡೆಯುತ್ತವೆ(ಸೀಮೆನ್ಸ್, ಜರ್ಮನಿ ಶೇ.40, ಯುನಿಕ್ ಜ್ಯೂರಿಚ್ ಶೇ.17 ಮತ್ತು ಎಲ್‌ಅಂಡ್‌ಟಿ

ಪುಟ 10 ಕ್ಕೆ

ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಒತ್ತಾಯ....

ಪುಟ 8 ರಿಂದ

ಉವಾ, ಡಿವೈಎಫ್‌ಐ ಮುಖಂಡರಾದ ಚನ್ನರಾಯಪ್ಪ, ಕೃಷಿ ಕೂಲಿಕಾರರ ಸಂಘಟನೆಯ ಕೆ.ನಾಗರಾಜ್ ಮುಂತಾದವರು ಪಾಲ್ಗೊಂಡಿದ್ದರು. **ಕೋಲಾರದಲ್ಲಿ** ಸುಮಾರು 70 ಜನರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನಾ ಧರಣಿ ನಡೆಸಿದ್ದಾರೆ. ಪಕ್ಷದ ರಾಜ್ಯಸಮಿತಿ ಸದಸ್ಯರಾದ ಗಾಂಧಿನಗರ ನಾರಾಯಣಸ್ವಾಮಿ, ಜಿಲ್ಲಾಸಮಿತಿ ಸದಸ್ಯರಾದ ಕಾಂ.ವಿ.ಗೀತಾ, ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಸುಜಾತ, ಆಶಾ ಮುಂತಾದವರು ಪಾಲ್ಗೊಂಡಿದ್ದಾರೆ.

ಬಂಗಾರಪೇಟೆಯಲ್ಲಿ ಸುಮಾರು 300 ಜನರ ಪ್ರತಿಭಟನೆ ನಡೆದಿದೆ. ಪಕ್ಷದ ಮುಖಂಡರಾದ ಕಾಂ.ಜಯಲಕ್ಷ್ಮಿ ಮತ್ತು ಕಾಂ. ಅರ್ಜುನನ್ ಮುಂತಾದವರು ನೇತೃತ್ವ ವಹಿಸಿದ್ದರು. **ಗುಡಿಬಂಡೆಯಲ್ಲಿ** ಸುಮಾರು 500 ಜನರ ಪ್ರತಿಭಟನೆ ನಡೆದಿದೆ ಸಿಪಿಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ ಕಾಂ.ಗಂಗಿರೆಡ್ಡಿ ಮುಂತಾದವರು ನೇತೃತ್ವ ವಹಿಸಿದ್ದಾರೆ.

ತುಮಕೂರು : ಸುಮಾರು 150 ಜನರ ಪ್ರತಿಭಟನಾ ಪ್ರದರ್ಶನ ನಡೆದಿದೆ. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಮುಜೀಬ್ ಜಿಲ್ಲಾಸಮಿತಿ ಸದಸ್ಯರಾದ ಕಾಂ.ಮಹಮದ್ ದಸ್ತಗೀರ್, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಕಾಂ.ಕಮಲಾ ಸಿಐಟಿಯು ಜಿಲ್ಲಾ ಉಪಾಧ್ಯಕ್ಷೆ ಕಾಂ.ಪಾರ್ವತಮ್ಮ ಡಿವೈಎಫ್‌ಐ ಮುಖಂಡ ಕಾಂ.ಸುಬ್ಬಣ್ಣ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೆಂಗಳೂರು : ಸುಮಾರು 70 ಜನರು ಬೆಂಗಳೂರು ನಗರದ ಮಹಾತ್ಮಗಾಂಧಿ ಪ್ರತಿಮೆಯ ಬಳಿ ಧರಣಿ ನಡೆಸಿದ್ದಾರೆ. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕಾಂ.ಕೆ.ಎಸ್.ವಿಮಲ, ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿ ಸದಸ್ಯರಾದ ಕಾಂ.ವರಲಕ್ಷ್ಮಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗೌರಮ್ಮ ಮುಂತಾದವರು ಮಾತನಾಡಿದ ಪ್ರತಿಭಟನಾ ಧರಣಿಯಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜಿಲ್ಲಾ ಮುಖಂಡರಾದ ಕಾಂ.ಗೋಪಾಲಕೃಷ್ಣ ಅರಳಿಹಳ್ಳಿ, ಕಾಂ.ಸುರೇಂದ್ರ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಮುಂತಾದವರು ಪಾಲ್ಗೊಂಡಿದ್ದರು. ನಂತರ ಕಾಂ.ಪ್ರಕಾಶ್, ಗೋಪಾಲಕೃಷ್ಣ ಗೌರಮ್ಮ, ವರಲಕ್ಷ್ಮಿ ಯವರನ್ನೊಳಗೊಂಡ ನಿಯೋಗ ರಾಜ್ಯಪಾಲರ ಕಛೇರಿಗೆ ತೆರಳಿ ಬೇಡಿಕೆ ಪತ್ರವನ್ನು ಸಲ್ಲಿಸಿತು.


ಮಂಡ್ಯ : ಸುಮಾರು 300ರಷ್ಟಿದ್ದ ಮಹಿಳೆಯರು ಮತ್ತು ಪುರುಷರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಪುರಭವನದಿಂದ ಹೊರಟ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಲ್ಲೂಕು ಕಛೇರಿ ತಲುಪಿತು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಪುಟ್ಟಮಾದು, ಮುಖಂಡರುಗಳಾದ ಎಲ್.ಎನ್. ಭರತರಾಜ್, ದೇವಿ, ಟಿ.ಹೆಚ್, ಆನಂದ್, ಕೆ.ಹೆಚ್.ಪುಟ್ಟಮಾದೇಗೌಡ ಕೃಷ್ಣ, ಲಿಂಗರಾಜು, ಶಿವಣ್ಣ ಮುಂತಾದವರು ಪಾಲ್ಗೊಂಡಿದ್ದರು.

ಮಂಡ್ಯ ನಗರದಲ್ಲಿ ಇದೇ ಪ್ರತಿಭಟನೆಯು ನವೆಂಬರ್ 26, 2005ರಂದು ನಡೆಯಿತು. ಪಕ್ಷದ ಜಿಲ್ಲಾ ಮುಖಂಡರಾದ ಕಾಂ.ಸಿ.ಕುಮಾರಿ ಮುಂತಾದವರು ನೇತೃತ್ವ ವಹಿಸಿದ್ದರು.

ಮೈಸೂರು : ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ನಡೆಸಲಾಯಿತು. ಸುಮಾರು 55 ಜನರು ಹೆಚ್ಚಿನವರು ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯ ಕಾಂ.ಬಾಲಾಜಿರಾವ್, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಹ ಸಂಚಾಲಕಿ ಕಾಂ.ಸುವರ್ಣ, ಅಂಗನವಾಡಿ ನೌಕರರ ಸಂಘಟನೆಯ ನಂಜನಗೂಡು ತಾಲ್ಲೂಕು ಅಧ್ಯಕ್ಷರಾದ ಕಾಂ.ಸುನಂದ, ಪ್ರಧಾನ ಕಾರ್ಯದರ್ಶಿ ಶಕುಂತಲಾ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಇತ್ತೀಚೆಗೆ ಸಿಪಿಐ(ಎಂ) ಪಕ್ಷವ ಆಹಾರ, ಭೂಮಿ, ಉದ್ಯೋಗ ಪ್ರಶ್ನೆಗಳ ಮೇಲೆ ನಡೆಸಿದ ಚಳುವಳಿಯಿಂದ ಪಕ್ಷದ ಕಡೆಗೆ ಆಕರ್ಷಿತರಾದ ಮಹಿಳೆಯರು ಚಳುವಳಿಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿ ಸಿಪಿಐ(ಎಂ) ಪಕ್ಷದ ನಿಯೋಗ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಪ್ರಧಾನಿಗಳಿಗೆ ಮನವಿ ಪತ್ರ ಸಲ್ಲಿಸಿದೆ.





ಸಮಾಜವಾದಿ ಕ್ಯೂಬಾದಲ್ಲಿ ಜಾಗತಿಕ ಕಾರ್ಮಿಕ ಸಂಘಗಳ ಒಕ್ಕೂಟದ ಸಮ್ಮೇಳನ

ಕರ್ನಾಟಕದ ಪ್ರತಿನಿಧಿ ಕಾಂ. ವಿ.ಜೆ.ಕೆ.ಯವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ

ಡಿಸೆಂಬರ್ 1ರಿಂದ 4-2005ರವರೆಗೆ ಸಮಾಜವಾದಿ ಕ್ಯೂಬಾದಲ್ಲಿ ಜಾಗತಿಕ ಕಾರ್ಮಿಕ ಸಂಘಗಳ ಒಕ್ಕೂಟ (ಡಬ್ಲ್ಯೂಎಫ್‌ಟಿಯು)ನ ಸಮ್ಮೇಳನ ನಡೆಯುತ್ತಿದೆ. ಹೆಚ್ಚೆಚ್ಚು ಜಾಗತಿಕ ಹಾಗೂ ಆಕ್ರಮಣಕಾರಿ ಸ್ವರೂಪ ಪಡೆದುಕೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಜಾಗತೀಕರಣದ ಸಂದರ್ಭದಲ್ಲಿ ದುಡಿಯುವ ವರ್ಗದ ಜಾಗತೀಕರಣ ವಿರೋಧಿ ಚಳುವಳಿಯ ಸ್ವರೂಪ ಕಾರ್ಯತಂತ್ರಗಳನ್ನು ಕುರಿತು ಚರ್ಚಿಸುವ ಮಹತ್ವದ ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಕಾರ್ಮಿಕ ಚಳುವಳಿಯನ್ನು ಪ್ರತಿನಿಧಿಸಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ ಹಿರಿಯ ಕಾರ್ಮಿಕ ಮುಖಂಡರೂ ಆದ ಕಾಂ.ವಿಜೆಕೆ ನಾಯರ್‌ರವರು ಪಾಲ್ಗೊಳ್ಳುತ್ತಿದ್ದಾರೆ. ದುಷ್ಟ ಅಮೇರಿಕಾದ ದೈತ್ಯ ದಮನಕಾರಿ ಕ್ರಮಗಳನ್ನು ದಿಟ್ಟವಾಗಿ ಎದುರಿಸುತ್ತಿರುವ ಪುಟ್ಟ ಕ್ಯೂಬಾಕ್ಕೆ ಕಾಂ.ವಿಜೆಕೆಯವರನ್ನು ಬೀಳ್ಕೊಡುವ ಸಮಾರಂಭವು ಇದೇ ನವೆಂಬರ್ 24ರಂದು ಸಂಜೆ ಬೆಂಗಳೂರು ನಗರದ ಎನ್‌ಜಿಒ ಸಭಾಂಗಣದಲ್ಲಿ ನಡೆಯಿತು. ಆ ಬಗ್ಗೆ ಒಂದು ವರದಿ.



ಸಿಐಟಿಯು ಸಂಘಟನೆಯ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕಾಂ. ಇ.ಕೆ.ಎನ್‌ರಾಜನ್‌ರವರ ಅಧ್ಯಕ್ಷತೆಯಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಪ್ರಕಾಶ್ ಈ ಸಂದರ್ಭದಲ್ಲಿ ಮಾತನಾಡಿ ಬಹಳಷ್ಟು ಜನ, ಬಹಳಷ್ಟು ಕಾರಣಗಳಿಗಾಗಿ ವಿದೇಶ ಪ್ರವಾಸಗಳನ್ನು ಮಾಡುತ್ತಾರೆ. ಬೆಂಗಳೂರು ಮಹಾನಗರ ಪಾಲಿಕೆಯಿಂದ ಇತ್ತೀಚಿಗೆ ವಿದೇಶಗಳಲ್ಲಿ ನಗರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಅಧ್ಯಯನಕ್ಕೆಂದು ಒಂದು ನಿಯೋಗ ತೆರಳಿತ್ತು. ಈ ಪ್ರಯಾಣಕ್ಕೆ ಮಹಾನಗರ ಪಾಲಿಕೆಗೆ 90 ಲಕ್ಷ ರೂ ಖರ್ಚಾಗಿದೆ. ವರ್ಷ ಉರುಳಿದರೂ ಸಹ ಆ ಸದಸ್ಯರು ಇನ್ನೂ ವರದಿ ಕೊಡಲು ಸಾಧ್ಯವಾಗಿಲ್ಲ. ಏಕೆಂದರೆ ಅವರು ತೆರಳಿದ್ದು ಅಧ್ಯಯನಕ್ಕಾಗಿ ಅಲ್ಲ. ಪ್ರವಾಸದ ಮೋಜಿಗಾಗಿ. ವಿಜೆಕೆಯವರು ತೆರಳುತ್ತಿರುವುದು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಭಾಗವಾದ ಸಮ್ಮೇಳನಕ್ಕೆ.

ಜಗತ್ತಿನ ಸಾಮ್ರಾಜ್ಯಶಾಹಿ ದೊಡ್ಡಣ್ಣನಾದ ಅಮೇರಿಕಾವನ್ನು ಯಾರೇ ಆಗಲಿ ಎದುರು ಹಾಕಿಕೊಳ್ಳಬೇಕಾದರೆ ಅದಕ್ಕೆ ಒಂದು ಗುಂಡಿಗೆ ಸಾಲದು, ಎಂಟೆದೆ ಬೇಕು.

110 ಕೋಟಿ ಜನಸಂಖ್ಯೆ ಇರುವ ಭಾರತ ದೇಶದಿಂದ ಅಮೇರಿಕಾ ಹೇರಿದ ಗುಲಾಮಗಿರಿಯನ್ನು ಒಪ್ಪಿಕೊಳ್ಳುವಂತಹ ಪ್ರದರ್ಶನ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಆದರೆ ಅಮೇರಿಕಾದಿಂದ ಕೇವಲ 80 ಕಿ.ಮೀ ದೂರದಲ್ಲಿರುವ ಪುಟ್ಟ ಕ್ಯೂಬಾ ಸ್ವಾಭಿಮಾನದಿಂದ ಅಮೇರಿಕಾದ ದುಷ್ಟ ಹುನ್ನಾರಗಳನ್ನು ದಬ್ಬಾಳಿಕೆಯನ್ನು ಎದುರಿಸುತ್ತಿದೆ.

ಅಂತಹ ಕ್ಯೂಬಾಕ್ಕೆ ತೆರಳುತ್ತಿರುವ ವಿಜೆಕೆ ನಾಯರ್‌ರವರು ಜಗತ್ತಿನೆಲ್ಲೆಡೆಯ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಅನುಭವಗಳ ಬುತ್ತಿಯನ್ನು ಹೊತ್ತು ತರಲಿದ್ದಾರೆ. ಭಾರತ ದೇಶದ ಬಗೆಗೆ ಅಲಿಪ್ತ ಚಳುವಳಿಯಲ್ಲಿ ವಹಿಸಿದ ಪಾತ್ರದ ಬಗೆಗೆ ಹಾಗೂ ಭಾರತದ ಜನತೆಯ ಬಗೆಗೆ ಕ್ಯೂಬಾ ಜನತೆ ಅಪಾರ ಪ್ರೀತಿ ಹೊಂದಿದ್ದಾರೆ. ಅದು ಭಾರತದ ಬಗೆಗೆ ಪ್ರೀತಿ ಮನುಷ್ಯತ್ವ ಬಗೆಗಿನ ಪ್ರೀತಿ ಇಂತಹ ಪ್ರೀತಿಯನ್ನು ವಿ.ಜೆ.ಕೆ ಹೊತ್ತು ತರಲಿದ್ದಾರೆಂದು ಪ್ರಕಾಶ್ ಆಶಿಸಿದರು.

ವಿವಿಧ ಕಾರ್ಮಿಕ ಸಂಘಗಳ ಪರವಾಗಿ ಪದಾಧಿಕಾರಿಗಳು, ಸಿಐಟಿಯು ಸಂಘಟನೆಯ ಮುಖಂಡರು ತಾವು ಕ್ಯೂಬಾಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ತೋರಿಸಿದ ಪ್ರೀತಿ ಅಭಿಮಾನ ತಮಗೂ, ತಮ್ಮ ಬಾಳ ಸಂಗಾತಿ ಕಾಂ.ರಾಜಮ್ಮರವರಿಗೂ ಅರ್ಪಿಸಿದ ಹೂವು, ಹೂಗುಚ್ಛ, ಹೂವಿನ ಬುಟ್ಟಿ, ಹಣ್ಣು, ಗುಲಾಬಿ ಹೂವಿನ ಹಾರ ಇವೆಲ್ಲವನ್ನು ಕಂಡು ಕೊಂಚ ಭಾವುಕಗೊಂಡು ಮಾತನಾಡಿದ "ವಿ.ಜೆ.ಕೆ ನಾಯರ್ ಈ ಕ್ಯೂಬಾ ಪ್ರವಾಸದ ಸಂದರ್ಭಧಲ್ಲಿ ಇಂತಹ ಹೃದಯ ತುಂಬಿದ ಬೀಳ್ಕೊಡುಗೆ ತಮ್ಮ 35-36 ವರ್ಷಗಳ ದುಡಿಮೆಗೆ ಸಿಕ್ಕ ಗೌರವ ಎನಿಸುತ್ತಿದೆ. ನನಗೆ ಬಹಳ ಸಂತೋಷವಾಗಿದೆ" ಎಂದರು.

ಮುಂದುವರಿದು ಮಾತನಾಡಿದ ಕಾಂ.ವಿ.ಜೆ.ಕೆಯವರು ಅತ್ಯಂತ ಗಂಭೀರವಾದ ಸಂಕಷ್ಟದ ಸಮಯದಲ್ಲಿ ಸಮಾಜವಾದ ಇಲ್ಲವೇ ಸಾವು ಎಂಬ ಧೀಮಂತ ಘೋಷಣೆ ಕೊಟ್ಟು ಸಮಾಜವಾದದ ಪರವಾಗಿ ನಿಂತ ದೇಶ ಕ್ಯೂಬಾ ದೇಶ. 1871ರಲ್ಲಿ ಫ್ರಾನ್ಸ್‌ನಲ್ಲಿ ನಡೆದ 'ಪ್ಯಾರಿಸ್ ಕಮ್ಯೂನ್' ಕಾರ್ಲ್ ಮಾರ್ಕ್ಸ್‌ರವರಿಗೆ ಹಲವು ಪಾಠಗಳನ್ನು ಕಲಿಸಿತು ಮತ್ತು 1917ರ ರಷ್ಯಾದ ಸಮಾಜವಾದಿ ಕ್ರಾಂತಿಗೆ ಸ್ಫೂರ್ತಿಯಾಯಿತು. ಈ ಕ್ರಾಂತಿ 70 ವರ್ಷಗಳ ಕಾಲ ಬಾಳಿ ಇಂದಿಗೂ ಸ್ಫೂರ್ತಿಯ ಮೂಲವಾಗಿದೆ. 1959ರಲ್ಲಿ ನಡೆದ ಕ್ಯೂಬಾದ ಕ್ರಾಂತಿ ಕನಿಷ್ಟ ಇನ್ನೂ 700 ವರ್ಷಗಳ ಕಾಲವಾದರೂ ಸ್ಫೂರ್ತಿಯ ಮೂಲವಾಗಿಯೇ ಉಳಿಯುತ್ತದೆ ಎಂದು ಹೇಳಿದರು.

ನಮ್ಮೊಳಗೆ ಅದರಲ್ಲಿಯೂ ಮುಖ್ಯವಾಗಿ ಕಾರ್ಮಿಕರೊಳಗೆ ಸಮಾಜವಾದ ಎಂಬುದು ಕಿಡಿಯಾಗಬೇಕು, ಬೆಂಕಿಯಾಗಬೇಕು. **"ಸಮಾಜವಾದ ಎಂದರೆ ಬೇರೆ ಏನೂ ಅಲ್ಲ. ಕಾರ್ಮಿಕರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದುಡಿಯುವುದು ಮತ್ತು ತಮ್ಮ ದುಡಿಮೆಗೆ ತಕ್ಕ ಪ್ರತಿಫಲವನ್ನು ಪೂರ್ಣವಾಗಿ" ಪಡೆದುಕೊಳ್ಳುವುದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸಾಧ್ಯವಿಲ್ಲ. ಕೇವಲ ಸಮಾಜವಾದಿ ವ್ಯವಸ್ಥೆಯಲ್ಲಿ ಮಾತ್ರ ಇದು ಸಾಧ್ಯ. ಆದ್ದರಿಂದ ಕಾರ್ಮಿಕರು ಸಮಾಜವಾದವನ್ನು ತನ್ನ ಹೆಂಡತಿ(/ಗಂಡ) ಮಗುವಿನಂತೆ ಪ್ರೀತಿಸಬೇಕು. ತಂದೆ ತಾಯಿಗಳಂತೆ ಗೌರವಿಸಬೇಕು. ಸಮಾಜವಾದಕ್ಕಾಗಿ ಪ್ರಾಣ ಕೊಡಲು ಸಿದ್ಧರಾಗಬೇಕು** ಎಂದು ಕರೆ ನೀಡಿದರು.

ಕ್ಯೂಬಾದ ಯಶಸ್ವಿ ಕ್ರಾಂತಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾ ಇಂದು ಇಡೀ ಲ್ಯಾಟಿನ್ ಅಮೇರಿಕಾಕ್ಕೆ ಸ್ಫೂರ್ತಿ ನೀಡಿದೆ. ಬ್ರೆಜಿಲ್, ಅರ್ಜೆಂಟೈನಾ, ಚಿಲಿ, ಬಲಿವಿಯಾ ಮುಂತಾದ ದೇಶಗಳೆಲ್ಲಾ ಈಗ ಸ್ವತಂತ್ರಗೊಂಡಿದ್ದು ಅಲ್ಲೆಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಬಲಗೊಂಡಿದೆ. ಮೂಲತಃ ಅರ್ಜೆಂಟೀನಾ ದೇಶದವರಾದರೂ, ಮೊದಲು ಯಶಸ್ವಿ ಕ್ಯೂಬಾ ಕ್ರಾಂತಿಗೆ ನೇತೃತ್ವ ನೀಡಿ ನಂತರ ಬೊಲಿವಿಯಾದ ಜನರ ವಿಮೋಚನೆಗಾಗಿ ತೆರಳಿ ಅಮೇರಿಕಾದ ಸಿಐಎ ಸಂಚಿಗೆ ಬಲಿಯಾದ ಚೆಗೆವಾರ ಜಗತ್ತಿನಲ್ಲಿ ಎಲ್ಲೇ ಅನ್ಯಾಯ ಕಂಡರೂ ಸಿಡಿದು ನಿಲ್ಲಬೇಕೆಂಬ ಉದಾತ್ತ ಆಶಯಕ್ಕಾಗಿ ಪ್ರಾಣ ನೀಡಿದ ವೀರ ಸಂಗಾತಿ. ಇಂತಹ ಚೆಗೆವಾರ ಯಾವ ದೇಶಕ್ಕಾಗಿ ಪ್ರಾಣ ನೀಡಿದ ಬೊಲಿವಿಯಾ ಇಂದು ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನಡೆದಿದೆ ಎಂದೂ ಕಾಂ.ವಿಜೆಕೆಯವರು ಜಾಗತಿಕ ಕ್ರಾಂತಿಕಾರಿ ಚಳುವಳಿಗೆ ಕ್ಯೂಬಾ ಕ್ರಾಂತಿಯ ಸ್ಫೂರ್ತಿ ನೀಡಿದ ಕೊಡುಗೆಯನ್ನು ನೆನಪಿಸಿಕೊಂಡರು.

ಆರಂಭದಲ್ಲಿ ಸಿಐಟಿಯು ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಪ್ರಸ್ತಾವಿಕ ಮಾತುಗಳನ್ನಾಡಿದರು. ಮೈಕೊ ಕಾರ್ಮಿಕ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಶಿವಶಂಕರ್‌ರವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ, ಪ್ರಸನ್ನ ಕುಮಾರ್, ವರಲಕ್ಷ್ಮಿ, ವಿಜೆಕೆ ನಾಯರ್ ಅವರಲ್ಲದೇ ಅವರ ಮಡದಿ ರಾಜಮ್ಮರವರು ಇದ್ದರು.

ಇದೇ ಸಂದರ್ಭದಲ್ಲಿ ಡಿಸೆಂಬರ್ 13ರಿಂದ 19-2005ರವರೆಗೆ ಹಾಂಕಾಂಗ್‌ನಲ್ಲಿ ನಡೆಯಲಿರುವ ಡಬ್ಲ್ಯುಟಿಒನ ಸಚಿವ ಮಟ್ಟದ ಸಭೆಯ ಸಂದರ್ಭದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮತ್ತು 'ಟಯೋಟಾ' ಕಾರ್ಮಿಕರ ಚಳುವಳಿಯ ಕುರಿತ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಮೀನಾಕ್ಷಿ ಸುಂದರಂರವರಿಗೆ ಸಹ ಶುಭಾಶಯ ಕೋರಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ ರಾಜನ್ ಸಂಗಾತಿಗಳ ಪ್ರವಾಸದ ಉದ್ದೇಶ ಈಡೇರಲಿ ಯಶಸ್ವಿಯಾಗಲಿ ಎಂದು ಹಾರೈಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯದ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು ಕಳುಹಿಸಿದ್ದ ಲಿಖಿತ ಶುಭಾಶಯಗಳನ್ನು ಸಭೆಯ ಅಧ್ಯಕ್ಷರು ಸಭಿಕರ ಗಮನಕ್ಕೆ ತಂದರು. ಸಮಯಾವಕಾಶದ ಕೊರತೆಯ ಕಾರಣದಿಂದಾಗಿ ತಾವು ಇಂತಹ ಸಮಾರಂಭ ಮಾಡುವುದು ಬೇಡ ಎಂದಾಗಲೂ ಸಹ ಕಾರ್ಮಿಕರಿಗೆ ಸಮಾಜವಾದದ ಬಗೆಗೆ ಕ್ರಾಂತಿಕಾರಿ ವಿಚಾರಗಳ ಬಗೆಗೆ ತಿಳಿಸಲು ಇಂತಹ ಸಂದರ್ಭವೇ ಸೂಕ್ತ. ಕಾರ್ಯಕ್ರಮ ತಪ್ಪದೇ ನಡೆಯಲಿ ಎಂದು ಒತ್ತಾಸೆ ನೀಡಿದ ಜಿ.ಎನ್. ನಾಗರಾಜ್‌ರವರ ಮುತುವರ್ಜಿಯನ್ನು ವಿ.ಜೆ.ಕೆ. ನಾಯರ್‌ರವರು ಸಭೆಯಲ್ಲಿ ನೆನಪಿಸಿಕೊಂಡರು.

- ಆರ್.ರಾಮಕೃಷ್ಣ

ದೇವನಹಳ್ಳಿ ವಿಮಾನ ನಿಲ್ದಾಣ......

ಪುಟ 9 ರಿಂದ

ಶೇ.17). ರೂ.610 ಕೋಟಿ ಹೂಡುವ ಕೇಂದ್ರ ಮತ್ತು ರಾಜ್ಯ ಸರಕಾರದ ಪಾಲು ಒಟ್ಟು ಶೇ.26 ಮಾತ್ರ ಆಗಿರುತ್ತದೆ.

ಅಷ್ಟೇ ಅಲ್ಲ, ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳು ಖಾಸಗಿ ಬಂಡವಾಳಗಾರರೊಂದಿಗೆ ಒಂದು ರಿಯಾಯತಿ ಒಪ್ಪಂದವನ್ನು ದಿನಾಂಕ 5 ಜುಲೈ 2004ರಂದು ಮಾಡಿವೆ. ರಿಯಾಯತಿ ಒಪ್ಪಂದದಂತೆ ಕಂಪನಿಯ ಪೋಷಕರಾದ ಬಂಡವಾಳದಾರರು ಕಾಮಗಾರಿಗಳ ಕಾಂಟ್ರಾಕ್ಟ್ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ 'ಸೀಮೆನ್ಸ್' ಜರ್ಮನಿ 159 ಕೋಟಿ, "ಸೀಮೆನ್ಸ್ ಇಂಡಿಯಾ" ರೂ.175 ಕೋಟಿ ಹಾಗೂ ಎಲ್‌ಅಂಡ್‌ಟಿ ರೂ.550 ಕೋಟಿ ರೂಪಾಯಿಗಳ ಕಾಮಗಾರಿಗಳ ಒಟ್ಟು ರೂ.884 ಕೋಟಿಗಳ ವ್ಯವಹಾರದ ಗುತ್ತಿಗೆ ಹೀಗೆ ಕಬಳಿಸಿದ್ದಾರೆ. ವ್ಯವಹಾರದಲ್ಲಿ ಸ್ಪರ್ಧೆ ಮತ್ತು ಪೈಪೋಟಿ ಹಾಗೂ ಪಾರದರ್ಶಕತೆ ಬಗ್ಗೆ ಭಾರಿ ಹೇಳಿಕೊಳ್ಳುವ ಬಂಡವಾಳಗಾರರು ಮತ್ತು ಬಂಡವಾಳಿಗರ ಸರಕಾರಗಳು ಎಲ್ಲಾ ನೀತಿ, ನಿಯಮಗಳನ್ನು ಗಾಳಿಗೆ ತೂರಿ ರೂ.884 ಕೋಟಿಗಳ ಕಾಮಗಾರಿಗಳನ್ನು ವಶಪಡಿಸಿಕೊಂಡಿದ್ದಾರೆ. ಅಂತರಾಷ್ಟ್ರೀಯ ಬಿಡ್ಡಿಂಗ್‌ನಲ್ಲಿ 7 ಕಂಪನಿಗಳು ಭಾಗವಹಿಸಿದ್ದರೂ ಇತರ ಯಾವ ಕಂಪನಿಗಳಿಗೂ ಅವಕಾಶ ನೀಡದೇ ಕಾಮಗಾರಿಗಳನ್ನು ಒಳಸಂಚಿನ ರೀತಿಯಲ್ಲಿ ವಹಿಸಿಕೊಡಲಾಗಿದೆ. ಈ ಬಗ್ಗೆ ಕೇಂದ್ರ ಸರಕಾರವನ್ನು ಸ್ಥಾಯಿಸಮಿತಿ ವಿವರಣೆ ಕೇಳಿದಾಗ ಭಂಡತನದಿಂದ ಕೊಟ್ಟಿರುವ ಉತ್ತರ ಹೀಗಿದೆ :

"ಕಾಮಗಾರಿಗಳ ನಿರ್ವಹಣೆ ಹರಾಜಿನಲ್ಲಿ ಭಾಗವಹಿಸಿದವರಲ್ಲಿ 7 ಹರಾಜುದಾರರ ಸಣ್ಣ ಪಟ್ಟಿ ಮಾಡಲಾಯಿತು. ಹರಾಜಿನಲ್ಲಿ ಭಾಗವಹಿಸಿದ ಎಲ್ಲರಿಗೂ ಕಾಮಗಾರಿಗಳನ್ನು ಸೀಮನ್ಸ್ ಮತ್ತು ಎಲ್ ಅಂಡ್ ಟಿಗೆ ವಹಿಸುವ ಬಗ್ಗೆ ತಿಳಿದಿದೆ"

ಅಂದರೆ ಈಗ ಕಾಮಗಾರಿ ವಹಿಸಿಕೊಂಡಿರುವವರಿಗಿಂತಲೂ ಕಡಿಮೆ ವೆಚ್ಚದಲ್ಲಿ ಮಾಡಲು ಯಾರಾದರೂ ಮುಂದೆ ಬಂದಿದ್ದರೇ/ಇಲ್ಲವೇ? ಎಂಬ ಯಾವ ಅಂಶವನ್ನು ಬಹಿರಂಗಪಡಿಸದೇ 884 ಕೋಟಿ ಕಾಮಗಾರಿಗಳನ್ನು ವಹಿಸಲಾಗಿದೆ. ಅಷ್ಟೇ ಅಲ್ಲ ಸೋಜಿಗವೆಂದರೆ ಕಾಮಗಾರಿಗಳನ್ನು ಯಾರಿಗೆ ಕೊಡಬೇಕೆಂಬ ಬಗ್ಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಕಂಪನಿಯ ಪಾಲುದಾರರೇ ಕಾಮಗಾರಿಗಳನ್ನು ಪಾರದರ್ಶಕತೆ ಇಲ್ಲದೇ ವಹಿಸಿಕೊಂಡಿದ್ದಾರೆ. ಅಂದರೆ ಕಾಮಗಾರಿಗಳನ್ನು ಕೊಡುವವರು ಮತ್ತು ತೆಗೆದುಕೊಳ್ಳುವವರು ಎರಡು ಒಬ್ಬರೇ. ಇದನ್ನೇ ಹಿತಾಸಕ್ತಿಗಳ ವೈರುಧ್ಯ (Contradiction of Interests) ಎಂದು ಕಾನೂನು ಪರಿಭಾಷೆಯಲ್ಲಿ ಹೇಳುತ್ತಾರೆ. ಆದ್ದರಿಂದಲೇ ಪಾರ್ಲಿಮೆಂಟರಿ ಸ್ಥಾಯಿಸಮಿತಿಯು ಇಡೀ ವ್ಯವಹಾರವನ್ನು "ಸ್ವತಂತ್ರ ನಿಗಾ ಸಂಸ್ಥೆ"ಯಿಂದ ವಿಚಾರಣೆ ಮಾಡಲು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ಇಡೀ ಹಗರಣಕಾರಿ ವ್ಯವಹಾರದಲ್ಲಿ ಯಾರ್ಯಾರ ಪಾಲು ಎಷ್ಟೋ? ಅದು ತನಿಖೆಯಿಂದ ಬಯಲಾಗಬೇಕಿದೆ.

- ಎಸ್.ಪ್ರಸನ್ನಕುಮಾರ್

FTAA ಗೆ ಸಮಾಧಿ : ಲ್ಯಾಟಿನ್ ಅಮೆರಿಕಾದಲ್ಲಿ ಬುಶ್ ಗ್ಯಾಂಗ್‌ಗೆ ಮುಖಭಂಗ

ಜಗತ್ತಿನಾದ್ಯಂತ ಅಧಿಪತ್ಯ ಸಾಧಿಸಲು ಪ್ರಯತ್ನಿಸಿ, ಬಹಳಮಟ್ಟಿಗೆ ಯಶಸ್ವಿಯಾಗಿರುವ ಬುಶ್‌ಗ್ಯಾಂಗ್‌ಗೆ ದಕ್ಷಿಣ ಅಮೆರಿಕದಲ್ಲಿ ಭಾರಿ ಮುಖಭಂಗ ಆಗಿದೆ. ಇತ್ತೀಚೆಗೆ ಅರ್ಜೆಂಟಿನಾದಲ್ಲಿ ನಡೆದ ಅಮೆರಿಕದ ಅಧ್ಯಕ್ಷರುಗಳ ನಾಲ್ಕನೇ ಶೃಂಗಸಭೆಯಲ್ಲಿ, ಬುಶ್ ಹಲವು ವರ್ಷಗಳಿಂದ ಲ್ಯಾಟಿನ್ ಅಮೆರಿಕದ ದೇಶಗಳ ಮೇಲೆ ಹೇರಲು ಪ್ರಯತ್ನಿಸುತ್ತಿದ್ದ FTAA (Free Trade Area of Americas - ಅಮೆರಿಕದ ಮುಕ್ತ ವ್ಯಾಪಾರ ಪ್ರದೇಶ) ಒಪ್ಪಂದವನ್ನು ಪೂರ್ಣವಾಗಿ ತಿರಸ್ಕರಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಲ್ಯಾಟಿನ್ ಅಮೆರಿಕದ ಮೇಲೆ ಅಮೆರಿಕನ್ ಸರ್ಕಾರದ ಮತ್ತು ಸಾಮ್ರಾಜ್ಯಶಾಹಿಯ ಪ್ರಭಾವ ಕುಂದುತ್ತಿರುವ ಪ್ರಕ್ರಿಯೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲು.

ಅಮೆರಿಕನ್ ಶರತ್ತುಗಳಿಗೆ ತೀವ್ರ ವಿರೋಧ

1994 ರಲ್ಲಿ ಅಮೆರಿಕನ್ ಸರ್ಕಾರದ ನಾಯಕತ್ವದಲ್ಲಿ ಮಿಯಾಮಿಯಲ್ಲಿ ಸಂಘಟಿಸಲಾದ ಮೊದಲ ಲ್ಯಾಟಿನ್ ಅಮೆರಿಕದ ಶೃಂಗಸಭೆಯಲ್ಲಿ FTAA ಒಪ್ಪಂದವನ್ನು ಮಂಡಿಸಲಾಗಿತ್ತು. ಒಪ್ಪಂದಕ್ಕೆ ಜನವರಿ 2005 ನ್ನು ಅಂತಿಮ ಗಡುವು ಎಂದು ನಿರ್ಧರಿಸಲಾಗಿತ್ತು. ಕಳೆದ ಹತ್ತು ವರ್ಷಗಳಲ್ಲಿ ಹಲವು ಸುತ್ತುಗಳ ಚೌಕಾಶಿ ನಂತರ ಕೃಷಿ ಮತ್ತು ಮಾರುಕಟ್ಟೆ ತೆರೆಯುವ ಬಗ್ಗೆ ಪ್ರಮುಖ ಭಿನ್ನಾಭಿಪ್ರಾಯ ಮುಂದುವರೆದಿದೆ. ಈ ಬಾರಿಯ ಶೃಂಗಸಭೆಯಲ್ಲಿ FTAA ಒಪ್ಪಂದದ ಬಗ್ಗೆ ಒಂದು ಅಂತಿಮ ನಿರ್ಧಾರ ತೆಗೆದುಕೊಳ್ಳುವುದು ಪ್ರಮುಖ ಅಜೆಂಡಾ ಆಗಿತ್ತು. FTAA ಬಗ್ಗೆ ಯಾವುದೇ ಸಹಮತ ರೂಪಿತವಾಗದೆ, ಅದು ಹೆಚ್ಚು ಕಡಿಮೆ ಸತ್ತುಹೋಗಿದೆ. ವೆನೆಜುವೆಲಾದ ಅಧ್ಯಕ್ಷ ಈ ಬಾರಿಯ ಶೃಂಗಸಭೆಯಲ್ಲಿ FTAA ಸಮಾಧಿ ಮಾಡದೆ ವಿರಮಿಸುವುದಿಲ್ಲ ಎಂದು ಪಣ ತೊಟ್ಟಿದ್ದರು. ಅದು ನಿಜವಾಗಿದೆ.

ಅಮೆರಿಕ FTAA ಮಾತುಕತೆಗಳಲ್ಲಿ ಮೊದಲಿನಿಂದಲೂ ಎರಡು ಶರತ್ತುಗಳನ್ನು ವಿಧಿಸಿತ್ತು. ಮೊದಲನೆಯದು ಈಗ ಇರುವ ಲ್ಯಾಟಿನ್ ಅಮೆರಿಕದ ಕೆಲವು ಪ್ರಾದೇಶಿಕ ಕೂಟ (ಮೆರ್ಕೊಸುರ್, ಆಂಟಿಯನ್ ಸಮುದಾಯ ಇತ್ಯಾದಿ) ಗಳನ್ನು ವಿಸರ್ಜಿಸಬೇಕು. ಎರಡನೆಯದು ಪ್ರತಿಯೊಂದು ದೇಶ ಪ್ರತ್ಯೇಕವಾಗಿ (ಪ್ರಾದೇಶಿಕ ಕೂಟದ ಮೂಲಕ ಸಾಮೂಹಿಕವಾಗಿ ಅಲ್ಲ) ಮಾತುಕತೆ ನಡೆಸಬೇಕು. ಇವೆರಡಕ್ಕೂ ಲ್ಯಾಟಿನ್ ಅಮೆರಿಕದ ದೇಶಗಳು 'ಸಾಧ್ಯವಿಲ್ಲ' ಎಂದು ಖಡಾಖಂಡಿತವಾಗಿ ಹೇಳಿವೆ.

ಪ್ರಾದೇಶಿಕ ಕೂಟಗಳ ಬಲ

ಲ್ಯಾಟಿನ್ ಅಮೆರಿಕದ ದೇಶಗಳ ಈ ಸ್ವಾಭಿಮಾನ, ಸ್ವಾಯತ್ತತೆಗೆ ಹಲವು ಕಾರಣಗಳಿವೆ. ಅಮೆರಿಕದ ಅಧಿಪತ್ಯ, ಕುತಂತ್ರಗಳನ್ನು ಹಲವು ವರ್ಷಗಳ ಕಾಲ ಕಂಡಿರುವ ಈ ದೇಶಗಳ ಸರ್ಕಾರ ಮತ್ತು ಜನತೆಗೆ ತಾಳ್ಮೆಯ ಕಟ್ಟೆ ಮೀರಿದೆ. ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಪ್ರಾದೇಶಿಕ ಕೂಟಗಳು ಹೆಚ್ಚು ಗಟ್ಟಿಯಾಗಿದ್ದು, ತಮ್ಮ ಸಾಮಾನ್ಯ ಹಿತಾಸಕ್ತಿಗಳ ಬಗ್ಗೆ ಹೆಚ್ಚು ಐಕ್ಯತೆಯಿಂದ ಕೆಲಸ ಮಾಡುತ್ತಿವೆ. ಉದಾಹರಣೆಗೆ ಮೆರ್ಕೊಸುರ್, ಬ್ರೆಜಿಲ್, ಅರ್ಜೆಂಟಿನಾದಂತಹ ದೊಡ್ಡ ದೇಶಗಳನ್ನು ಒಳಗೊಂಡಿದ್ದು ಗಟ್ಟಿಯಾದ ಪ್ರಾದೇಶಿಕ ಕೂಟವಾಗಿದೆ. ವಾಣಿಜ್ಯ-ಆರ್ಥಿಕ ಸಂಬಂಧಗಳು ಬೆಳೆದಿವೆ. ಡಿಸೆಂಬರ್ 2004 ರಲ್ಲಿ ಆರಂಭವಾದ 'ದಕ್ಷಿಣ ಅಮೆರಿಕದ ದೇಶಗಳ ಸಮುದಾಯ' ಸಹ ಚೆನ್ನಾಗಿ ರೂಪುಗೊಳ್ಳಲು ಆರಂಭಿಸಿದೆ. ಈ ಪ್ರಾದೇಶಿಕ ಕೂಟಗಳ ರಾಜಕೀಯ ತೋಳ್ಬಲ ಮಾತ್ರ ಹೆಚ್ಚಿಗಿಲ್ಲ. ಉದಾಹರಣೆಗೆ ಬ್ರೆಜಿಲ್-ಅರ್ಜೆಂಟಿನಾ ನಡುವೆ ವ್ಯಾಪಾರದ ಪ್ರಮಾಣ ಅಮೆರಿಕದ ಜತೆ ವ್ಯಾಪಾರಕ್ಕಿಂತ ಹೆಚ್ಚಿದೆ. ಚೀನಾದ ಜೊತೆ ಪ್ರತಿ ದೇಶದ ವ್ಯಾಪಾರ ಗಣನೀಯವಾಗಿ ಹೆಚ್ಚಿದೆ. ಈ ಪ್ರದೇಶದಲ್ಲಿ ಚೀನಾದ ಹೂಡಿಕೆ 2004 ರಲ್ಲಿ 30 ಶತಕೋಟಿ ಡಾಲರಿನಿಂದ ಮುಂದಿನ ಮೂರುವರ್ಷಗಳಲ್ಲಿ 100 ಶತಕೋಟಿ ಡಾಲರಿಗೆ ಏರಲಿದೆ. ಚೀನಾ ಈ ಪ್ರದೇಶದಲ್ಲಿ ಬಂಡವಾಳ ಹೂಡಿಕೆಯಲ್ಲಿ ಅಮೆರಿಕವನ್ನು ಹಿಂದೆ ಹಾಕಿದೆ. ದಕ್ಷಿಣ ಅಮೆರಿಕದ ಉತ್ಪನ್ನಗಳ (ಉದಾ: ಚಿಲಿಯ ತಾಮ್ರ, ವೆನೆಜುವೆಲಾದ ತೈಲ) ಗ್ರಾಹಕನಾಗಿ ಚೀನಾ ಅಮೆರಿಕವನ್ನು ಹಿಂದೆ ಹಾಕಿದೆ. ಚೀನಾದ ಬಂಡವಾಳಹೂಡಿಕೆ, ಉತ್ಪನ್ನಗಳ ಖರೀದಿ ಹಲವು ದಕ್ಷಿಣ ಅಮೆರಿಕದ ದೇಶಗಳ ಆರ್ಥಿಕಕ್ಕೆ ತೇಜಿ ಕೊಟ್ಟಿದೆ. ಚೀನಾ ದಕ್ಷಿಣ ಅಮೆರಿಕದ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಕೊಡುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಚೀನಾಕ್ಕೆ (ಅಮೆರಿಕಕ್ಕಿಂತ) ಹೆಚ್ಚಿನ ದಕ್ಷಿಣ ಅಮೆರಿಕಾದ ದೇಶಗಳು ಭೇಟಿ ನೀಡಿದ್ದು ಆರ್ಥಿಕ ಸಂಬಂಧಗಳು ವೇಗವಾಗಿ ಬೆಳೆಯುತ್ತಿದೆ.

ಎಡ ರಾಜಕೀಯದ ಬಲ

ಲ್ಯಾಟಿನ್ ಅಮೆರಿಕದ ತುಂಬಾ ಎಡಶಕ್ತಿಗಳು ರಾಜಕೀಯವಾಗಿ ಬಲಗೊಳ್ಳುತ್ತಿದ್ದು, ಹಲವು ಎಡ ಸರ್ಕಾರಗಳು ಕೆಲಸ ಮಾಡುತ್ತಿರುವುದು ಇನ್ನೊಂದು ಪ್ರಮುಖ ಕಾರಣ. ಬ್ರೆಜಿಲ್, ಅರ್ಜೆಂಟಿನಾ, ಚಿಲಿ, ಉರುಗ್ವೆ, ವೆನೆಜುವೆಲಾ ಸೇರಿದಂತೆ ಹಲವು ದೇಶಗಳಲ್ಲಿ ಈಗಾಗಲೇ ಎಡ ಸರ್ಕಾರಗಳಿವೆ. ಮುಂಬರುವ ಮೆಕ್ಸಿಕೊ ಮತ್ತು ಬೊಲಿವಿಯಾದ ಚುನಾವಣೆಗಳಲ್ಲಿ ಎಡ ಅಧ್ಯಕ್ಷೀಯ ಅಭ್ಯರ್ಥಿಗಳು ಚುನಾಯಿತರಾಗುವ ಪ್ರಬಲ ಸೂಚನೆಗಳಿವೆ. ಈ ಎಡ ಸರ್ಕಾರಗಳು ಅಮೆರಿಕದ ಒತ್ತಡ ಲೆಕ್ಕಿಸದೆ ದೇಶದ - ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಬೇಕಾದ ಕ್ರಮಗಳಿಗೆ ಗಮನ ಕೊಡುತ್ತಿವೆ. ಅದಕ್ಕೆ ಅಗತ್ಯವಾದ ಪ್ರಾದೇಶಿಕ ಕೂಟ, ವ್ಯಾಪಾರ, ಆರ್ಥಿಕ ನೀತಿ ರೂಪಿಸುತ್ತಿವೆ. ಈ ಎಡ ಸರ್ಕಾರಗಳು ಅಮೆರಿಕದ ರಾಜಕೀಯ - ಆರ್ಥಿಕ ಬೆಂಬಲ ಇಲ್ಲದೆ, ಒತ್ತಡ ಲೆಕ್ಕಿಸದೆ ಸಮಸ್ಯೆ ಪರಿಹಾರ ಸಾಧ್ಯವಿದೆ ಎಂದು ತೋರಿಸಿವೆ. ಅರ್ಜೆಂಟಿನಾ ಇತ್ತೀಚೆಗೆ ತನ್ನ 80 ಶತಕೋಟಿ ಡಾಲರುಗಳ ಸಾಲದ ಮರುಪಾವತಿಯ ಶರತ್ತುಗಳನ್ನು ತನ್ನ ಪರವಾಗಿ ಬದಲಾಯಿಸುವುದರಲ್ಲಿ ಯಶಸ್ವಿಯಾಯಿತು. ಅಮೆರಿಕಾ ಅಥವಾ ಐಎಂಎಫ್ ಬೆಂಬಲವಿಲ್ಲದೆ, ಒತ್ತಡ ಲೆಕ್ಕಿಸದೆ ಮರುಪಾವತಿ ಅವಧಿ ಮತ್ತು ಪ್ರಮಾಣವನ್ನು ಬದಲಾಯಿಸುವುದರಲ್ಲಿ ಯಶಸ್ವಿಯಾಯಿತು. ಸರ್ಕಾರದ ದೃಢ ನಿಲುವ ಕಂಡು ಬೆದರಿದ ಸಾಲಗಾರರು ಈ ಶರತ್ತುಗಳಿಗೆ ಒಪ್ಪಿದರು. ಇಲ್ಲದಿದ್ದರೆ ಏನೂ ಗಿಟ್ಟಲಿಕ್ಕಿಲ್ಲ ಎಂದು ನಡುಕ ಬಂದಿತ್ತು ಅವರಿಗೆ!

ಈ ಶೃಂಗಸಭೆಯ ಆರಂಭದಲ್ಲಿ ಅತಿಥೇಯ



ಅರ್ಜೆಂಟಿನಾ ಅಧ್ಯಕ್ಷ ಕಿರ್ಚನರ್ ಭಾಷಣ ಮತ್ತು ಶೃಂಗಸಭೆ ಮುಗಿದ ನಂತರ ಅಧ್ಯಕ್ಷ ಬುಶ್ ಸಹಾಯಕನ ಹೇಳಿಕೆ (ಬಾಕ್ಸನಲ್ಲಿದೆ) FTAA ಸಮಾಧಿ ಆಗಿದೆ, ಮಾತ್ರವಲ್ಲ, ಅಮೆರಿಕದ ಅಧಿಪತ್ಯದ ಕೊನೆಯು ಆರಂಭವಾಗಿದೆ ಎಂದು ಸ್ಪಷ್ಟವಾಗಿ ಸಾರುತ್ತವೆ. ಇದು ಇಡೀ ಜಗತ್ತಿನ ದುಡಿಯುವ ಜನತೆಗೆ ಇಂಪಾದ ಸಂಗೀತದಂತೆ ಸ್ಫೂರ್ತಿದಾಯಕ ಬೆಳವಣಿಗೆ.

'ಬೊಲಿವರ್ ಬದಲಿ' ಯತ್ತ ಲ್ಯಾಟಿನ್ ಅಮೆರಿಕ

"FTAA ಯನ್ನು ಸಮಾಧಿ ಮಾಡಿದ ಲ್ಯಾಟಿನ್ ಅಮೆರಿಕದ ಜನತೆ, 'ಬೊಲಿವರ್ ಬದಲಿ' ಯತ್ತ ದಾಪುಗಾಲು ಇಡುತ್ತಿದ್ದಾರೆ. ನಾಲ್ಕನೇ ಲ್ಯಾಟಿನ್ ಅಮೆರಿಕದ ಅಧ್ಯಕ್ಷರುಗಳ ಶೃಂಗಸಭೆಯ ಮೊದಲು ನಡೆದ 'ಅಮೆರಿಕದ ಜನತೆಯ ಮೂರನೇ ಶೃಂಗಸಭೆ'ಯ ಪ್ರಚಂಡ ಯಶಸ್ಸು ಈ ಬಗ್ಗೆ ಮುನ್ಸೂಚನೆಯಾಗಿದೆ. ಅಧ್ಯಕ್ಷರುಗಳ ಶೃಂಗಸಭೆಗೆ ಒಂದು ರೀತಿಯಲ್ಲಿ ಎಚ್ಚರಿಕೆ, ಇನ್ನೊಂದು ರೀತಿಯಲ್ಲಿ ಬಲಕೊಟ್ಟ ಈ ಜನತಾ ಶೃಂಗಸಭೆಗೆ ಇಡೀ ಖಂಡದಿಂದ ಸಾವಿರಾರು ಜನರು ಬಂದಿಳಿದಿದ್ದರು. 80 ಸಾವಿರಕ್ಕೂ ಹೆಚ್ಚು ಜನ ಮೂರು ಗಂಟೆಗಳ ಭಾರಿ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಆನಂತರ ಅರ್ಜೆಂಟಿನಾದ ಮಾಲ್‌ಡೆಲ್ ಪ್ಲಾಟಾದ 'ಜಾಗತಿಕ ಸ್ಟೇಡಿಯಂ'ನಲ್ಲಿ ನಡೆದ ಭಾರಿ ಸಭೆಯಲ್ಲಿ ಇನ್ನಷ್ಟು ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು. ಲ್ಯಾಟಿನ್ ಅಮೆರಿಕ ಖಂಡದ ತುಂಬಾ ಮತ್ತು ಕೆಲವು ದೇಶಗಳಲ್ಲಿ ಕೆಲಸ ಮಾಡುವ ಎಡ-ಪ್ರಗತಿಪರ ಜನ ಸಂಘಟನೆಗಳು ಈ 'ಶೃಂಗಸಭೆ'ಯನ್ನು ಆಯೋಜಿಸಿದ್ದವು FTAA ಗೆ ಬದಲಾಗಿ AIBA(Bolivarian Allteranation for the American-ಅಮೆರಿಕಕ್ಕೆ ಬೊಲಿವರ್ ಬದಲಿ)ವನ್ನು ರೂಪಿಸುವುದು ಮುಖ್ಯ ಉದ್ದೇಶವಾಗಿತ್ತು.

'ಅಮೆರಿಕ ಇಲ್ಲಿ ಬಡತನ ಹೆಚ್ಚಿಸಿದೆ'
- ಕಿರ್ಚನರ್

"ಈ (ಲ್ಯಾಟಿನ್ ಅಮೆರಿಕ) ಪ್ರದೇಶದಲ್ಲಿ ಅಮೆರಿಕದ ವಿದೇಶ ನೀತಿ ಬಡತನ ಮತ್ತು ಅಭದ್ರತೆಯನ್ನು ಹಲವು ದೇಶಗಳಲ್ಲಿ ಹೆಚ್ಚಿಸಿವೆ ಅಷ್ಟೆ"

- ಅಮೆರಿಕದ ಅಧ್ಯಕ್ಷರುಗಳ 4ನೇ ಶೃಂಗಸಭೆಯಲ್ಲಿ ಅರ್ಜೆಂಟಿನಾ ಅಧ್ಯಕ್ಷ ಕಿರ್ಚನರ್.

★ ★ ★


'ಸಮಾನರಾಗಿ ಆಲಿಸಿದೆವು'

ಇಲ್ಲಿ (ಶೃಂಗಸಭೆಯಲ್ಲಿ) ಅಧ್ಯಕ್ಷ ಬುಶ್ ಇತರ ಅಭಿಪ್ರಾಯಗಳನ್ನು ಆಲಿಸಿದರು. ತಮ್ಮ ಅಭಿಪ್ರಾಯ ಮಂಡಿಸಿದರು. ಅವರ ಉದ್ದೇಶ ಶೃಂಗಸಭೆಯಲ್ಲಿ ಯಜಮಾನಿಕೆ ನಡೆಸುವುದು ಆಗಿರಲಿಲ್ಲ. ಸಮಾನರಾಗಿ ಭಾಗವಹಿಸಿ ಆಲಿಸುವುದು ಅವರ ಉದ್ದೇಶವಾಗಿತ್ತು.

- ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹಾಗಾರ ಸ್ಟೀಫನ್ ಹ್ಯಾಡ್ಲಿಯು ಶೃಂಗಸಭೆಯ ನಂತರದ ಹೇಳಿಕೆಯಿಂದ(ದುರದೃಷ್ಟವಶಾತ್ ಅಮೆರಿಕದ ಸರ್ಕಾರದ ವಕ್ತಾರನಿಂದ ಈ ಹೇಳಿಕೆ ಬರಿಸುವುದು ಸುಲಭವಲ್ಲ!)

'ಚವೇಝ್ !..... ಚೆ ಚಿರಾಯುವಾಗಲಿ' ಎಂದ ಕ್ಯಾಸ್ಟ್ರೋ

ಈ ಭಾರಿ ಸಭೆಯಲ್ಲಿ ಸ್ಪಾನಿಷ್ ಮಾತನಾಡುವ ಇಡೀ ಖಂಡದಲ್ಲಿ ಜನಪ್ರಿಯರಾಗಿರುವ ಸಂಗೀತಗಾರರು, ಹಾಡುಗಾರರು ಅಲ್ಲದೆ ಪ್ರಮುಖ ಜನ ಚಳುವಳಿಗಳ ನಾಯಕರುಗಳು ಮಾತನಾಡಿದರು. ಸ್ವಾಭಾವಿಕವಾಗಿಯೇ ವೆನೆಜುವೆಲಾದ ಅಧ್ಯಕ್ಷ ಚವೇಝ್ ಪ್ರಮುಖ ಆಕರ್ಷಣೆಯ ಕೇಂದ್ರವಾಗಿದ್ದರು. ಮೂರು ಗಂಟೆಗಳ ರ್‍ಯಾಲಿಯನ್ನು ಹೊಸ ಲ್ಯಾಟಿನ್ ಅಮೆರಿಕದ .. 'ಟೆಲಿಸುದ್' ಮೂಲಕ ನೋಡಿ ಉತ್ತೇಜಿತರಾದ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಚವೇಝ್‌ಗೆ ಅಭಿನಂದಿಸುತ್ತಾ 'ಚವೇಝ್!.. ಚೇ ಚಿರಾಯುವಾಗಲಿ' ಎಂದು ಉದ್ಗರಿಸಿದರಂತೆ. ಚವೇಝ್ ಇದನ್ನು ತಮ್ಮ ಭಾಷಣದ ಆರಂಭದಲ್ಲಿ ಹೇಳಿದಾಗ ಇಡೀ ಜನಸ್ತೋಮದ ಹರ್ಷೋದ್ಗಾರ ಹವಾನದಲ್ಲಿದ್ದ ಕ್ಯಾಸ್ಟ್ರೋಗೆ ಕೇಳಿಸಿರಬೇಕು!



ಬಂಡವಾಳಶಾಹಿ ಸಮಾಧಿ

ಅಮೆರಿಕದ FTAA ಯನ್ನು ಸಮಾಧಿ ಮಾಡಿದ್ದೇವೆ. ಬಂಡವಾಳಶಾಹಿಯನ್ನು ಸಮಾಧಿ ಮಾಡಬೇಕಾಗಿದೆ. ಅದು ನಮ್ಮ ಮುಂದಿನ ಕೆಲಸ. ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಇನ್ನೂರು ವರ್ಷಗಳ ಹಿಂದೆ ಸೈಮನ್ ಬೊಲಿವರ್ ಆರಂಭಿಸಿದ ಮಹಾನ್ ಕಾರ್ಯದ ಮುಂದುವರಿಕೆ ಇದು. FTAA ಗೆ 'ಬೊಲಿವರ್ ಬದಲಿ' ರೂಪಿಸುವದು ನಮ್ಮ ಮುಂದಿರುವ ಆದ್ಯ ಕರ್ತವ್ಯ. Alba ಕಟ್ಟುವದು ಮೇಲಿಂದ ಅಲ್ಲ, ಅಧ್ಯಕ್ಷರುಗಳು ALBA ಕಟ್ಟುವದು ಅಲ್ಲ, ಅದನ್ನು ಕೆಳಗಿಂದ ಕಾರ್ಮಿಕರು, ರೈತರು, ಆದಿವಾಸಿಗಳು, ವಿದ್ಯಾರ್ಥಿಗಳು, ಕಲಾವಿದರು, ಸೈನಿಕರು ಕಟ್ಟಬೇಕಾಗಿದೆ. ಲ್ಯಾಟಿನ್ ಅಮೆರಿಕ ವ್ಯಾಪ್ತಿಯಾಗಿ ಎರಡನೇ ಸ್ವಾತಂತ್ರ್ಯ ಯುದ್ಧ ಸಾಗಬೇಕಾಗಿದೆ. ಅನಕ್ಷರತೆ, ಹಸಿವು, ಅನಾರೋಗ್ಯ ಹೋಗಲಾಡಿಸುವ ನಿಟ್ಟಿನಲ್ಲಿ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕಾಗಿದೆ - ಕೇವಲ ಎರಡು ದೇಶ (ವೆನೆಜುವೆಲಾ, ಕ್ಯೂಬಾ)ಗಳ ನಡುವೆ ಸಹಕಾರದಿಂದ ಅನಕ್ಷರತೆಯನ್ನು ವೆನೆಜುವೆಲಾದಲ್ಲಿ ಕೇವಲ ಎರಡು ವರ್ಷಗಳಲ್ಲಿ ಹೋಗಲಾಡಿಸಲಾಯಿತು. ಇನ್ನು ಎಲ್ಲಾ ದೇಶಗಳು ಸಂಪನ್ಮೂಲಗಳನ್ನು ಕ್ರೋಢೀಕರಿಸಿದರೆ ಯಾವುದು ಅಸಾಧ್ಯ ಕೆಲಸ. - ಇದು ಚವೇಝ್‌ರ ಸ್ಫೂರ್ತಿದಾಯಕ ಭಾಷಣದ ಸಾರಾಂಶವಾಗಿತ್ತು.

ಸಾಮ್ರಾಜ್ಯಶಾಹಿಯ ಅಂತ್ಯದ ಆರಂಭ

ಅಮೆರಿಕನ್ ಸಾಮ್ರಾಜ್ಯಶಾಹಿ 'ಬೊಲಿವರ್ ಕ್ರಾಂತಿ' ಯನ್ನು ಹತ್ತಿಕ್ಕಲು ಇನ್ನೂರು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಕ್ಯೂಬನ್ ಕ್ರಾಂತಿಯನ್ನು ಅಳಿಸಿ ಹಾಕಲು ದಶಕಗಳಿಂದ ಪ್ರಯತ್ನಿಸುತ್ತಿದೆ. ಆದರೆ ಸಫಲವಾಗಿಲ್ಲ. ಸಾಮ್ರಾಜ್ಯ ಶಾಹಿಯನ್ನು ಮುಗಿಸುವ ಕಾಲ ಬಂದಿದೆ. ಎಲ್ಲಾ ಸಾಮ್ರಾಜ್ಯಗಳು ಒಂದಲ್ಲ ಒಂದು ದಿನ ಮಣ್ಣುಮುಕ್ಕಲೇಬೇಕು. ಅಮೆರಿಕನ್ ಸಾಮ್ರಾಜ್ಯಶಾಹಿಯ ಅಂತ್ಯದ ಆರಂಭವಾಗಿದೆ ಎಂದು ಚವೇಝ್ ಘೋಷಿಸಿದರು. 'ದೃಢತೆ, ಹೆಚ್ಚು ಹೆಚ್ಚು ದೃಢತೆ - ತಾಳ್ಮೆ ಹೆಚ್ಚು ತಾಳ್ಮೆ ಕೆಲಸ, ಹೆಚ್ಚು ಕೆಲಸ; ಐಕ್ಯತೆ ಹೆಚ್ಚೆ ಹೆಚ್ಚು ಐಕ್ಯತೆ ಇದಕ್ಕಾಗಿ ಅಗತ್ಯ ಎಂದು ಚವೇಝ್ ಕರೆ ಕೊಟ್ಟರು.

'ಅಣ್ಣ ತಂಗಿ' - ಗೋಳೋಗೋಳು!

ಯಾವುದೇ ಒಂದು ಚಿತ್ರ ನಿರ್ಮಾಣದ ಹಿಂದೆ ಹಣ ಗಳಿಸುವ ಉದ್ದೇಶದೊಂದಿಗೆ ಮತ್ತೊಂದು ಉದ್ದೇಶವಿರುತ್ತದೆ. ಅದು ಪ್ರೇಕ್ಷಕರಿಗೆ ಮನರಂಜನೆ ನೀಡುವುದಾಗಿರಬಹುದು ಅಥವಾ ಒಂದು ಒಳ್ಳೆಯ ಸಂದೇಶ ನೀಡುವುದಾಗಿರಬಹುದು. ಆದರೆ ನಮ್ಮ ನಿರ್ದೇಶಕ ಸಾಯಿಪ್ರಕಾಶ್‌ರವರಿಗೆ ಇರುವುದು ಒಂದೇ ಉದ್ದೇಶ, ಅದು ಹೆಂಗಳೆಯರನ್ನು ಕಣ್ಣೀರ ಕೋಡಿಯಲ್ಲಿ ಮುಳುಗಿಸುವುದು!. ಅವರಿಗೆ ಯಾವುದೇ ಕಥೆಯೇ ಬೇಕಿಲ್ಲ! ತಂದೆ-ಮಗಳು, ತಾಯಿ-ಮಗಳು, ಹಿಂದೊಮ್ಮೆ ಅಣ್ಣ-ತಂಗಿ, ಈಗ ಮತೊಮ್ಮೆ ಅಣ್ಣ-ತಂಗಿಯರ ಸಂಬಂಧಗಳ ಕರುಣಾಜನಕ ಕಥೆ! ಇಂಥಹ ಎಲ್ಲಾ ಸಿನಿಮಾಗಳದ್ದೂ ಒಂದೇ ಕಥೆ. ಸಂತೋಷದಿಂದ ಕುಟುಂಬಕ್ಕೆ ಹೆಣ್ಣೊಬ್ಬಳಿಂದ ಶನಿಕಾಟ ಆರಂಭ! (ಅದು ಅತ್ತೆಯಾಗಿರಬಹುದು, ಅತ್ತಿಗೆಯಾಗಿರಬಹುದು, ಮಲತಾಯಿ ಹೀಗೆ... ಒಂದೊಂದು ಚಿತ್ರದಲ್ಲಿ ಒಬ್ಬೊಬ್ಬರು). ಕೊನೆಗೆ ತಿನ್ನಲೂ ಗತಿಯಿಲ್ಲದಂತಹ ಸ್ಥಿತಿ! ಬೀದಿಗೆ ಬೀಳುವ ಬದುಕು - ನೋಡುಗನ ಕರಳು ಕತ್ತರಿಸುವಂತಹ ವೇದನೆ,



ಕೊನೆಗೂ ಸುಖಾಂತ್ಯ ಕಾಣದೆ ಚಿತ್ರದ ಅಂತ್ಯ! ಇದು ಸಾಯಿಪ್ರಕಾಶ್‌ರ ಸ್ಟೈಲ್!

'ತವರಿಗೆ ಬಾ ತಂಗಿ' ಯ ದೊಡ್ಡ ಯಶಸ್ಸಿನಿಂದ ಉತ್ತೇಜಿತರಾದ ಸಾಯಿಪ್ರಕಾಶ್, ಅದೇ ಶಿವರಾಜ್‌ಕುಮಾರ್ ಮತ್ತು ರಾಧಿಕಳ ಕಾಂಬಿನೇಷನ್‌ನಲ್ಲಿ ಮತ್ತೊಮ್ಮೆ ಅಣ್ಣ-ತಂಗಿಯ ಸೆಂಟಿಮೆಂಟಿನಿಂದ ಪ್ರೇಕ್ಷಕರನ್ನು ಗೋಳಾಡಿಸಲು ಮತ್ತೊಮ್ಮೆ 'ಅಣ್ಣ-ತಂಗಿ' ಸಿನಿಮಾದೊಂದಿಗೆ ಹಾಜರಾಗಿದ್ದಾರೆ. ಬೆಳಿಗ್ಗೆದ್ದು ಬೇರೊಬ್ಬರ ಮುಖವನ್ನೂ ನೋಡದೆ ಅಣ್ಣ ತಂಗಿಯ ಮುಖವನ್ನು, ತಂಗಿ ಅಣ್ಣನ ಮುಖವನ್ನು ನೋಡಿಯೇ ಕಣ್ಣು ಬಿಡುವಷ್ಟು ಒಡನಾಟವಿರುವ ಅಣ್ಣ-ತಂಗಿ. ಇನ್ನು ಅವರ ಅನ್ಯೋನ್ಯತೆ ಎಂತಹದ್ದೆಂದು ಎಲ್ಲರೂ ಊಹಿಸಬಹುದಾದ್ದೇ! ಅವರದೇ ಸಿನಿಮಾಗಳ ರಿಪಿಟೇಷನ್! ತಂಗಿಯ ಮದುವೆ, ಒಳ್ಳೆಯ ಗಂಡ, ಆದರೆ ಗಂಡನ ಸೋದರರ ಮೋಸದಿಂದ ಬೀದಿಗೆ ಬೀಳುವ ತಂಗಿ! ಅಣ್ಣನ ಹೆಂಡತಿಗೆ ನಾದಿನಿಯ ಮೇಲೆ ದ್ವೇಷ, ಸಹಾಯ ಯಾಚಿಸಿ ಅಣ್ಣನ ಮನೆಗೆ ಬರುವ ತಂಗಿಯನ್ನು ಹೊರಗಟ್ಟುವ ಅತ್ತಿಗೆ. ತನ್ನ ಹೀನ ಸ್ಥಿತಿಗೆ ನೊಂದು, ತನ್ನ ಅಣ್ಣನೇ ತಂಗಿಯ ಪ್ರೀತಿಯ ಮೇಲೆ, ಅವಳ ಹೆಸರಿನಲ್ಲಿ ಕಟ್ಟಿಸಿದ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಅಣ್ಣನಿಗಾಗಿ ಕಾಯುವ ತಾಳ್ಮೆಯೂ ಆಕೆಗಿರದಿರುವುದು ವಿಪರ್ಯಾಸವೋ ಅಥವಾ ಸುಖಾಂತ್ಯಕ್ಕೆ ಅವಕಾಶವಿರಲೇಬಾರದೆಂಬ ಸಾಯಿಪ್ರಕಾಶರ ಕಠಿಣ ನಿರ್ಧಾರವೋ ತಿಳಿಯದು. ಆದರೆ ಅಣ್ಣ ಅವಳಿಗಾಗಿ ಹುಡುಕಾಡಿ, ಸಾವನ್ನಪ್ಪಿದ ತಂಗಿಯನ್ನು ಕಂಡು ತಾನು ಅವಳ ಜೊತೆಯಲ್ಲೇ ಸಾವನ್ನಪ್ಪುವುದರೊಂದಿಗೆ ಚಿತ್ರ ಅಂತ್ಯ. ಇದನ್ನು ಕಂಡು ಎಂತಹ ಕಲ್ಲು ಹೃದಯದವರೂ ಕರಗಿ ನೀರಾಗಿಬಿಡುವರು ಎಂದು ಸಾಯಿಪ್ರಕಾಶ ಭಾವಿಸಿದ್ದರೆ, ಅವರಂಥ ಮೂರ್ಖ ನಿರ್ದೇಶಕ ಮತ್ತೊಬ್ಬನಿಲ್ಲ. ಎಂಥಹ ಕೆಟ್ಟ ಕಥೆಗೂ ಸ್ವಲ್ಪವಾದರೂ ಸಹಜತೆ, ನೈಜತೆ ಎಂಬುದಿರಬೇಕಾಗುತ್ತದೆ. ಎಣೆಯಿಲ್ಲದ - ಕೊನೆಯಿಲ್ಲದ ವಾಸ್ತವತೆಯ ಹತ್ತಿರಕ್ಕೂ ಸುಳಿಯದ ಇಂತಹ ಸಿನಿಮಾಗಳನ್ನು ನೋಡಿ ಹಳೆ ಕಾಲದ ಅಜ್ಜ-ಅಜ್ಜಿಯರು ಕಣ್ಣೀರಡಬೇಕಷ್ಟೆ. ಉಳಿದವರಿಗೆ ತಲೆ ನೋವಿನ ಮಾತ್ರೆ ಬೇಕೇಬೇಕು!

ಈಗಾಗಲೇ ಹಲವಾರು ಇಂತಹದ್ದೇ ಚಿತ್ರಗಳನ್ನು ತೆಗೆದಿರುವ ಸಾಯಿಪ್ರಕಾಶ್ ಅವರ ಖಜಾನೆಯಲ್ಲಿ ಇಂತಹ ಸರಕುಗಳು ಇನ್ನೆಷ್ಟಿವೆಯೋ! ಇನ್ನಾದರೂ ಅವರು ಕನ್ನಡ ಪ್ರೇಕ್ಷಕರನ್ನು ಗೋಳು ಹೊಯ್ದುಕೊಳ್ಳುವುದನ್ನು ಬಿಡಬೇಕು. 'ನಾ ನಿಮ್ಮ ಬಿಡಲಾರೆ' ಎಂದು ಅವರೇನಾದರೂ ನಿರ್ಧಾರ ಮಾಡಿದ್ದರೆ, ಈ ಶನಿಪ್ರಕಾಶನಿಂದ ಕನ್ನಡ ಪ್ರೇಕ್ಷಕರನ್ನು ಆ ಶನಿಯೇ ಕಾಪಾಡಬೇಕು.

- ನಕುಲ

... ಚಿಮ್ಮಿ ಬರುತ್ತಿರುವ ವಿದ್ಯಾರ್ಥಿ ಚಳುವಳಿ

ಪುಟ 7ರಿಂದ

ಚರ್ಚೆಯ ಪ್ರಮುಖ ಅಂಶವಾಗಿತ್ತು. ಕೇಂದ್ರ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ (GDP)ದ ಶೇ. 6 ರಷ್ಟನ್ನು ಶಿಕ್ಷಣಕ್ಕೆ ನೀಡಬೇಕೆಂಬ ಅಂಶವಿದೆ. ದೇಶದ ಯಾವುದೇ ವಿದ್ಯಾರ್ಥಿಗೆ ಆತ ಅಥವಾ ಆಕೆಯ ಬಡತನದ ಕಾರಣದಿಂದ ಯಾವುದೇ ಶೈಕ್ಷಣಿಕ ಅವಕಾಶದಿಂದ ವಂಚನೆಯಾಗಬಾರದೆಂಬ ಅಂಶ ಇದೆ. ಕೇಂದ್ರೀಯ ತೆರಿಗೆಗಳ ಮೇಲೆ ಶೇ 2 ರಷ್ಟು ಶಿಕ್ಷಣ ಕರ ಸಂಗ್ರಹಿಸಿ ಅದನ್ನು ಶಾಲಾ ಮಕ್ಕಳ ಬಿಸಿಯೂಟದ ಯೋಜನೆಗೆ ನೀಡುತ್ತಿರುವುದು ಬಿಟ್ಟರೆ ಈ ವಿಚಾರದಲ್ಲಿ ಯಾವ ಗಮನಾರ್ಹ ಪ್ರಗತಿಯೂ ಆಗಿಲ್ಲ. ರಕ್ಷಣಾ ಬಜೆಟ್ ಹೆಚ್ಚಿಸುವ ಸರ್ಕಾರಕ್ಕೆ ಶಿಕ್ಷಣವೂ ಸಹ ದೇಶ ರಕ್ಷಣೆಯ ಒಂದು ಪ್ರಬಲ ಆಯುಧ ಎಂಬುದು 'ಹೊಳೆಯುತ್ತಿಲ್ಲ'. ವಿದ್ಯಾರ್ಥಿ ಚಳುವಳಿಯ ತೀವ್ರ ಒತ್ತಡ - ಹೋರಾಟಗಳ ನಂತರ ಸಹ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನೀತಿ - ಶುಲ್ಕ ನೀತಿ ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನವನ್ನು ತಾರದೇ ವಿಳಂಬ ತಂತ್ರ ಅನುಸರಿಸಲಾಗುತ್ತಿದೆ.

ವಿದ್ಯಾರ್ಥಿ ಸಮುದಾಯ ನಡುವಿನ ಪ್ರವೃತ್ತಿಗಳು

ಶೈಕ್ಷಣಿಕವಾಗಿ - ಔದ್ಯೋಗಿಕವಾಗಿ ದುರ್ಲಭವಾಗುತ್ತಿರುವ ಅವಕಾಶಗಳು - ಜಾಗತೀಕರಣದ ಸಿದ್ಧಾಂತಗಳು, ಶಿಕ್ಷಣದ ವ್ಯಾಪಾರೀಕರಣ-ಇವೆಲ್ಲವೂ ಸೇರಿ ಒಟ್ಟು ವಿದ್ಯಾರ್ಥಿ ಸಮುದಾಯದ ಚಿಂತನೆಗಳ ಮೇಲೆ ಗಾಢವಾದ ಪ್ರಭಾವ ಬೀರಿವೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ವ್ಯಕ್ತಿವಾದ - ಸ್ವಯಂ ಕೇಂದ್ರಿತ ಚಿಂತನೆ- ಸ್ವಾರ್ಥ - ಅನಾರೋಗ್ಯಕರ ಪೈಪೋಟಿ ಇಂತಹ ಪ್ರವೃತ್ತಿಗಳು ತೀವ್ರಗೊಳ್ಳುತ್ತಿವೆ. ಬಡ ಮತ್ತು ಮಧ್ಯಮ ವರ್ಗಕ್ಕೆ ಉನ್ನತ ಶಿಕ್ಷಣ-ವೃತ್ತಿ ಶಿಕ್ಷಣ ಕೈಗೆಟುಕದ ಗಗನ ಕಸುಮಗಳಾಗುತ್ತಿದ್ದರೆ, ಈ ವಿಭಾಗಗಳಲ್ಲಿ ಹೇಗೋ ಅವಕಾಶ ಪಡೆದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ದೊಡ್ಡ ಸಾಲಗಾರರಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಪಾರ್ಟ್ ಟೈಂ ಉದ್ಯೋಗಿಗಳಾಗಿ ಬದಲಾಗುತ್ತಿದ್ದಾರೆ. ಶಿಕ್ಷಣದ ವ್ಯಾಪಾರೀಕರಣ ಖಾಸಗೀಕರಣದ ಪ್ರವೃತ್ತಿಗಳು ತೀವ್ರವಾದಂತೆ ಈ ಪ್ರವೃತ್ತಿಯ ವಿರುದ್ಧದ ಅತೃಪ್ತಿ ಹಾಗೂ ಆಕ್ರೋಶವು ಮಡುಗಟ್ಟುತ್ತಿದೆ. ಹಲವೆಡೆ ಜಾತಿವಾದಿ - ಕೋಮುವಾದಿ ಶಕ್ತಿಗಳು ಈ ಅತೃಪ್ತಿಯ ಲಾಭ ಹೊಡೆಯಲು ಸಂಚು ಮಾಡಿ ಮಧ್ಯ ಪ್ರವೇಶ ಮಾಡಿದ್ದಾರೆ. ಕೆಲವೆಡೆ ವಿದ್ಯಾರ್ಥಿಗಳು 'ರಾಜಕೀಯ ರಹಿತ ವಿದ್ಯಾರ್ಥಿ ವೇದಿಕೆ' ಎಂಬ ಆಳುವ ವರ್ಗದ ರಾಜಕೀಯ ಹಿತಾಸಕ್ತಿಗಳ ರಕ್ಷಣೆಗಾಗಿ ಹುಟ್ಟು ಹಾಕಲಾಗಿರುವ ವಾದಗಳಿಗೆ ಬಲಿಯಾಗಿ ಪ್ರಗತಿಪರ ವಿದ್ಯಾರ್ಥಿ ಚಳುವಳಿಯ ಜೊತೆ ಸೇರಲು ನಿರಾಕರಿಸುತ್ತಾ ಪ್ರತ್ಯೇಕವಾಗಿ ಉಳಿದಿದ್ದಾರೆ.

ಎಸ್ಎಫ್ಐನ ವೈಜ್ಞಾನಿಕ ಜನಪರ ನಿಲುವು ಚಿಮ್ಮಿ ಬರುತ್ತಿರುವ ಪ್ರಚಂಡ ಚಳುವಳಿ

ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಎಸ್ಎಫ್ಐ ನೇತೃತ್ವದ ಚಳುವಳಿ ಮುನ್ನಡೆ ದಾಖಲಿಸುತ್ತಿದೆ. ಶೈಕ್ಷಣಿಕ ಸಮಸ್ಯೆಗಳ ತೀವ್ರತೆ ಎಷ್ಟಿದೆಯೆಂದರೆ ವೃತ್ತಿ ಶಿಕ್ಷಣದ ಪ್ರಶ್ನೆಯಲ್ಲಿ ಕೇರಳ-ಕರ್ನಾಟಕದಂತಹ ರಾಜ್ಯಗಳಲ್ಲಿ ಹತಾಶೆಗೊಂಡ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆಯ ಹಾದಿ ಹಿಡಿದರು. ಇದು ಒಂದು ಸಮೂಹ ಸನ್ನಿಯಂತೆ ಎಲ್ಲೆಡೆ ವ್ಯಾಪಿಸುತ್ತದೆಯೋ ಎಂಬ ಆತಂಕಕ್ಕೆ ಪರಿಹಾರ ಒದಗಿಸಿದ್ದು ಹಲವು ರಾಜ್ಯಗಳಲ್ಲಿ ವಿದ್ಯಾರ್ಥಿ ಸಮುದಾಯ ಆತ್ಮಹತ್ಯೆಗೆ ಮುಂದಾಗದಂತೆ ಭವಿಷ್ಯದ ಬಗೆಗೆ ಆಶಾಕಿರಣವಾದದ್ದೂ ಸಹ ಎಸ್ಎಫ್ಐ ಸಂಘಟನೆ.

ಕೇರಳ ರಾಜ್ಯದಲ್ಲಿ ಎಸ್ಎಫ್ಐ ನೇತೃತ್ವದ ಪ್ರಗತಿಪರ ಚಳುವಳಿಯನ್ನು ಹತ್ತಿಕ್ಕಲು ಸರ್ಕಾರ ಕೈ ಹಾಕದ ದಮನಕಾರಿ ಕ್ರಮಗಳೇ ಇಲ್ಲ. ಲಾಠಿ ಪ್ರಹಾರ ನಡೆಸಿ ವಿದ್ಯಾರ್ಥಿ ಮುಖಂಡರ ಕೈಕಾಲು ಮುರಿದರು. ಸುಮಾರು ಆರು ನೂರು ಜನರ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸಿ ಜೈಲಿಗಟ್ಟಿದರು. ಜಲಫಿರಂಗಿ ಬಳಸಿ ಧಾಳಿ ಮಾಡಿದರು. ಕೊನೆಗೆ ವಿದ್ಯಾರ್ಥಿಗಳ ಮೇಲೆ ಪೊಲೀಸರಿಂದ ಗ್ರೇನೆಡ್ ಧಾಳಿಯೂ ನಡೆಯಿತು.

ಎಸ್ಎಫ್ಐನ ಕೇರಳ ರಾಜ್ಯ ಸಮಿತಿಯ ನೂತನ ಅಧ್ಯಕ್ಷ ಕಾಂ.ಸಿಂಧು ಜಾಯ್ ರವರು ಈ ಗ್ರೇನೆಡ್ ದಾಳಿಯಿಂದ ಗಾಯಗೊಂಡವರು ಸುಮಾರು ನಾಲ್ಕು ತಿಂಗಳಾದರೂ ಇನ್ನೂ ಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಕೈಕಾಲುಗಳಲ್ಲಿನ ಗಾಯದ ಸಮೇತವೇ ಊರುಗೋಲುಗಳ ಸಹಾಯದೊಂದಿಗೆ ಅವರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ತಮಿಳುನಾಡು-ಆಂಧ್ರಪ್ರದೇಶಗಳಲ್ಲಿಯೂ ಭುಗಿಲೆದ್ದ ಚಳುವಳಿಯಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡರು. ಕರ್ನಾಟಕ ರಾಜ್ಯದಲ್ಲಿ ನಡೆದ ಹೋರಾಟಗಳು ಇನ್ನೂ ಜನಮನದಲ್ಲಿ ಹಸಿರಾಗಿದೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬೀದಿಗೆ ಧುಮುಕಿದ ವಿದ್ಯಾರ್ಥಿಗಳು ಅದರಲ್ಲಿಯೂ ವಿದ್ಯಾರ್ಥಿನಿಯರು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸುಲಿಗೆಕೋರ ನೀತಿ-ಸರ್ಕಾರಗಳ ಶಾಮೀಲುಕೋರತನವನ್ನು ಪ್ರತಿಭಟಿಸಿದರು. ನ್ಯಾಯಾಲಯದ ತೀರ್ಪಿನ ಪರಿಣಾಮವಾಗಿ ಮಣ್ಣುಪಾಲಾಗಿದ್ದ ಸಾಮಾಜಿಕ ನ್ಯಾಯವನ್ನು ರಕ್ಷಿಸುವ ನಿಟ್ಟಿನಲ್ಲಿ ಈ ಚಳುವಳಿ ಸಾಧಿಸಿದ್ದು ಅಪಾರ. ಮಹಾರಾಷ್ಟ್ರದಲ್ಲಿಯೂ ಎಸ್ಎಫ್ಐ ನೇತೃತ್ವದ ಚಳುವಳಿ ದೊಡ್ಡ ಸಾಧನೆ ಮಾಡಿತು.

ಕರ್ನಾಟಕ ಸೇರಿದಂತೆ ಈ ರಾಜ್ಯಗಳಲ್ಲಿ ಅಗಾಧ ಪ್ರಮಾಣದ ಶುಲ್ಕ ಕಡಿತ, ಇಲ್ಲವಾಗಿದ್ದ ಉಚಿತ ಸೀಟು ಮತ್ತೆ ಜಾರಿ, ಮುಂತಾದವುಗಳ ಮೂಲಕ ನ್ಯಾಯಾಲಯದ ತೀರ್ಪಿಗೆ ಜನತಾ ನ್ಯಾಯಾಲಯ-ವಿದ್ಯಾರ್ಥಿ ನ್ಯಾಯಾಲಯದ ಮೂಲಕ ತಡೆಯಾಜ್ಞೆ ನೀಡಿರುವುದು ಒಂದು ಗಮನಾರ್ಹ ಸಾಧನೆ.

ರಾಜಸ್ಥಾನದಲ್ಲಿ ಅಪೂರ್ವ ರೈತ ಚಳುವಳಿಯಲ್ಲಿ ರೈತರ ಹೆಗಲಿಗೆ ಹೆಗಲು ಕೊಟ್ಟು ಬೀದಿಗಿಳಿದ ವಿದ್ಯಾರ್ಥಿಗಳ ಅನುಭವ, ಪಶ್ಚಿಮ ಬಂಗಾಳ, ತ್ರಿಪುರಾಗಳಲ್ಲಿ ಭಯೋತ್ಪಾದಕ, ಪ್ರತಿಗಾಮಿ ಶಕ್ತಿಗಳ ವಿರುದ್ಧ ಎಸ್ಎಫ್ಐ ನಡೆಸಿದ ತೀವ್ರ ಆಂದೋಲನ, ಜವಹರಲಾಲ ನೆಹರೂ ವಿಶ್ವವಿದ್ಯಾಲಯದಲ್ಲಿ ಹಾಗೂ ರಾಷ್ಟ್ರವ್ಯಾಪಿಯಾಗಿ ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಎಸ್ಎಫ್ಐ ನೇತೃತ್ವದಲ್ಲಿ ನಡೆದ (ಹಲವು ಯಶಸ್ವಿ) ಆಂದೋಲನಗಳು, ರಾಷ್ಟ್ರವ್ಯಾಪಿ ಎಸ್ಎಫ್ಐ ನಡೆಸಿದ ಸಾಮ್ರಾಜ್ಯ ಶಾಹಿ ವಿರೋಧಿ ಚಳುವಳಿಗಳ ಅನುಭವ ಎಲ್ಲವೂ ಒಂದೊಂದು ಬಗೆಯ ವಿಶಿಷ್ಟ ಅನುಭವಗಳೇ ಆಗಿದ್ದವು. ಅಖಿಲ ಭಾರತ ವಿದ್ಯಾರ್ಥಿನಿಯರ ಉಪಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಸೇರಿದಂತೆ ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಲಿಂಗಾಧಾರಿತ ಅಸಮಾನತೆಯ ವಿರುದ್ಧ ಚಳುವಳಿಗಳ ಅನುಭವಗಳೂ ವಿಶಿಷ್ಟವಾಗಿದ್ದವು.

ಡಿಸೆಂಬರ್ 11, 2003, ಆಗಸ್ಟ್ 24, 2005 ಇತ್ಯಾದಿಯಾಗಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರಕ್ಕೆ ರಾಷ್ಟ್ರಾದ್ಯಂತ ಸಿಕ್ಕ ಅಮೋಘ ಪ್ರತಿಕ್ರಿಯೆ - ಚಳುವಳಿಯ ಅನುಭವಗಳ ಕುರಿತು ಸಹ ಎಸ್ಎಫ್ಐನ ಅಖಿಲ ಭಾರತ ಸಮ್ಮೇಳನ ಚರ್ಚಿಸಿತು. ರಾಜಸ್ಥಾನ, ಪಂಜಾಬ್, ಹರ್ಯಾಣ, ಉತ್ತರಪ್ರದೇಶಗಳಲ್ಲಿ ಸಾಮಾನ್ಯ ಶಿಕ್ಷಣದ ಶುಲ್ಕ ಏರಿಕೆ ವಿರುದ್ಧ ನಡೆದ ಚಳುವಳಿಗಳ ಅನುಭವವನ್ನು ಸಹ ಸಮ್ಮೇಳನವು ಚರ್ಚಿಸಿತು.

ಸದಸ್ಯತ್ವದಲ್ಲಿ ಗಣನೀಯ ಏರಿಕೆ

ಇಂತಹ ಎಲ್ಲ ಧೀಮಂತ ಚಳುವಳಿಗಳ ಫಲವಾಗಿ ಕಳೆದ ಸಮ್ಮೇಳನದ ಸಂದರ್ಭದಲ್ಲಿ 28,69,918 ಇದ್ದ ಸದಸ್ಯತ್ವ ಪ್ರಸಕ್ತ ವರ್ಷದಲ್ಲಿ 37 ಲಕ್ಷದ ಗಡಿಯನ್ನು ದಾಟುವ ಎಲ್ಲಾ ಲಕ್ಷಣವನ್ನು ತೋರಿಸಿದೆ. ಕರ್ನಾಟಕದಲ್ಲಿ ಇದೇ ಬೆಳವಣಿಗೆ ಪ್ರವೃತ್ತಿಯ ಭಾಗವಾಗಿ ಪ್ರಸಕ್ತ ವರ್ಷದಲ್ಲಿ ಇದುವರೆಗಿನ ಗರಿಷ್ಟ ಸದಸ್ಯತ್ವ (ಹತ್ತಿರ ಹತ್ತಿರ ಒಂದು ಲಕ್ಷ) ದಾಖಲಿಸುವ ದಾರಿಯಲ್ಲಿ ಎಸ್ಎಫ್ಐ ಮುನ್ನಡೆದಿದೆ.

ವಿವಿಧ ಸಂಘಟನಾತ್ಮಕ ಪ್ರಶ್ನೆಗಳನ್ನು ಚರ್ಚಿಸಿರುವ ಸಮ್ಮೇಳನ ಶಿಕ್ಷಣ ರಂಗದ ಮೇಲಿನ ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ತೀವ್ರ ಆಂದೋಲನ ರೂಪಿಸಲು, ಸದಸ್ಯತ್ವವನ್ನು ವಿಸ್ತರಿಸಿ ಕ್ರಮಬದ್ಧಗೊಳಿಸಲು, ಜಾತಿ ದಮನ, ಲಿಂಗತಾರತಮ್ಯ, ಕೋಮುವಾದಂತಹ ಸಾಮಾಜಿಕ ಸಮಸ್ಯೆಗಳ ವಿರುದ್ಧ ಸಾಮಾಜಿಕ ಆಂದೋಲನ ಕೈಗೊಳ್ಳಲು ಹಾಗೂ ಸೈದ್ಧಾಂತಿಕ - ರಾಜಕೀಯವಾಗಿ ಸನ್ನದ್ಧರಾದ ಕಾರ್ಯಕರ್ತರ ಮೂಲಕ ಸಂಘಟನೆಯನ್ನು ಬಲಪಡಿಸಲು ನಿರ್ಣಯ ಕೈಗೊಂಡಿದೆ.

ವಿವಿಧ ರಾಜ್ಯಗಳ ವಿದ್ಯಾರ್ಥಿ ಚಳುವಳಿಯಲ್ಲಿ ಪಶ್ಚಿಮ ಬಂಗಾಳ - ಕೇರಳ-ತ್ರಿಪುರಾ-ಆಂಧ್ರದಂತಹ ಬಲಿಷ್ಟ ವಿದ್ಯಾರ್ಥಿ ಚಳುವಳಿಯ ನಂತರದ 'ಬೆಳೆಯುತ್ತಿರುವ ರಾಜ್ಯ'ಗಳ ಪಟ್ಟಿಯಲ್ಲಿ ಕರ್ನಾಟಕ ರಾಜ್ಯ ಚಳುವಳಿಯನ್ನು ಸಮ್ಮೇಳನವು ಹೆಸರಿಸಿದೆ. ಇದು ರಾಜ್ಯದಲ್ಲಿ ಬಲಗೊಳ್ಳುತ್ತಿರುವ ವಿದ್ಯಾರ್ಥಿ ಚಳುವಳಿಗೆ ದೊರೆತ ಗೌರವವೂ ಆಗಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH